# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಜೂನ್ 3 ಮಂಗಳವಾರ 2025

ಸಂಪುಟ: 46 | ಸಂಚಿಕೆ: 48 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಒಳಪುಟಗಳಲ್ಲಿ

ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಸ್ತಾಕ್, ದೀಪಾ ಭಾಸ್ತಿ ಅವರಿಗೆ ರಾಜ್ಯ ಸರ್ಕಾರದಿಂದ ತಲಾ 10 ಲಕ್ಷ ರೂ. ಪುರಸ್ಕಾರ ಪುಟ–3

ಜಯಪುರ ಬಳಿ ಪತ್ತೆಯಾದ ಅರೆಬೆಂದ ವ್ಯಕ್ತಿ ದೇಹದ ರಹಸ್ಯ ಬಯಲು ಪುಟ–9

# ಮನೆಗೇ ಆರೋಗ್ಯ ಭಾಗ್ಯ

## ರಾಜ್ಯಾದ್ಯಂತ ಇನ್ನು ಉಚಿತ ವೈದ್ಯಕೀಯ ಸೇವೆ

ಬೆಂಗಳೂರು,ಜೂ.2–ರಾಜ್ಯ ಸರ್ಕಾರ 'ಗೃಹ ಆರೋಗ್ಯ' ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಣೆ ಮಾಡಿದ್ದು, ಇನ್ನು ಮುಂದೆ ನಿಮ್ಮ ಮನೆ ಬಾಗಿಲಿನಲ್ಲೇ ಉಚಿತ ಆರೋಗ್ಯ ಸೇವೆ ಒದಗಿಸುತ್ತಿದೆ.



ಗೃಹ ಆರೋಗ್ಯ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 30 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ 14 ಸಾಂಕ್ರಾಮಿಕವಲ್ಲದ ಕಾಯಿಲೆಗಳಿಗೆ (ಎನ್‌ಸಿಡಿ) ತಪಾಸಣೆ ಮತ್ತು ನಿರ್ವಹಣೆ ಮಾಡುವ ಮೂಲಕ ತೊಡಕುಗಳು ಮತ್ತು ಅಕಾಲಿಕ ಮರಣಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಲಾಗಿದೆ.

ಮನೆ ಬಾಗಿಲಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚಿ ಔಷಧ ವಿತರಿಸುವ ಈ ಯೋಜನೆಯನ್ನು ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿತ್ತು. ಈ ಯೋಜನೆಗೆ 2024ರ ಅಕ್ಟೋಬರ್ 24ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತವಾಗಿ ಚಾಲನೆ ನೀಡಿದ್ದರು. ▶ 6ನೇ ಪುಟಕ್ಕೆ

### ಅಸಾಂಕ್ರಾಮಿಕ ರೋಗಗಳ ತಪಾಸಣೆ

ವಿಕಾಸಸೌಧದಲ್ಲಿ ಗೃಹ ಆರೋಗ್ಯ ಯೋಜನೆ ಅನುಷ್ಠಾನ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಗೃಹ ಆರೋಗ್ಯ ಯೋಜನೆ ರಾಜ್ಯಾದ್ಯಂತ ವಿಸ್ತರಣೆಯಾಗುತ್ತಿದ್ದು, ಯೋಜನೆಯಡಿ 14 ಅಸಾಂಕ್ರಾಮಿಕ ರೋಗಗಳ ತಪಾಸಣೆ ಕೈಗೆತ್ತಿಕೊಳ್ಳಲಾಗಿದೆ ಎಂದರು.



ಅಸಾಂಕ್ರಾಮಿಕ ರೋಗಗಳು ಜನರ ಜೀವಕ್ಕೆ ಅಪಾಯ ತಂದೊಡ್ಡಿವೆ. ಖಾಸಗಿ ಆರೋಗ್ಯ ವಲಯದಲ್ಲಿ ಚಿಕಿತ್ಸೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಆದರೆ ಅಸಾಂಕ್ರಾಮಿಕ ರೋಗಗಳನ್ನು ಮುಂಚಿತವಾಗಿಯೇ ತಡೆಗಟ್ಟುವುದು ಮುಖ್ಯ. ಈ ಕಾರ್ಯವನ್ನು ಸರ್ಕಾರವೇ ಮಾಡಬೇಕೇ ಹೊರತು ಬೇರೆ ಯಾರೂ ಆಸಕ್ತಿ ತೋರುವುದಿಲ್ಲ. ಹೀಗಾಗಿ ಒಂದು ಜವಾಬ್ದಾರಿಯುತ ಸರ್ಕಾರವಾಗಿ ಆರೋಗ್ಯ ಇಲಾಖೆಯಿಂದ ಅಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವತ್ತ ▶ 6ನೇ ಪುಟಕ್ಕೆ

# ಚೆನ್ನೈ–ಬೆಂಗಳೂರು–ಮೈಸೂರು ಬುಲೆಟ್ ಟ್ರೈನ್ ಯೋಜನೆಗೆ ತ್ವರಿತಗತಿಯಲ್ಲಿ ಭೂಸ್ವಾಧೀನ

## ಗಂಟೆಗೆ 350 ಕಿ.ಮೀ. ವೇಗದ ಈ ರೈಲಿಗೆ ಪ್ರತ್ಯೇಕ ಹಳಿ ಮಾರ್ಗ ನಿರ್ಮಾಣ

ಬೆಂಗಳೂರು, ಜೂ. 2(ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ಅವರ ಆದೇಶದ ಮೇರೆಗೆ ಚೆನ್ನೈ–ಬೆಂಗಳೂರು–ಮೈಸೂರು



(ಸಿಬಿಎಂ) ಬುಲೆಟ್ ಟ್ರೈನ್ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ತ್ವರಿತ ಗತಿಯಲ್ಲಿ ನಡೆದಿದೆ ಎಂದು ರಾಷ್ಟ್ರೀಯ ಹೈಸ್ಪೀಡ್ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ನಿಸಾಂತ್ ಸಿಂಘಾಲ್ ತಿಳಿಸಿದ್ದಾರೆ. ▶ 6ನೇ ಪುಟಕ್ಕೆ

ಉದ್ದೇಶಿತ ಚೆನ್ನೈ–ಬೆಂಗಳೂರು–ಮೈಸೂರು ಹೈಸ್ಪೀಡ್ ರೈಲು ಮಾರ್ಗ ಯೋಜನೆ 435 ಕಿ.ಮೀ. ಉದ್ದದ ಮಾರ್ಗವಾಗಿದ್ದು, ತಮಿಳುನಾಡು ಮತ್ತು ಕರ್ನಾಟಕದ ಚೆನ್ನೈ, ಪೂನಂಪಲ್ಲಿ, ಅರಕ್ಕೋಣಂ, ಚಿತ್ತೂರು, ಬಂಗಾರಪೇಟೆ ಸೇರಿದಂತೆ 9 ಪ್ರಮುಖ ನಿಲ್ದಾಣಗಳನ್ನು ಸಂಪರ್ಕಿಸಲಿದ್ದು, ಯೋಜನಾ ವೆಚ್ಚ ಇನ್ನೂ ಅಂತಿಮಗೊಂಡಿಲ್ಲ. ಅಲೈನ್ಮೆಂಟ್ ಡ್ರಾಯಿಂಗ್ ಕೆಲಸ ಅಂತಿಮ ಹಂತದಲ್ಲಿದ್ದು, ವಿವರವಾದ ಯೋಜನಾ ವರದಿ ಶೀಘ್ರದಲ್ಲೇ ಸಿದ್ಧವಾಗಲಿದೆ ಎಂದು ಮೂಲಗಳು ತಿಳಿಸಿವೆ.

## ಇಂದು ಐಪಿಎಲ್ 18ನೇ ಆವೃತ್ತಿ ಫೈನಲ್

# ಈ ಸಲ ಕಪ್ ನಮ್ದೆ ಆರ್‌ಸಿಬಿ ಫ್ಯಾನ್ಸ್ ಭಲ್ಲೇ...ಭಲ್ಲೇ... ಬಿಟ್ಟೇವಾ... ಪಿಬಿಕೆಎಸ್




ಪಂದ್ಯ ಆರಂಭ: ರಾತ್ರಿ 7.30
ಸ್ಥಳ: ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಹಮದಾಬಾದ್, ಜೂ.2–ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಟೂರ್ನಿ ಇಂಡಿಯನ್ ಪ್ರೀಮಿಯರ್ ಲೀಗ್‌ನ 18ನೇ ಆವೃತ್ತಿಯು ಅಂತಿಮ ಘಟ್ಟ ತಲುಪಿದ್ದು, ನಾಳೆ (ಜೂ.3) ನಡೆಯುವ ಫೈನಲ್ ಪಂದ್ಯಕ್ಕೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಸಜ್ಜಾಗಿದೆ.



ನಾಳೆ ಸಂಜೆ 7.30ಕ್ಕೆ ಫೈನಲ್ ಪಂದ್ಯ ಆರಂಭವಾಗಲಿದ್ದು, ರಜತ್ ಪಾಟೀದಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿದ್ದು, ಚೊಚ್ಚಲ ಟ್ರೋಫಿಗಾಗಿ ಪೈಪೋಟಿ ನಡೆಸಲಿವೆ. ಅಲ್ಲದೇ 2016ರ ನಂತರ ಮೊದಲ ಬಾರಿ, ಇದುವರೆಗೂ ಐಪಿಎಲ್‌ನಲ್ಲಿ ಒಮ್ಮೆಯೂ ಕಪ್ ಗೆಲ್ಲದ ಎರಡು ತಂಡಗಳು ಫೈನಲ್ ತಲುಪಿದ್ದು, ಯಾವ ತಂಡ ಗೆದ್ದರೂ ಇದೇ ಮೊದಲ ಬಾರಿಗೆ ಕಪ್ ಎತ್ತಿ ಹಿಡಿಯುವ ಅವಕಾಶ ಪಡೆಯಲಿವೆ. ಪಂದ್ಯ ಆರಂಭಕ್ಕೆ ಈಗಾಗಲೇ ಕ್ಷಣಗಣನೆ ಆರಂಭವಾಗಿದ್ದು, ಪಂದ್ಯ ಕಣ್ತುಂಬಿಕೊಳ್ಳಲು ಎರಡೂ ತಂಡಗಳ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಮೋದಿ ಕ್ರೀಡಾಂಗಣದಲ್ಲಿ ಸಾವಿರಾರು ಮಂದಿ ಆರ್‌ಸಿಬಿ ಅಭಿಮಾನಿಗಳು ವಿರಾಟ್ ಅವರ ಮೇಲಿನ ಅಭಿಮಾನಕ್ಕೆ 18ನೇ ಸಂಖ್ಯೆಯ ಜೆರ್ಸಿ ತೊಟ್ಟು ಸಾಗರೋಪಾದಿಯಲ್ಲಿ ಸೇರಿ ತಮ್ಮ ನೆಚ್ಚಿನ ತಂಡವನ್ನು ಹುರಿದುಂಬಿಸುವ ನಿರೀಕ್ಷೆಯಿದೆ. ತಂಡದಲ್ಲಿ ತಮ್ಮ ಉಪಸ್ಥಿತಿ ಮಾತ್ರವಲ್ಲದೆ, ವೈಯಕ್ತಿಕ ಅತ್ಯುತ್ತಮ ಪ್ರದರ್ಶನದ ಮೂಲಕವೂ ಆಸರೆಯಾಗಿರುವ ಕೊಹ್ಲಿ, ಐಪಿಎಲ್ ಫೈನಲ್ ತಲುಪಿರುವುದು ಇದು ನಾಲ್ಕನೇ ಬಾರಿ.

**ಸಮಾರೋಪ ಸಮಾರಂಭ:** ಪಂದ್ಯಕ್ಕೂ ಮುನ್ನಾ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸಂಜೆ 6 ಗಂಟೆಗೆ ವರ್ಣರಂಜಿತ ಸಮಾರೋಪ ಸಮಾರಂಭ ನಡೆಯಲಿದ್ದು, ಅನೇಕ ಸೆಲೆಬ್ರೆಟಿಗಳು ಪ್ರದರ್ಶನ ನೀಡಲಿದ್ದಾರೆ. ▶ 6ನೇ ಪುಟಕ್ಕೆ

### ರಾಯಲ್ ಚಾಲೆಂಜರ್ಸ್ ಸಂಭಾವ್ಯ ತಂಡ

ರಜತ್ ಪಾಟಿದಾರ್(ನಾಯಕ), ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಲಿವಿಂಗ್‌ಸ್ಟನ್, ಕೃಣಾಲ್ ಪಾಂಡ್ಯ, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೋಷ್ ಹೇಜಲ್‌ವುಡ್, ಸುಯಾಶ್ ಶರ್ಮ, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ಯಶ್ ದಯಾಳ್.

### ಪಂಜಾಬ್ ಕಿಂಗ್ಸ್ ಸಂಭಾವ್ಯ ತಂಡ

ಶ್ರೇಯಸ್ ಅಯ್ಯರ್ (ನಾಯಕ), ನೇಹಲ್ ವಧೇರಾ, ಜೋಶ್ ಇಂಗ್ಲಿಸ್, ಪ್ರಭ್‌ಸಿಮ್ರನ್, ಶಶಾಂಕ್ ಸಿಂಗ್, ಮಾರ್ಕಸ್ ಸ್ಟೋಯ್ನಿಸ್, ಹರ್‌ಪ್ರೀತ್ ಬ್ರಾರ್, ಅಜ್ಮತುಲ್ಲಾ ಓಮರ್ಜಾಯಿ, ಪ್ರಿಯಾಂಶ್ ಆರ್ಯ, ಮುಷೀರ್ ಖಾನ್, ಅರ್ಷ್‌ದೀಪ್ ಸಿಂಗ್, ಯಜ್ವೇಂದ್ರ ಚಾಹಲ್, ವೈಶಾಕ್ ವಿ., ಕೈಲ್ ಜೇಮಿಸನ್.

ಮೈಸೂರು ಮಿತ್ರ



# ಐಪಿಎಲ್ ಫೈನಲ್; ಆರ್‌ಸಿಬಿ ಗೆಲುವಿಗೆ ಅಭಿಮಾನಿಗಳ ಪೂಜೆ-ಪ್ರಾರ್ಥನೆ

## ನಾನಾ ಬಗೆಯಲ್ಲಿ ನೆಚ್ಚಿನ ತಂಡದ ವರ್ಣರಂಜಿತ ಪೋಸ್ಟರ್ ರಾರಾಜಿಸುತ್ತಿವೆ




ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ಗೆಲುವಿಗಾಗಿ ಪ್ರಾರ್ಥಿಸಿ ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಾಲಯದಲ್ಲಿ ಶಾಸಕ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಆರ್‌ಸಿಬಿ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದರು.



ಆರ್‌ಸಿಬಿ ಗೆಲುವಿಗಾಗಿ ಗನ್‌ಹೌಸ್ ಸಮೀಪದ ಇಂದಿರಾ ಕ್ಯಾಂಟೀನ್‌ನಲ್ಲಿ ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ ನೇತೃತ್ವದಲ್ಲಿ ಸಾಂಕೇತಿಕವಾಗಿ ಹೋಳಿಗೆ ಊಟಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಜೂ.2(ಎಂಟಿವೈ)- ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮಂಗಳವಾರ ಸಂಜೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಪಂಜಾಬ್ ಕಿಂಗ್ಸ್ (ಪಿಬಿಕೆಎಸ್) ನಡುವಿನ ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿಗೆ ಜಯ ದೊರಕಲೆಂದು ಮೈಸೂರಲ್ಲಿ ಅಭಿಮಾನಿಗಳು ವಿಶೇಷ ಪೂಜೆ ನೆರವೇರಿಸಿದರು.

ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ನ 18ನೇ ಆವೃತ್ತಿಯ ಫೈನಲ್ ಹೈವೋಲ್ಟೇಜ್ ಪಂದ್ಯವಾಗಿದ್ದು, ಈ ಬಾರಿ ಕಪ್ ಆರ್‌ಸಿಬಿ ಪಾಲಾಗಲಿ ಎಂದು ರಾಜ್ಯಾದ್ಯಂತ ಆರ್‌ಸಿಬಿ ಅಭಿಮಾನಿಗಳು ಹಾರೈಸುತ್ತಿದ್ದು, ಮೈಸೂರಲ್ಲೂ ಅಪಾರ ಅಭಿಮಾನಿಗಳು ವಿಶೇಷ ಪ್ರಾರ್ಥನೆ ಮಾಡುತ್ತಿದ್ದಾರೆ.

**ಗೆಲುವಿಗಾಗಿ ಹೋಮ:** ಆರ್‌ಸಿಬಿ ಗೆಲುವಿಗಾಗಿ ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಾಲಯದಲ್ಲಿ ಶಾಸಕ ಕೆ.ಹರೀಶ್‌ಗೌಡರ ನೇತೃತ್ವದಲ್ಲಿ ಆರ್‌ಸಿಬಿ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿ, ಹೋಮ ನೆರವೇರಿಸಿದರು. ದೇವಾಲಯದ ಪ್ರಧಾನ ಅರ್ಚಕ ವೈ ಕುಮಾರ್ ನೆರವೇರಿಸಿದ ವಿಜಯ ದುರ್ಗಾ ಹೋಮದಲ್ಲಿ ಅಭಿಮಾನಿಗಳು ಆರ್‌ಸಿಬಿ ಜೆರ್ಸಿ ಧರಿಸಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಶಾಸಕ ಕೆಹರೀಶ್‌ಗೌಡ ಮಾತನಾಡಿ, ಆರ್‌ಸಿಬಿ ತಂಡ ಐಪಿಎಲ್‌ನಲ್ಲಿ ನಾಲ್ಕನೇ ಬಾರಿಗೆ ಫೈನಲ್ ಪ್ರವೇಶಿಸಿದೆ. ಈ ಬಾರಿ ಆರಂಭದಿಂದಲೂ ಆರ್‌ಸಿಬಿ ಆಟಗಾರರು ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಪ್ರತಿಯೊಂದು ಪಂದ್ಯದಲ್ಲೂ ಒಬ್ಬೊಬ್ಬ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿ ಪಂದ್ಯವನ್ನು ಗೆಲ್ಲಿಸಿದ್ದಾರೆ. ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್‌ನಲ್ಲಿ ಆರ್‌ಸಿಬಿ ಆಟಗಾರರು ಉತ್ತಮ ಫಾರ್ಮ್‌ನಲ್ಲಿರುವುದರಿಂದ ಕಪ್ ಗೆಲ್ಲುವ ವಿಶ್ವಾಸವಿದೆ. ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ಗೆಲುವಿಗೆ ದೈವಬಲ ದೊರಕಲೆಂಬ ಉದ್ದೇಶದಿಂದ ಅಭಿಮಾನಿಗಳು ವಿಜಯ ದುರ್ಗಾ ಹೋಮ ಹಾಗೂ ವಿಶೇಷ ಪೂಜೆ ನೆರವೇರಿಸಿದ್ದಾರೆ. ನಮ್ಮ ಬೆಂಬಲ ಆರ್‌ಸಿಬಿಗೆ ಮುಂದುವರೆಯಲಿದೆ ಎಂದರು.

ಈ ಸಂದರ್ಭದಲ್ಲಿ ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ್ ರಾಯಪ್ಪ, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಎಂ.ಎಸ್.ಗುರುರಾಜ್ ಶೆಟ್ಟಿ, ನವೀನ, ರವಿಚಂದ್ರ ಸಂದೀಪ್, ಎಸ್.ಎನ್. ರಾಜೇಶ್, ನಿತಿನ್, ಹರೀಶ್‌ಗೌಡ, ರವಿ ಕುಮಾರ್, ಹೇಮಂತ, ಜಗದೀಶ್, ಹರ್ಷ, ಲೋಕೇಶ್, ಶ್ರೀನಿವಾಸ ಶೆಟ್ಟಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

**ಇಂದಿರಾ ಕ್ಯಾಂಟೀನ್‌ನಲ್ಲಿ ಹೋಳಿಗೆ ಊಟದ ಭರವಸೆ:** ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮಣಿಸಿ, ಆರ್‌ಸಿಬಿ ಕಪ್ ತನ್ನದಾಗಿಸಿಕೊಂಡರೆ ಮೈಸೂರಿನಲ್ಲಿರುವ 16 ಇಂದಿರಾ ಕ್ಯಾಂಟೀನ್‌ನಲ್ಲಿ ಉಚಿತವಾಗಿ ಹೋಳಿಗೆ ಊಟ ವಿತರಿಸುವುದಾಗಿ ಮೈಸೂರಿನ ಆರ್‌ಸಿಬಿ ಅಭಿಮಾನಿ, ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ ಘೋಷಿಸಿದ್ದಾರೆ. ಆರ್‌ಸಿಬಿ ಗೆಲುವಿಗಾಗಿ ಪ್ರಾರ್ಥಿಸಿ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಸಾಂಕೇತಿಕವಾಗಿ ಕೆಲವರಿಗೆ ಉಚಿತವಾಗಿ ಹೋಳಿಗೆ ಊಟ ಹಂಚಿಕೆ ಮಾಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆರ್‌ಸಿಬಿ ಈ ಬಾರಿ ಕಪ್ ಗೆಲ್ಲಬೇಕೆಂಬ ಮಹದಾಸೆ ಕರ್ನಾಟಕ ಜನರದ್ದಾಗಿದೆ. ಈ ಹಿನ್ನೆಲೆಯಲ್ಲಿ ಆರ್‌ಸಿಬಿ ಗೆಲುವಿಗಾಗಿ ವಿಶೇಷ ಪೂಜೆ ಸಲ್ಲಿಸಲಾಗಿದೆ. ಆರ್‌ಸಿಬಿ ಕಪ್ ಗೆದ್ದರೆ ಮೈಸೂರಿನ 16 ಕ್ಯಾಂಟೀನ್‌ಗಳಲ್ಲೂ ಉಚಿತವಾಗಿ ಹೋಳಿಗೆ ಊಟ ಹಾಕಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಉದ್ಯಮಿ ರಾಜೇಶ್ ಪಳನಿ, ಮುಖಂಡರಾದ ಎಸ್.ಎನ್.ರಾಜೇಶ್, ರಾಕೇಶ್, ರವಿಚಂದ್ರ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರಿನ ವಿಜಯನಗರದ ನಿವಾಸಿ ಹಾಗೂ ಉದ್ಯಮಿಗಳಾದ ದೀಪಕ್, ಶ್ರೇಯಸ್, ಪ್ರಣೀತ್ ತಮ್ಮ ಕಾರಿಗೆ ಆರ್‌ಸಿಬಿ ಟಚ್ ನೀಡಿದ್ದಾರೆ. ಇಂದು ಬೆಳಗ್ಗೆ ತಮ್ಮ ಕಾರನ್ನು ಚಾಮುಂಡಿಬೆಟ್ಟಕ್ಕೆ ಕೊಂಡೊಯ್ದು ತಾಯಿ ಚಾಮುಂಡೇಶ್ವರಿಗೆ ಆರ್‌ಸಿಬಿ ಪರ ವಿಶೇಷ ಪೂಜೆ ಸಲ್ಲಿಸಿ, ಗೆಲುವಿಗೆ ಪ್ರಾರ್ಥಿಸಿದ್ದಾರೆ. ಬಳಿಕ ಮೈಸೂರಿನ ವಿವಿಧ ರಸ್ತೆಗಳಲ್ಲಿ ಸಂಚರಿಸಿದ ಈ ಕಾರು ಜನರಲ್ಲಿ ಆರ್‌ಸಿಬಿ ಗೆಲುವಿನ ಹಂಬಲ ಹೆಚ್ಚುವಂತೆ ಮಾಡಿದೆ.

### ಆರ್‌ಸಿಬಿಮಯವಾದ ಕಾರು








ಆರ್‌ಸಿಬಿ ಗೆಲುವಿಗಾಗಿ ಶುಭ ಕೋರುವ ನಿಟ್ಟಿನಲ್ಲಿ ಕಾರ್‌ಗೆ ಆರ್‌ಸಿಬಿ ಜೆರ್ಸಿ ಕಲರ್ ಹಾಗೂ ಆಟಗಾರರ ಭಾವಚಿತ್ರವುಳ್ಳ ಸ್ಟಿಕ್ಕರ್‌ನಿಂದ ವಿನ್ಯಾಸಗೊಳಿಸಿರುವುದು.

ದೇಶದ ಕ್ರಿಕೆಟ್ ಪ್ರೇಮಿಗಳ ನೆಚ್ಚಿನ ತಂಡ ಆರ್‌ಸಿಬಿ ಹಾಗೂ ಪಂಜಾಬ್ ಕಿಂಗ್ಸ್ ನಡುವಿನ ರೋಚಕ ಐಪಿಎಲ್ ಫೈನಲ್ ಮಂಗಳವಾರ ನಡೆಯುತ್ತಿರುವುದರಿಂದ ಮೈಸೂರಿನಲ್ಲಿ ನಾಲ್ವರು ಆರ್‌ಸಿಬಿ ಅಭಿಮಾನಿಗಳು, ತಮಗೆ ಸೇರಿದ ಐಷಾರಾಮಿ ಕಾರಿಗೆ ಆರ್‌ಸಿಬಿ ಕಲರ್ ಸ್ಟಿಕ್ಕರ್ ಅಂಟಿಸಿ, ಆಕರ್ಷಕವಾಗಿ ವಿನ್ಯಾಸಗೊಳಿಸಿದ್ದಾರೆ. ಆರ್‌ಸಿಬಿ ಆಟಗಾರ ವಿರಾಟ್ ಕೋಹ್ಲಿ, ಮಹಿಳಾ ತಂಡದ ನಾಯಕಿ ಸ್ಮೃತಿ ಮಂದಾನ ಸೇರಿದಂತೆ ವಿವಿಧ ಆಟಗಾರರ ಭಾವಚಿತ್ರದ ಸ್ಟಿಕ್ಕರ್ ಅಂಟಿಸಿ, ಆರ್‌ಸಿಬಿ ತಂಡಕ್ಕೆ ವಿಶೇಷವಾಗಿ ಶುಭ ಕೋರಿದ್ದಾರೆ.

# ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಸಹಕಾರ ಸಂಘದ ಕಚೇರಿ ಉದ್ಘಾಟನೆ



ಮೈಸೂರು, ಜೂ.2- ಮೈಸೂರಿನ ಸರಸ್ವತಿ ಪುರಂ ಕಾಮಾಕ್ಷಿ ಆಸ್ಪತ್ರೆ ರಸ್ತೆ 14ನೇ ಮೇನ್‌ನಲ್ಲಿ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಸಹಕಾರ ಸಂಘದ ಕಚೇರಿಯನ್ನು ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಭಾನುವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಅವರು, ಸಹಕಾರ ಸಂಘ ಸರ್ವ ರೀತಿಯಲ್ಲಿ ಅಭಿವೃದ್ಧಿ ಕಾಣಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಂಘದ ಅಧ್ಯಕ್ಷ ಸಿ.ಜಿ. ಗಂಗಾಧರ್, ಉಪಾಧ್ಯಕ್ಷ ಎನ್. ಬೆಟ್ಟೇಗೌಡ ಮುಖ್ಯ ಅತಿಥಿಗಳಾಗಿದ್ದರು.

ನಿರ್ದೇಶಕರಾದ ಎಂ.ಎನ್. ಚಂದ್ರಶೇಖರ್, ಲಕ್ಷ್ಮೀದೇವಿ, ಗಣೇಶ್, ಕ್ಯಾತನಹಳ್ಳಿ ಪ್ರಕಾಶ್, ರಮೇಶ್ ನಾಯಕ್, ಪೂರ್ಣಿಮಾ, ಚಂದ್ರು, ರಾಮು, ಡಾ.ಈ.ಸಿ.ನಿಂಗರಾಜ್‌ಗೌಡ, ನಮ್ರತಾ ರಮೇಶ್, ಸಿಇಒ ಸುಮಿತ್ರಾ ಉಪಸ್ಥಿತರಿದ್ದರು.

# ಎಟಿಐನಲ್ಲಿ ಎಡಿಎಲ್‌ಆರ್‌ಗಳಿಗೆ ಜಿಯೋಸ್ಪೇಷಿಯಲ್ ಭೂ ಸರ್ವೇ ಕುರಿತು ತರಬೇತಿ ಆರಂಭ

ಮೈಸೂರು, ಜೂ.2(ಆರ್‌ಕೆ)- ಮೈಸೂರಿನ ಲಲಿತಮಹಲ್ ರಸ್ತೆಯ ಆಡಳಿತ ತರಬೇತಿ ಸಂಸ್ಥೆ (ಎಟಿಐ)ಯಲ್ಲಿ ದಕ್ಷಿಣ ಭಾರತ ರಾಜ್ಯಗಳ ಭೂ ದಾಖಲೆ ಸಹಾಯಕ ನಿರ್ದೇಶಕರು (ಎಡಿಎಲ್‌ಆರ್)ಗಳಿಗೆ ಜಿಯೋಸ್ಪೇಷಿಯಲ್ ಭೂ ಸರ್ವೇ ಕುರಿತು 1 ವಾರದ ತರಬೇತಿ ಕಾರ್ಯಕ್ರಮ ಸೋಮವಾರದಿಂದ ಆರಂಭವಾಯಿತು.

ಮೈಸೂರು ಸೇರಿದಂತೆ ನಕ್ಷಾ (National Geospatial knowledge-based Land Survey of urban Habitations) ಯೋಜನೆಯಡಿ ಕೇಂದ್ರದ ಪಂಚಾಯತ್‌ರಾಜ್ ಸಚಿವಾಲಯವು ದೇಶದ 5 ಕಡೆ ಏಕಕಾಲದಲ್ಲಿ ತರಬೇತಿ ನೀಡುತ್ತಿದೆ. ದೇಶದಲ್ಲಿ 2031ರ ವೇಳೆಗೆ ನಗರ ಜನಸಂಖ್ಯೆ 600 ಮಿಲಿಯನ್ ದಾಟುವ ಸಂಭವವಿರುವುದರಿಂದ ಭೂಮಿಯ ನಿಖರ ಅಳತೆ ಮಾಡಿ ದಾಖಲೆಗಳು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಕಾರ್ಯಕ್ರಮದ ಉದ್ದೇಶವಾಗಿದೆ.



ಚನ್ನಪಟ್ಟಣದ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಎಸ್.ಪಿ.ಪ್ರಖ್ಯಾತ್‌ಕುಮಾರ್ ಪ್ರಶಿಕ್ಷಣಾರ್ಥಿಗಳಿಗೆ ಮಾಹಿತಿ ನೀಡುತ್ತಿರುವುದು.

ಮೈಸೂರಿನಲ್ಲಿ ನಡೆದ ತರಬೇತಿಯಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ರಾಜ್ಯಗಳಿಂದ 27 ಮಂದಿ ಎಡಿಎಲ್‌ಆರ್‌ಗಳು ಭಾಗವಹಿಸಿದ್ದು, ಇಂದು ಬೆಳಗ್ಗೆ ಚನ್ನಪಟ್ಟಣದ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಎಸ್.ಪಿ. ಪ್ರಖ್ಯಾತ್‌ಕುಮಾರ್ ಪ್ರಶಿಕ್ಷಣಾರ್ಥಿಗಳಿಗೆ ವಿಷಯ ಕುರಿತು ಮಾಹಿತಿ ನೀಡಿದರು.

ದೇಶದ 157 ನಗರ ಸ್ಥಳೀಯ ಸಂಸ್ಥೆ (ಯುಎಲ್‌ಬಿ)ಗಳ 304 ಅಧಿಕಾರಿಗಳನ್ನು ತರಬೇತಿಗೆ ನಿಯೋಜಿಸಿದ್ದು, ಭೌಗೋಳಿಕ ಪರಿಕರಗಳನ್ನು ಬಳಸುವ ಬಗ್ಗೆ ಮಾಹಿತಿ ನೀಡಲಾಗುವುದು. ತಾಂತ್ರಿಕ ಮತ್ತು ಭೌಗೋಳಿಕವಾಗಿ ಪ್ರಾಯೋಗಿಕ ಕೌಶಲದೊಂದಿಗೆ ಅಧಿಕಾರಿ, ಸಿಬ್ಬಂದಿಗಳನ್ನು ಸಜ್ಜುಗೊಳಿಸುವುದು ನಕ್ಷಾ ಕಾರ್ಯಕ್ರಮದ ಉದ್ದೇಶವಾಗಿದೆ.

ಜಿಎನ್‌ಎಸ್‌ಎಸ್ ಮತ್ತು ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್ (ಇಟಿಎಸ್) ಆಧಾರಿತ ಸರ್ವೆ, ಭೂ ಪಾರ್ಷಿಯಲ್ ಅಪ್ಲಿಕೇಷನ್‌ಗಳು, ಭೂ ಪಾರ್ಷಿಯಲ್ ಮ್ಯಾಪಿಂಗ್, ಭೂ ಸರ್ವೆ, ಕಾನೂನು ಮತ್ತು ಆಡಳಿತಾತ್ಮಕ ಆಯಾಮಗಳು, ಸಮಸ್ಯೆ, ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವ ಬಗ್ಗೆಯೂ ಸ್ಥಳೀಯ ಸಂಸ್ಥೆ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದೆ.

ಭಾರತೀಯ ಸರ್ವೆ, ರಾಷ್ಟ್ರೀಯ ಮಾಹಿತಿ ಕೇಂದ್ರ, ಮಧ್ಯಪ್ರದೇಶ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ, ಭೂ ಸಂಪನ್ಮೂಲ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಗತಗೊಳಿಸಿರುವ ನಕ್ಷಾ ಯೋಜನೆಯ 27 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ತರಬೇತಿ ನಡೆಯುತ್ತಿದೆ.

ಮೈಸೂರಿನ ಎಟಿಐ, ಮಸೂರಿಯ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿ, ಪುಣೆಯ ಯಶವಂತರಾವ್ ಚವಾಣ್ ಅಕಾಡೆಮಿ ಆಫ್ ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್, ಗುವಾಹಟಿಯ ಈಶಾನ್ಯ ಕೇಂದ್ರ ಪ್ರದೇಶ ಹಾಗೂ ಚಂಡೀಗಢದ ಮಹಾತ್ಮಗಾಂಧಿ ರಾಜ್ಯ ಸಾರ್ವಜನಿಕ ಆಡಳಿತ ಸಂಸ್ಥೆಗಳಲ್ಲಿ ಜಿಯೋಸ್ಪೇಷಿಯಲ್ ಭೂ ಸರ್ವೇ ತರಬೇತಿ ನಡೆಯುತ್ತಿದೆ.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ನೋಂದಣಿ



ಮೈಸೂರು, ಜೂ.2- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ನೋಂದಣಿ ಕಾರ್ಯಕ್ರಮವು ಕಳೆದ ಒಂದು ತಿಂಗಳ ಹಿಂದೆ ಚಾಮರಾಜನಗರ, ಮೈಸೂರು ಇನ್ನೂ ಹಲವಾರು ಕಡೆ ನಡೆದು 200 ಸದಸ್ಯರನ್ನು ನೋಂದಾಯಿಸಲಾಗಿತ್ತು. ಆ ಸದಸ್ಯರ ಗುರುತಿನ ಚೀಟಿಗಳನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಹೆಚ್.ವಿ. ರಾಜೀವ್ ವಿತರಿಸಿ ಮಾತನಾಡಿ, ಈಗಾಗಲೇ ರಾಜ್ಯದಲ್ಲಿ ನೋಂದಣಿ ಕಾರ್ಯವು ಭರದಿಂದ ಸಾಗುತ್ತಿದ್ದು, ಅದರಲ್ಲೂ ವಿಶೇಷವಾಗಿ ಚಾಮರಾಜನಗರ ಮತ್ತು ಮೈಸೂರಿನಲ್ಲಿ ವಿಪ್ರರು ಸದಸ್ಯರಾಗಬೇಕಾಗಿ ಕರೆ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್. ರಂಗನಾಥ್ ಮಾತನಾಡಿ, ಮೈಸೂರಿನಲ್ಲಿ ಹಲವು ಕಡೆ ಸದಸ್ಯರಾಗ ಬಯಸುವವರು ನನ್ನ ದೂರವಾಣಿಗೆ 99645 24275 ಕರೆ ಮಾಡಿದರೆ, ಐದರಿಂದ ಹತ್ತು ಜನ ಇದ್ದಲ್ಲಿ ನಿಮ್ಮಲ್ಲಿಗೆ ಬಂದು ನೋಂದಾಯಿಸಲಾಗುವುದು ಎಂದು ತಿಳಿಸಿದರು.

ವಿಪ್ರ ಮುಖಂಡರಾದ ಶೇಷಪ್ರಸಾದ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ಪ್ರಶಾಂತ್ ಭರದ್ವಾಜ್ ಮತ್ತಿತರರು ಉಪಸ್ಥಿತರಿದ್ದರು.

# ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಪ್ರಯುಕ್ತ ವಿದ್ಯುತ್ ದೀಪಾಲಂಕಾರ



ಮೈಸೂರು, ಜೂ.2- ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಪ್ರಯುಕ್ತ ಜೂ.4 ರಂದು ಬೆಳಿಗ್ಗೆ 8.30ಕ್ಕೆ ಮೈಸೂರು ಅರಮನೆಯ ಆವರಣದಲ್ಲಿರುವ ಶ್ರೀ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ಮುಂಭಾಗ ರಥದಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಸದರಿ ಜಯಂತಿ ಪ್ರಯುಕ್ತ ಸಂಜೆ 7 ರಿಂದ 8 ಗಂಟೆಯವರೆಗೆ ಅರಮನೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಕಲ್ಪಿಸಲಾಗಿದೆ ಮತ್ತು ಸಾರ್ವಜನಿಕರಿಗೆ ಉಚಿತ ಪ್ರವೇಶವಿರುತ್ತದೆ ಎಂದು ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುಪಿಎಸ್‌ಸಿ, ಬ್ಯಾಂಕಿಂಗ್ ಪಿಓ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.2- ಯುಪಿಎಸ್‌ಸಿ ನಾಗರಿಕ ಸೇವೆ ಮತ್ತು ಬ್ಯಾಂಕಿಂಗ್ ಪಿಓ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಉಚಿತ ಪರೀಕ್ಷಾ ಪೂರ್ವ ತರಬೇತಿ ನೀಡುತ್ತಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂ.15 ಕೊನೆಯ ದಿನ.

ಅಂಗೀಕೃತ ವಿವಿಯಿಂದ ಯಾವುದಾದರೊಂದು ಪದವಿ ಪಡೆದಿರಬೇಕು. ಅಭ್ಯರ್ಥಿ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ಪ್ರವರ್ಗ-1, 2ಎ, 3ಎ ಹಾಗೂ 3ಬಿಗಳಿಗೆ ರೂ. 5 ಲಕ್ಷದೊಳಗಿರಬೇಕು. ಮಾಹಿತಿಗಾಗಿ https://bcwd.karnataka. gov.in, sevasindhu services.karnataka.gov.in ನೋಡಬಹುದು. ಸಹಾಯವಾಣಿ: 8050370006 ಅನ್ನು ಸಂಪರ್ಕಿಸಬಹುದು.

# ನಾಳೆ ಸಚಿವ ಕೆ.ಜೆ.ಜಾರ್ಜ್ ಮೈಸೂರು ಜಿಲ್ಲಾ ಪ್ರವಾಸ



**ಮೈಸೂರು:** ಇಂಧನ ಸಚಿವರೂ ಆದ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಜೂ.4ರಂದು ಮೈಸೂರು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ಬೆಳಗ್ಗೆ 10.30 ಗಂಟೆಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಗೆ ಭೇಟಿ ನೀಡಲಿದ್ದಾರೆ. 11.30 ಗಂಟೆಗೆ ಮೈಸೂರು ಜಿಪಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ನಿಧನ




## ಎಸ್.ಎಸ್.ಸದಾನಂದ

ಮೈಸೂರು, ಜೂ.2-ಮೈಸೂರಿನ ಗೋಕುಲಂ ನಿವಾಸಿ, ರೇಷ್ಮೆ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಸ್.ಎಸ್.ಸದಾನಂದ (95) ಸೋಮವಾರ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ರೇಷ್ಮೆ ಇಲಾಖೆ ನಿವೃತ್ತ ನೌಕರರ ಸೇವಾ ಸಂಸ್ಥೆ ಹಾಗೂ ರೇಷ್ಮೆ ಇಲಾಖೆಯ ಸಿಬ್ಬಂದಿ ವರ್ಗದವರು ಸಂತಾಪ ಸಲ್ಲಿಸಿದ್ದಾರೆ. ಮಂಗಳವಾರ ಗೋಕುಲಂನ ಸ್ವಗೃಹದಲ್ಲಿ ಬೆಳಗ್ಗೆ 10ಗಂಟೆಯಿಂದ ಮಧ್ಯಾಹ್ನ 1ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**03.06.2025 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ, 25.05.2025 ರಿಂದ 07.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ**

- **ಆಲ್ ಇಂಡಿಯಾ ಇನ್ಶೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್:** 9ನೇ ಜನರಲ್ ಕಾನ್ಫರೆನ್ಸ್, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಬೆಳಗ್ಗೆ 9.30ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ತೊಳಸಿ ಜ್ಯುವೆಲ್ಸ್:** ಇಟಾಳಸಿ ಲಕ್ಸ್ ಫಸ್ಟ್-ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.
- **ಮೈಸೂರು ಕನ್ನಡ ವೇದಿಕೆ :** ಶ್ರೀ ಜಗಜ್ಯೋತಿ ಬಸವೇಶ್ವರ ಜಯಂತಿ ಮತ್ತು ಕಾರ್ಮಿಕ ದಿನಾಚರಣೆ, ಅಸಂಘಟಿತ ಕಾರ್ಮಿಕರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರಧಾನ ಭಾಷಣ : ಕಾರ್ಮಿಕ ಅಧಿಕಾರಿ ಚೇತನ್, ಪ್ರಶಸ್ತಿ ಪ್ರದಾನಿಸುವವರು: ಎ.ಪಿ. ನಾಗೇಶ್, ಉಪಸ್ಥಿತರು : ಡಾ. ಲೋಕೇಶ್, ಮಂಜುನಾಥ್, ಬಸವರಾಜೇಂದ್ರಸ್ವಾಮಿ, ನಾಲಾಬೀದಿ ರವಿ, ಮನೋಹರ್, ಅಧ್ಯಕ್ಷತೆ : ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ : ಗಣೇಶ ದೇವಸ್ಥಾನದ ಹತ್ತಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ- ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ- ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ- ಮತ್ತೂರು ಕುಮಾರ ಸ್ವಾಮಿ ಹಾಗೂ ಪಿ.ಎಸ್. ರಂಜನಿ, ವ್ಯಾಖ್ಯಾನ-ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಎಲ್ಲರಿಗಾಗಿ ಯೋಗ-ಯೋಗ ಸಾಧಕ ನಯೀಂ ಷೇಕ್ ಅವರೊಂದಿಗೆ ಸಂದರ್ಶನ, ಸಂದರ್ಶಕರು-ದಿವಾಕರ್ ಹೆಗಡೆ, 8.50 ಕರೆಗೊಂದು ಗೀತೆ-ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಿ. ವಂಶಿಧರ್ - ಕೊಳಲು ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಮಂಜು ಕೋಡಿಉಗನೆ ಅವರಿಂದ ಸಣ್ಣಕಥೆ ನೆಲದ ಜೀವ, 1.00 ಪ್ರಗತಿ ಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು-ಅಮೂಲ್ಯ ಎಂ., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಭಾರ್ಗವಿ ಕೆ - ಹಾಡುಗಾರಿಕೆ, 4.00 ಕಥಾಕಾಲಕ್ಷೇಪ- ಶ್ರೀರಾಮ ಪಟ್ಟಾಭಿಷೇಕ, ಪ್ರಸ್ತುತಿ-ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ- ಕಿಸಾನ್‌ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ವಿಶ್ವ ಪರಿಸರ ದಿನದ ಸಂದರ್ಭದಲ್ಲಿ ಪ್ಲಾಸ್ಟಿಕ್ ಮಾಲಿನ್ಯ ನಿಲ್ಲಿಸಿ, ಪರಿಸರ ಸಂರಕ್ಷಿಸಿ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ - ಮೈಸೂರಿನ ಪರಿಸರ ವಿಜ್ಞಾನಿ ಪ್ರೊ. ವಿ. ಜಗನ್ನಾಥ್, ಪ್ರಸ್ತುತಿ-ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್-ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಬಿ.ದಿಗ್ವಿಜಯ್, 8.00 ನಾಟಕ ಚಿನ್ನದ ಹಲ್ಲು , ರಚನೆ-ಎಸ್. ರಾಮನಾಥ್, ನಿರ್ದೇಶನ-ಉಮೇಶ್ ಎಸ್.ಎಸ್., ನಿರ್ಮಾಣ-ಪ್ರಭುಸ್ವಾಮಿ ಮಳಿಮಠ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ-ಕೆ. ಎಸ್. ಗೋಪಾಲಕೃಷ್ಣನ್- ಕೊಳಲು ವಾದನ, 10.00 ಚೈತ್ರವನ-ಲಕ್ಷೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ-ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು-ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ



# ನಾಲ್ವಡಿ ಜೀವನಾಧಾರಿತ 'ಆಳಿದ ಮಾಸ್ವಾಮಿಗಳು' ನಾಟಕಕ್ಕೆ ಅಪಾರ ಮೆಚ್ಚುಗೆ



ಕಿರುರಂಗಮಂದಿರದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನಾಧಾರಿತ 'ಆಳಿದ ಮಾಸ್ವಾಮಿಗಳು' ನಾಟಕ ಪ್ರದರ್ಶನಗೊಂಡಿತು.



ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ನಗಾರಿ ಮತ್ತು ಕಂಸಾಳೆ ಬಾರಿಸುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಜೂ.2(ಎಂಕೆ)– ಮೈಸೂರು ಕಲಾಮಂದಿರದ ಕಿರುರಂಗ ಮಂದಿರದಲ್ಲಿ 70 ಯುವ ಕಲಾವಿದರಿಂದ ರೂಪುಗೊಂಡ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನಾಧಾರಿತ 'ಆಳಿದ ಮಾಸ್ವಾಮಿಗಳು' ನಾಟಕದ ಮೊದಲ ಪ್ರದರ್ಶನ ರಂಗಾಸಕ್ತರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ನಾಲ್ವಡಿ ಸೋಶಿಯಲ್, ಕಲ್ಚರಲ್ ಆ್ಯಂಡ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನಾಟಕ ಆಧಾರಿತ ಉಚಿತ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ರಂಗ ನಿರ್ದೇಶಕ ದಿನೇಶ್ ಚಮ್ಮಾಳಿಗೆ ನಿರ್ದೇಶನ, ರವಿಕಿರಣ್ ಆರ್.ಬಳ್ಳಗೆರೆ ರಚನೆ, ಕೃಷ್ಣಕುಮಾರ್ ನಾರ್ಣಕಜೆ ಬೆಳಕು, ಅಶ್ವಥ್ ಕದಂಬ ಪ್ರಸಾಧನ, ಗೋವಿಂದಸ್ವಾಮಿ ಗುಂಡಾಪುರ, ಹನಸೋಗೆ ಸೋಮಶೇಖರ್ ಮತ್ತು ಸೋಸಲೆ ಗಂಗಾಧರ್ ಸಂಗೀತ, ಮಧುಸೂದನ್ ನಾಟಕ ಪರಿಕರ ಹಾಗೂ ಕೃಷ್ಣ ಚೈತನ್ಯ ಮತ್ತು ಸುನೀಲ್ ನಾಯಕ್ ಸಾಂಗತ್ಯ ಸಂಗೀತದಲ್ಲಿ ಮೂಡಿಬಂದ 'ಆಳಿದ ಮಾಸ್ವಾಮಿಗಳು' ನಾಟಕ ಪ್ರೇಕ್ಷಕರ ಮನಗೆದ್ದಿತು.

ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಡಿವೈಎಸ್‌ಪಿ ಎನ್.ಸಂದೇಶ್ ಕುಮಾರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರಾಜರ್ಷಿ ಎಂದು ಕರೆಯಲಾಗಿದೆ. ಅವರ ಆಡಳಿತ ಅವಧಿಯನ್ನು ಸುವರ್ಣಯುಗ ಎನ್ನಲಾಗಿದ್ದು, ಇಂತಹ ಮಹನೀಯರ ಕುರಿತ ನಾಟಕಗಳನ್ನು ನೋಡುವ ಮೂಲಕ ಅಂಬೇಡ್ಕರ್ ನೀಡಿದ ಸಂವಿಧಾನವನ್ನು ಅರ್ಥ ಮಾಡಿಕೊಂಡು ಸಮ ಸಮಾಜ ಕಟ್ಟುವ ಹಾದಿಯಲ್ಲಿ ನಡೆಯಬೇಕಿದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ಬರೆದಿರುವ 'ಕಲ್ಯಾಣ ಕೆಡುವ ಹಾದಿ' ಪುಸ್ತಕದಲ್ಲಿ ಅವರು, ಗುಲ್ಬರ್ಗ ಜಿಲ್ಲಾಧಿಕಾರಿಗಳಾಗಿ ಹಸಿವಿನಿಂದ ಸತ್ತ ಮನುಷ್ಯನ ಪಾರ್ಥಿವ ಶರೀರವನ್ನು ನೋಡುತ್ತಿರುವಾಗ ಹಳೇ ಮೈಸೂರು ಭಾಗದಲ್ಲಿ ಹಸಿವು ಎಂಬುದಿಲ್ಲ. ಮೈಸೂರು ಪ್ರಾಂತದ ಜನತೆ ಅತ್ಯಂತ ಸುಭಿಕ್ಷವಾಗಿರುವುದಕ್ಕೆ ಮೈಸೂರು ಮಹಾರಾಜರ ಕೊಡುಗೆಯೇ ಕಾರಣ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದಲ್ಲಿ ಮೈಸೂರು ಪ್ರಾಂತ್ಯ ಎಂತಹ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದನ್ನು ಉಲ್ಲೇಖಿಸಿದ್ದಾರೆ ಎಂದು ನಾಲ್ವಡಿ ಕೊಡುಗೆಯನ್ನು ಸ್ಮರಿಸಿದರು.

ಈ ದೇಶಕಂಡ ಅತ್ಯಂತ ದೊಡ್ಡ ಮಾನವತಾವಾದಿ, ಮೇಧಾವಿ ಡಾ.ಬಿ.ಆರ್.ಅಂಬೇಡ್ಕರ್ ಅವರು, ನೀಡಿದ ಭಾರತ ಸಂವಿಧಾನದ ಪೀಠಿಕೆಯಲ್ಲಿ ನಾವೆಲ್ಲರೂ ಭಾರತೀಯರು ಎಂದು ಒಪ್ಪಿಕೊಂಡಿದ್ದೇವೆ. ಅಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು ಎಂದರ್ಥ. ಈ ದೇಶದ ಸಮಾಜವನ್ನು ಕಟ್ಟಿ ಬೆಳೆಸುವ ಗುರುತರವಾದ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಮೇಲೂ ಇದೆ ಎಂಬುದೇ ಸಂವಿಧಾನ ಪೀಠಿಕೆಯ ಸಾರಾಂಶ. ಇದನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು ಎಂದರು.

### ರಂಗಭೂಮಿ ಸಂವಿಧಾನವನ್ನು ಪ್ರತಿನಿಧಿಸಲಿದೆ...

> ರಂಗಭೂಮಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ ಸಂವಿಧಾನವನ್ನು ಪ್ರತಿನಿಧಿಸಲಿದೆ. ಅಂಬೇಡ್ಕರ್ ಅವರ ದೂರದೃಷ್ಟಿತ್ವದಲ್ಲಿ ರಂಗಭೂಮಿ ಮೂಲಕ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದೂ ಕೂಡ ಮೂಲಭೂತ ಹಕ್ಕಾಗಿದೆ.
>
> – ಎನ್.ಸಂದೇಶ್‌ಕುಮಾರ್, ಡಿವೈಎಸ್‌ಪಿ

**ಪ್ರಜಾ ರಾಜ:** ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ರಾಜಪ್ರಭುತ್ವ ಇದ್ದರೂ ಕೂಡ ರಾಜಪ್ರಭುತ್ವ ಒಳಗಡೆ ಪ್ರಜಾಪ್ರಭುತ್ವದ ಕನಸನ್ನು ಕಂಡವರು. ಪ್ರಜಾರಾಜ ಎಂಬ ಬಿರುದನ್ನು ಪಡೆದುಕೊಂಡರು. ಅವರ ಜೀವನ ಚರಿತ್ರೆಯನ್ನು ನಾಟಕ ರೂಪಕ್ಕೆ ತಂದಿದ್ದು ಒಂದು ದೊಡ್ಡ ಸಾಹಸವನ್ನು ಮಾಡಿದ್ದಾರೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್, ದಲಿತ ಮುಖಂಡ ಅಹಿಂದ ಜವರಪ್ಪ, ರಂಗಭೂಮಿ ಕಲಾವಿದ ಶಿವಾಜಿ ರಾವ್ ಜಾದವ್, ಪ್ರಜ್ಞಾ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಸಂಗೊಳ್ಳಿ ರಾಯಣ್ಣ ಯುವ ವೇದಿಕೆ ಅಧ್ಯಕ್ಷ ರಾಜಶೇಖರ್, ಅಧ್ಯಾಪಕ ಡಾ.ಆರ್.ನಿಂಗರಾಜು, ಜಾನಪದ ಕಲಾವಿದ ಕೃಷ್ಣಮೂರ್ತಿ ಮತ್ತಿತರರಿದ್ದರು.

# ವಿದ್ಯುತ್ ಚಾಲಿತ ವಾಹನಗಳ ಉತ್ತೇಜನಕ್ಕಾಗಿ 4150 ಕೋಟಿ ಬೃಹತ್ ಹೂಡಿಕೆ

- ಪ್ರಧಾನಿ ಮೋದಿಯವರ ದೂರದೃಷ್ಟಿ ಯೋಜನೆ
- ಬೃಹತ್ ಕೈಗಾರಿಕಾ ಸಚಿವ ಕುಮಾರಸ್ವಾಮಿ ಮಾಹಿತಿ
- ಇಂಗಾಲ ಡೈಆಕ್ಸೈಡ್ ಶೂನ್ಯ ಮಟ್ಟಕ್ಕಿಳಿಸುವ ಪ್ರಯತ್ನ




ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನವದೆಹಲಿಯ ತಮ್ಮ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದರು.

ಬೆಂಗಳೂರು, ಜೂ. 2(ಕೆಎಂಶಿ)– ದೇಶದ ಉದ್ದಗಲಕ್ಕೂ ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ದೂರದೃಷ್ಟಿಯೊಂದಿಗೆ ರೂಪಿಸಲಾಗಿರುವ 4,150 ಕೋಟಿ ರೂ. ಮೊತ್ತದ ಬೃಹತ್ ಹೂಡಿಕೆ ಯೋಜನೆಯನ್ನು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಘೋಷಿಸಿದ್ದಾರೆ.

ನವದೆಹಲಿಯ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಭೂಸಾರಿಗೆ ಕ್ಷೇತ್ರದಲ್ಲಿ ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸಬೇಕು ಎಂಬ ಪ್ರಧಾನಿಗಳ ಸಂಕಲ್ಪವನ್ನು ಈಡೇರಿಸುವ ಗುರಿಯೊಂದಿಗೆ ಈ ಹೂಡಿಕೆ ಯೋಜನೆ ಘೋಷಣೆ ಮಾಡಲಾಗಿದೆ ಎಂದರು.

ದೇಶದಲ್ಲಿ ಹೆಚ್ಚು ಪ್ರಮಾಣದಲ್ಲಿ ಎಲೆಕ್ಟ್ರಿಕ್ ಕಾರುಗಳ ಉತ್ಪಾದನೆ ಉತ್ತೇಜಿಸಲು ಯೋಜನೆ ಸಹಕಾರಿಯಾಗಿದೆ, ಈ ಉಪಕ್ರಮವು ಭಾರತವನ್ನು ಎಲೆಕ್ಟ್ರಿಕ್ ವಾಹನ ಉತ್ಪಾದನೆಗೆ ಜಾಗತಿಕ ಕೇಂದ್ರವನ್ನಾಗಿ ಮಾಡಲು ಪ್ರಧಾನಿ ಮೋದಿ ನೇತೃತ್ವದಲ್ಲಿ ಕೈಗೊಂಡಿರುವ ಒಂದು ಪ್ರಮುಖ ಪ್ರಯತ್ನವಾಗಿದೆ. ಯೋಜನೆಯು ಜಾಗತಿಕ ಮಟ್ಟದ ಎಲೆಕ್ಟ್ರಿಕ್ ವಾಹನ ತಯಾರಕರನ್ನು ಭಾರತದಲ್ಲಿ ಹೂಡಿಕೆ ಮಾಡಲು ಮತ್ತು ದೇಶಿಯವಾಗಿಯೇ ಕಾರುಗಳನ್ನು ತಯಾರಿಸಲು ಆಕರ್ಷಿಸುವ ಗುರಿಯನ್ನು ಹೊಂದಿದೆ.

ಮೂರು ವರ್ಷಗಳಲ್ಲಿ 4,150 ಕೋಟಿ ರೂ. ಹೂಡಿಕೆ ಮಾಡಲಾಗುತ್ತಿದೆ, ಈ ಕ್ಷೇತ್ರದಲ್ಲಿ ಸುಸ್ಥಿರ ಚಲನಶೀಲತೆಯತ್ತ ನಿರ್ದಿಷ್ಟ ಬದಲಾವಣೆಯನ್ನು ವೇಗಗೊಳಿಸಲು ವಿದೇಶಿ ಬಂಡವಾಳವನ್ನು ಸ್ಥಳೀಯ ಉತ್ಪಾದನೆಯೊಂದಿಗೆ ಸಂಯೋಜಿಸಲು ಯೋಜನೆಯು ಪೂರಕವಾಗಿರುತ್ತದೆ.

ಭಾರತ 2070ರ ವೇಳೆಗೆ ಇಂಗಾಲ ಹೊರಸೂಸುವಿಕೆಯನ್ನು ನಿವ್ವಳ ಶೂನ್ಯಕ್ಕೆ ಇಳಿಸುವ ದಿಟ್ಟ ಹೆಜ್ಜೆಗಳನ್ನು ಇಡುತ್ತಿದೆ, ಆರ್ಥಿಕ ಅಭಿವೃದ್ಧಿ, ತಾಂತ್ರಿಕ ಪ್ರಗತಿ ಮತ್ತು ಉದ್ಯೋಗ ಸೃಷ್ಟಿ, ಮೂರು ಗುರಿಗಳನ್ನು ಒಟ್ಟೊಟ್ಟಿಗೆ ಸಾಕಾರಗೊಳಿಸುವ ಉದ್ದೇಶವನ್ನು ಯೋಜನೆ ಹೊಂದಿದೆ.

ಈ ಯೋಜನೆ ಅಡಿಯಲ್ಲಿ ಅನುಮೋದಿಸಲಾದ ಕಂಪನಿಗಳು 35,000 ಯುಎಸ್ ಡಾಲರ್‌ನಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯ ನಾಲ್ಕು ಚಕ್ರಗಳ ಎಲೆಕ್ಟ್ರಿಕ್ ಬಿಲ್ಟ್ ಯೂನಿಟ್‌ಗಳನ್ನು ಪ್ರತಿಶತ 15ರಷ್ಟು ಕಡಿಮೆ ಕಸ್ಟಮ್ಸ್ ಸುಂಕದಲ್ಲಿ ಆಮದು ಮಾಡಿಕೊಳ್ಳಬಹುದು.

ಯೋಜನೆಯ ಅಡಿಯಲ್ಲಿ ದೊರೆಯುವ ಎಲ್ಲ ಉತ್ತೇಜನಗಳು ಷರತ್ತುಗಳೊಂದಿಗೆ ಕೂಡಿರುತ್ತವೆ, ಅರ್ಹತೆ ಪಡೆಯಲು ಕಂಪನಿಗಳು ಮೂರು ವರ್ಷಗಳ ಒಳಗೆ ಭಾರತದಲ್ಲಿ ಉತ್ಪಾದನಾ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕು ಮತ್ತು ಅದೇ ಅವಧಿಯಲ್ಲಿ ಕನಿಷ್ಠ ಪ್ರತಿಶತ 25ರಷ್ಟು ದೇಶೀಯ ಮೌಲ್ಯವರ್ಧನೆ ಸಾಧಿಸಬೇಕು.

ಐದು ವರ್ಷಗಳ ಒಳಗೆ ಕನಿಷ್ಠ 50 ಪ್ರತಿಶತಕ್ಕೆ ಏರಬೇಕು, ಆಟೋಮೊಬೈಲ್ ಯೋಜನೆಗಳಿಗೆ ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ ಯೋಜನೆಯ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳ ಅಡಿಯಲ್ಲಿ ಅನುಸಾರ ಮೇಲ್ವಿಚಾರಣೆ ಮಾಡಲಾಗುತ್ತದೆ ಮತ್ತು ಸಚಿವಾಲಯ ಅನುಮೋದಿಸಿದ ಪರೀಕ್ಷಾ ಏಜೆನ್ಸಿಗಳಿಂದ ಪ್ರಮಾಣೀಕರಣ ಕೈಗೊಳ್ಳಲಾಗುತ್ತದೆ ಎಂದರು. ಸ್ಥಳೀಯ ಮಟ್ಟದಲ್ಲಿ ಉತ್ಪಾದನೆಯನ್ನು ಉತ್ತೇಜಿಸುವುದಾಗಿದೆ, ಕಂಪನಿಗಳು ಸ್ಥಾವರ, ಯಂತ್ರೋಪಕರಣಗಳು, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಇತರ ಸಂಬಂಧಿತ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

ಭೂಮಿ ವೆಚ್ಚವನ್ನು ಹೂಡಿಕೆ ಲೆಕ್ಕಾಚಾರದಿಂದ ಹೊರಗಿಡಲಾಗಿದ್ದರೂ, ಕಾರ್ಖಾನೆ ಕಟ್ಟಡಗಳ ಮೇಲಿನ ವೆಚ್ಚಗಳನ್ನು ಪರಿಗಣಿಸಲಾಗುತ್ತದೆ, ಅವು ಬದ್ಧ ಹೂಡಿಕೆಯ ಶೇ.10ಕ್ಕಿಂತ ಹೆಚ್ಚಿಲ್ಲದಿದ್ದರೆ ಹೆಚ್ಚುವರಿಯಾಗಿ, ಹೂಡಿಕೆಯ ಶೇ.5ರವರೆಗೆ ಚಾರ್ಜಿಂಗ್ ಮೂಲ ಸೌಕರ್ಯ ಸ್ಥಾಪಿಸಬಹುದು.

ಯೋಜನೆಗೆ ಅರ್ಜಿ ಸಲ್ಲಿಸುವ ಪೋರ್ಟಲ್ ಅನ್ನು ಶೀಘ್ರವೇ ತೆರೆಯಲಾಗುವುದು, ಆರಂಭದಲ್ಲಿ 120 ದಿನಗಳವರೆಗೆ ತೆರೆದಿರುತ್ತದೆ, ಭವಿಷ್ಯದಲ್ಲಿ ಅಗತ್ಯವಿರುವಂತೆ ಸಚಿವಾಲಯ ಅದನ್ನು ಮನಾ ತೆರೆಯಬಹುದು, ಈ ಯೋಜನೆ ಮಾರ್ಚ್ 15, 2026 ರವರೆಗೆ ಅರ್ಜಿಗಳನ್ನು ಸ್ವೀಕರಿಸುತ್ತದೆ ಎಂದರು.

# 17 ವರ್ಷ ಕಳೆದರೂ ಶಾಸ್ತ್ರೀಯ ಕನ್ನಡ ಕೇಂದ್ರಕ್ಕೆ ಸ್ವಾಯತ್ತತೆ ಸಿಕ್ಕಿಲ್ಲ: ಸ್ವಾಯತ್ತತೆ ಪ್ರಕ್ರಿಯೆ, ಅನುದಾನ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಸಂಸದ ಯದುವೀರ್ ಪತ್ರ



ಮೈಸೂರು ಅರಮನೆ ಮಂಡಳಿಗೆ ಭೇಟಿ ನೀಡಿದ್ದ ಅಧಿಕೃತ ಭಾಷಾ ಕುರಿತ ಸಂಸದೀಯ ಸಮಿತಿ ಅಧ್ಯಕ್ಷ ಅಪ್ಪಚಂದು ಬರ್ಕೆ ಅವರಿಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು. ಸಮಿತಿ ಸದಸ್ಯರಾದ ಸತೀಶ್‌ಕುಮಾರ್ ಗೌತಮ್, ಟಿ.ಎಂ. ಸೆಲ್ವ ಗಣಪತಿ, ಓಂಪ್ರಕಾಶ್ ಭೂಪಾಲ್‌ಸಿಂಗ್, ಈರಣ್ಣ ಕಡಡಿ, ನೀಲ್‌ರಾಜ್ ದಂಗಿ, ಸಂಗೀತಾ ಯಾದವ್ ಹಾಗೂ ಧರಂ ಶೀಲ್ ಗುಪ್ತಾ ಈ ಸಂದರ್ಭ ಉಪಸ್ಥಿತರಿದ್ದರು.

ಮೈಸೂರು, ಜೂ. 2(ಆರ್‌ಕೆ)– ಕನ್ನಡ ಶಾಸ್ತ್ರೀಯ ಭಾಷೆಯಾಗಿ ಘೋಷಿಸಿ 17 ವರ್ಷ ಕಳೆದರೂ, ಮೈಸೂರಿನಲ್ಲಿರುವ ಶಾಸ್ತ್ರೀಯ ಕನ್ನಡ ಶ್ರೇಷ್ಠತಾ ಅಧ್ಯಯನ ಕೇಂದ್ರವು ಇನ್ನೂ ಸ್ವಾಯತ್ತತೆಗಾಗಿ ಕಾಯುತ್ತಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವ ಅವರು, ಪ್ರಸ್ತುತ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (ಸಿಐಐಎಲ್) ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಸ್ತ್ರೀಯ ಕನ್ನಡ ಅಧ್ಯಯನ ಸಂಸ್ಥೆಗೆ ಸ್ವಾಯತ್ತತೆ ನೀಡಿ ಭಾಷಾ ಸಂಶೋಧನೆ, ಪ್ರಕಟಣೆ, ಪ್ರಚಾರಕ್ಕೆ ಹೆಚ್ಚಿನ ಅನುದಾನ ನೀಡಬೇಕೆಂದು ಕೇಂದ್ರ ಶಿಕ್ಷಣ ಸಚಿವಾಲಯವನ್ನು ಒತ್ತಾಯಿಸಿದ್ದಾರೆ.

ಕೇಂದ್ರವು, ಯೋಜನಾ ನಿರ್ದೇಶಕರು, ಶೈಕ್ಷಣಿಕ ಹಾಗೂ ಆಡಳಿತ ಸಿಬ್ಬಂದಿಯನ್ನು ಹೊಂದಿದ್ದು, ಕನ್ನಡ ಭಾಷೆಯ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಮಹತ್ವಪೂರ್ಣ ಕೃತಿಗಳನ್ನು ಪ್ರಕಟಿಸಿದ್ದರೂ, ಅಗತ್ಯ ಸೌಲಭ್ಯಗಳಿಲ್ಲದೆ ಅದರ ಕಾರ್ಯಕ್ಷಮತೆ ಕುಂಠಿತವಾಗಿದೆ ಎಂದು ಅವರು ತಿಳಿಸಿದ್ದಾರೆ.

2004ರಲ್ಲಿ ಶಾಸ್ತ್ರೀಯ ಸ್ಥಾನಮಾನ ಪಡೆದ ತಮಿಳು ಭಾಷೆಗೆ 2008ರಲ್ಲೇ ಅದರ ಸಂಶೋಧನಾ ಕೇಂದ್ರಕ್ಕೆ ಸ್ವಾಯತ್ತತೆ ನೀಡಲಾಗಿದೆ. 2008ರಲ್ಲಿ ಶಾಸ್ತ್ರೀಯ ಸ್ಥಾನಮಾನ ಪಡೆದ ಕನ್ನಡವನ್ನು ಈ ವಿಷಯದಲ್ಲಿ ನಿರ್ಲಕ್ಷಿಸಲಾಗಿದೆ ಎಂದು ಅವರು ಅಸಮಾಧಾನ ಹೊರಹಾಕಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಮಾನಸ ಗಂಗೋತ್ರಿಯ ಬಸವ ಪೀಠದ ಮುಂದೆ 4.2 ಎಕರೆ ಜಾಗವನ್ನು ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರಕ್ಕೆ ಮೀಸಲಿರಿಸಲು ತೀರ್ಮಾನಿಸಿದೆ. ಕರ್ನಾಟಕ ಸರ್ಕಾರವು 2020ರಲ್ಲಿ ಭೂಮಿ ಮಂಜೂರು ಮಾಡಲು ಅನುಮತಿ ನೀಡಿದೆ ಎಂದು ಯದುವೀರ್ ತಿಳಿಸಿದ್ದಾರೆ.

ಆ ಸ್ಥಳದಲ್ಲಿ ಕಟ್ಟಡ ನಿರ್ಮಿಸಿ ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಉನ್ನತ ಶಿಕ್ಷಣ ಇಲಾಖೆಯನ್ನು ಒತ್ತಾಯಿಸಿರುವ ಅವರು, ಇದು ಕೇವಲ ಮೂಲಸೌಕರ್ಯಕ್ಕಷ್ಟೇ ಅಲ್ಲದೇ ಕನ್ನಡಕ್ಕೆ ಅರ್ಹವಾದ ಸಾಂಸ್ಥಿಕ ಮನ್ನಣೆ ನೀಡಬೇಕಾಗಿದೆ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

# ಬೆಂಗಳೂರಿನ 11 ವರ್ಷದ ಪೋರಿ ಚಾರ್ವಿ ನಾರ್ವೆ ಓಪನ್ ಚೆಸ್ ಚಾಂಪಿಯನ್



ಸ್ಟಾವಂಜರ್, ಜೂ.2– ಭಾರತದ ಚೆಸ್ ಲೋಕದಲ್ಲಿ ಇತ್ತೀಚೆಗೆ ಉದಯಿಸುತ್ತಿರುವ ಪ್ರತಿಭೆ 11 ವರ್ಷದ ಪೋರಿ ಚಾರ್ವಿ ಒಬ್ಬರು. ಅವರು ಈಗಾಗಲೇ ವಿಶ್ವನಾಥನ್ ಆನಂದ್ ಅವರಂತಹ ಆಟಗಾರರನ್ನು ಎದ್ದುನಿಂತು ಗಮನ ಸೆಳೆಯುವಂತೆ ಮಾಡಿದ್ದಾರೆ. ನಾರ್ವೆಯ ಸಿಟಿ ಸ್ಟಾವೆಂಜರ್‌ನಲ್ಲಿ ನಡೆಯುತ್ತಿರುವ ನಾರ್ವೆ ಓಪನ್ ಈವೆಂಟ್‌ನಲ್ಲಿ ಪ್ರಸ್ತುತ ಭಾಗವಹಿಸುತ್ತಿರುವ ಈಕೆ WFM (ವುಮನ್ ಫೈಡ್ ಮಾಸ್ಟರ್) ಚಾರ್ವಿ ಆಗಿದ್ದಾರೆ.

ಈಗಾಗಲೇ ಕಿರಿಯ ವಯೋಮಾನದ ವಿಶ್ವ ಚಾಂಪಿಯನ್ ಆಗಿರುವ ಬೆಂಗಳೂರು ಮೂಲದ ಚಾರ್ವಿ ಅವರನ್ನು ವಿಶೇಷವಾಗಿಸುವುದು ಅವರು ತಮ್ಮ ಚೆಸ್‌ನಲ್ಲಿ ಲೇಸರ್–ಫೋಕಸ್ಡ್ ಆಗಿರುವ ರೀತಿ. ಚಾರ್ವಿಯ ತರಬೇತುದಾರರ ಗುರುತನ್ನು ಬಹಿರಂಗಪಡಿಸಬೇಡಿ ಎಂದು ಪೋಷಕರು ಮನವಿ ಮಾಡಿದ್ದಾರೆ. (ಅವರು ಹಿಂದೆ ಸ್ವಯಂಸ್ ಮಿಶ್ರಾ ಮತ್ತು ಆರ್.ಬಿ. ರಮೇಶ್ ಅವರೊಂದಿಗೆ ಕೆಲಸ ಮಾಡಿದ್ದಾರೆ).

ಪ್ರತಿ ಪಂದ್ಯದ ನಂತರ ಚಾರ್ವಿ ಎಲ್ಲಾ ಎದುರಾಳಿಗಳೊಂದಿಗೆ ಚರ್ಚೆ ನಡೆಸುವುದನ್ನು ಒಂದು ಪ್ರಮುಖ ಅಂಶವನ್ನಾಗಿ ಮಾಡುತ್ತಾರೆ. ಸುಮಾರು 30 ನಿಮಿಷಗಳವರೆಗೆ ತನ್ನ ಎದುರಾಳಿಗಳ ಜೊತೆ ಚಾರ್ವಿ ಚರ್ಚಿಸುತ್ತಾಳೆ ಎಂದು ತನ್ನ ಐಟಿ ಕೆಲಸವನ್ನು ತೊರೆದು ಮಗಳ ಏಳಿಗೆ ಬಗ್ಗೆಯೇ ಗಮನಹರಿಸಿರುವ ಚಾರ್ವಿ ತಾಯಿ ಅಖಿಲಾ ಹೇಳುತ್ತಾರೆ. ಆಟವನ್ನು ಅರ್ಥ ಮಾಡಿಕೊಳ್ಳಲು ಮತ್ತು ತಮ್ಮ ಮಗಳೊಂದಿಗೆ ಹೆಜ್ಜೆ ಹಾಕಲು ತಾಯಿ ಅಖಿಲಾ ಮತ್ತು ತಂದೆ ಅನಿಲ್ ಕುಮಾರ್ ಯೂಟ್ಯೂಬ್ ಅನ್ನು ಅವಲಂಬಿಸಿದ್ದಾರೆ. ಆಕೆಯ ಪೋಷಕರು ತಮ್ಮ ಮಗಳು ಚೆಸ್ ಅನ್ನು ಕಲಿಯಬೇಕೆಂದು ನಿರ್ಧರಿಸಿದ್ದಿಲ್ಲ. ಆದರೆ ಚಾರ್ವಿ 8 ವರ್ಷದೊಳಗಿನ ಬಾಲಕಿಯರ ವಿಶ್ವ ಚಾಂಪಿಯನ್ ಶಿಪ್ ಗೆದ್ದ ನಂತರ ಪೋಷಕರು ಸಂಪೂರ್ಣವಾಗಿ ಮಗಳ ಬಗ್ಗೆಯೇ ಗಮನಹರಿಸಿದ್ದಾರೆ.


ಪ್ರತಿದಿನ ಚೆಸ್ ತರಬೇತಿಯ ಹೊರತಾಗಿ ಚಾರ್ವಿ ಸ್ವಲ್ಪ ದೈಹಿಕ ಚಟುವಟಿಕೆಯನ್ನು ಪಡೆಯಲು ಪ್ರತಿದಿನ ಸಂಜೆ ಈಜು ಮತ್ತು ಬ್ಯಾಡ್ಮಿಂಟನ್ ತರಗತಿಗಳಿಗೆ ಹೋಗುತ್ತಾಳೆ. ಚಾರ್ವಿ ಮಿಶ್ರ ಓಪನ್ ಈವೆಂಟ್‌ನಲ್ಲಿ ಭಾಗವಹಿಸಿದ್ದಾಳೆ.

# ನಾಳೆಯಿಂದ ಸರ್ಕಾರದ ಸಾಧನೆ ಬಿಂಬಿಸುವ ವಸ್ತುಪ್ರದರ್ಶನ

ಮೈಸೂರು, ಜೂ.2– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಸರ್ಕಾರದ 2ನೇ ವರ್ಷದ ಸಾಧನೆ ಹಾಗೂ ಸರ್ಕಾರದ ಯೋಜನೆಗಳನ್ನು ಬಿಂಬಿಸುವ ವಸ್ತುಪ್ರದರ್ಶನವನ್ನು ನಗರದ ಕೇಂದ್ರ ಬಸ್ ನಿಲ್ದಾಣವಾದ ಸಬರ್ಬನ್ ಬಸ್ ನಿಲ್ದಾಣದಲ್ಲಿ ಜೂ.4 ರಿಂದ ಜೂನ್ 10 ರವರೆಗೆ ಏರ್ಪಡಿಸಲಾಗುವುದು. ಜೂ.4 ರಂದು ಬೆಳಗ್ಗೆ 10.30 ಗಂಟೆಗೆ ನರಸಿಂಹರಾಜ ವಿಧಾನಸಭೆ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮ ಉದ್ಘಾಟಿಸುವರು.

# ಕೆಎಸ್‌ಡಿಎಲ್‌ನಿಂದ 10 ಸಾವಿರ ವನ ರಕ್ಷಕರಿಗೆ ಸುರಕ್ಷಾ ಕಿಟ್ ವಿತರಣೆ

## ನಾಳೆ ಮೈಸೂರಲ್ಲಿ ಕಾರ್ಯಕ್ರಮಕ್ಕೆ ಚಾಲನೆ



ಎಂ.ಬಿ.ಪಾಟೀಲ್

ಬೆಂಗಳೂರು, ಜೂ.2– ಅರಣ್ಯ ರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ರಾಜ್ಯದ 10 ಸಾವಿರ ಅರಣ್ಯ ರಕ್ಷಕರು, ವೀಕ್ಷಕರು, ಕಾವಾಡಿಗಳು, ಮಾವುತರು ಮತ್ತು ಚಾಲಕರಿಗೆ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತದ (ಕೆಎಸ್‌ಡಿಎಲ್) ವತಿಯಿಂದ ಕಾರ್ಯ ನಿರ್ವಹಣೆಗೆ ಅಗತ್ಯವಾದ ವಸ್ತುಗಳುಳ್ಳ ಕಿಟ್ ವಿತರಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಕೆಎಸ್‌ಡಿಎಲ್‌ನ ಸಿಎಸ್‌ಆರ್ ಉಪಕ್ರಮದ ಮೊದಲ ಕಾರ್ಯಕ್ರಮವು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜೂನ್ 4ರಂದು ಮಧ್ಯಾಹ್ನ 2ಕ್ಕೆ ನಡೆಯಲಿದ್ದು, ಆ ಕಾರ್ಯಕ್ರಮದಲ್ಲಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಅರಣ್ಯ ವೃತ್ತಗಳ 2,168 ಸಿಬ್ಬಂದಿಗೆ ಗುಣಮಟ್ಟದ ಬ್ಯಾಗ್, ಜರ್ಕಿನ್, ಶೂ ಮತ್ತು ನೀರಿನ ಬಾಟಲಿ ಇರುವ ಕಿಟ್ ಅನ್ನು ವಿತರಿಸಲಾಗುವುದು. ಅರಣ್ಯ ಸಚಿವ ಈಶ್ವರ ಖಂಡ್ರೆ, ಕೆಎಸ್‌ಡಿಎಲ್ ಅಧ್ಯಕ್ಷ ಸಿ.ಎಸ್.ನಾಡಗೌಡ, ವನ್ಯಜೀವಿ ಮಂಡಳಿ ಸದಸ್ಯ ಧ್ರುವ ಪಾಟೀಲ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯದೆಲ್ಲೆಡೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗೂ ಈ ಕಿಟ್ ವಿತರಿಸಲಾಗುವುದು. ಇದರಲ್ಲಿ 5 ಸಾವಿರ ಮಂದಿ ಕಾಯಂ ಸಿಬ್ಬಂದಿಯಾಗಿದ್ದು, ಮಿಕ್ಕವರು ತಾತ್ಕಾಲಿಕ ನೆಲೆಯಲ್ಲಿದ್ದಾರೆ. ಕಿಟ್ ಸ್ವೀಕರಿಸುವ ಪ್ರತಿಯೊಬ್ಬರಿಂದ ಮೊದಲೇ ಅಳತೆ ಪಡೆದು ಜರ್ಕಿನ್, ಶೂ ಖರೀದಿಸಲಾಗಿದೆ ಎಂದು ಹೇಳಿದರು.

ಕೆಎಸ್‌ಡಿಎಲ್ ಸಂಸ್ಥೆಯ 2024–25ನೇ ಸಾಲಿನ ಎರಡು ಕೋಟಿ ರೂ. ಸಿಎಸ್‌ಆರ್ ನಿಧಿಯನ್ನು ಈ ಕಿಟ್ ಖರೀದಿಗೆ ಬಳಸಲಾಗಿದೆ. ಕೆಎಸ್‌ಡಿಎಲ್‌ನ ಹೆಮ್ಮೆಯ ಉತ್ಪನ್ನವಾದ ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆ ಮುಖ್ಯವಾಗಿಬೇಕು. ಈ ಸಂಪತ್ತನ್ನು ಕಾಪಾಡುವವರೇ ವನ ರಕ್ಷಕರು. ಹಾಗಾಗಿ ಇವರ ಯೋಗಕ್ಷೇಮ ನಮ್ಮ ಹೊಣೆ ಎಂದರು.

ವನ್ಯಜೀವಿ ಮಂಡಳಿ ಸದಸ್ಯರೂ ಆದ ಸೊಸೈಟಿ ಫಾರ್ ಪ್ರೊಟೆಕ್ಷನ್ ಆಫ್ ಪ್ಲಾಂಟ್ಸ್ ಅಂಡ್ ಅನಿಮಲ್ಸ್ (ಎಸ್‌ಪಿಪಿಎ) ಸಂಸ್ಥಾಪಕ ಧ್ರುವ ಪಾಟೀಲ ಅವರು ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕರಾಗಿದ್ದು, ಪ್ರತಿಕೂಲ ಸಂದರ್ಭಗಳಲ್ಲಿ ವನ ರಕ್ಷಕರು ಎದುರಿಸುವ ಸಮಸ್ಯೆಗಳಿಗೆ ಕಿವಿಯಾಗಿ ಈ ಯೋಜನೆಯನ್ನು ರೂಪಿಸಲು ನೆರವಾಗಿದ್ದಾರೆ ಎಂದು ಇದೇ ವೇಳೆ ಹೇಳಿದರು.

# ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರಿಗೆ ರಾಜ್ಯ ಸರ್ಕಾರದಿಂದ ತಲಾ 10 ಲಕ್ಷ ಪುರಸ್ಕಾರ

## ಸಾಹಿತ್ಯಕ್ಕೆ ಸಮಾಜ ಬೆಸೆಯುವ ಶಕ್ತಿ ಇದೆ: ಸಿಎಂ ಸಿದ್ದರಾಮಯ್ಯ



ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರನ್ನು ರಾಜ್ಯ ಸರ್ಕಾರದಿಂದ ಅಭಿನಂದಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು, ಜೂ. 2(ಕೆಎಂಶಿ)– ಸಾಹಿತ್ಯಕ್ಕೆ ಸಮಾಜವನ್ನು ಬೆಸೆಯುವ ಶಕ್ತಿ ಇದೆ, ಇದರ ಮೂಲಕ ಸಮಾಜ ಒಗ್ಗೂಡಿಸಬೇಕೇ ಹೊರತು ವಿಭಜಿಸಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತಿ ಬಾನು ಮುಷ್ತಾಕ್ ನಮ್ಮ ಭಾಷೆಗೆ ಬೂಕರ್ ಪ್ರಶಸ್ತಿ ಒದಗಿಸಿಕೊಡುವ ಮೂಲಕ ಕನ್ನಡದ ಕೀರ್ತಿ ಹೆಚ್ಚಿಸಿದ್ದಾರೆ. ಇದು ಇಡೀ ಕನ್ನಡ ಜಗತ್ತಿನ ಹೆಮ್ಮೆ ಎಂದು ಮೆಚ್ಚುಗೆ ಸೂಚಿಸಿದರು.

ತಮ್ಮ ಕತೆಗಳು ಮತ್ತು ಅನುವಾದದ ಮೂಲಕ ಕನ್ನಡಕ್ಕೆ ಕೀರ್ತಿ ತಂದ ಬಾನು ಮುಷ್ತಾಕ್, ದೀಪಾ ಬಾಸ್ತಿ ಅವರಿಗೆ ತಲಾ 10 ಲಕ್ಷ ರೂ. ಪುರಸ್ಕಾರ ನೀಡಲಾಗುವುದು.

ಬಾನು ಅವರ ಕತೆಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಲು, ಅನುವಾದಕ್ಕೆ ಸರ್ಕಾರದ ನೆರವು ನೀಡಲಾಗುವುದು. ಪತ್ರಕರ್ತೆಯಾಗಿ, ಲೇಖಕಿಯಾಗಿ, ವಕೀಲರಾಗಿ, ಹೋರಾಟಗಾರ್ತಿಯಾಗಿ ಬಾನು ಮುಷ್ತಾಕ್ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ.

ಲಂಕೇಶ್ ಪತ್ರಿಕೆಯಲ್ಲಿ ಪತ್ರಕರ್ತೆಯಾಗಿ ಬರೆಯುತ್ತಲೇ, ವಕೀಲೆಯಾಗಿ ಬಡವರ ಪರ ವಕಾಲತ್ತು ವಹಿಸುತ್ತಾ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಲಭಿಸಿರುವುದೇ ಬಾನು ಮುಷ್ತಾಕ್ ಬರವಣಿಗೆಗಳಲ್ಲಿ ಸಮಾಜಮುಖಿ ಸತ್ವ ಇದೆ ಎನ್ನುವುದಕ್ಕೆ ಸಾಕ್ಷಿ. ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ಧ್ವನಿಯಾಗಿ ಮೌಢ್ಯ ವಿರೋಧಿಸಿ ಬರೆಯುವ ಪ್ರಗತಿ ಪರ ಎದೆಗಾರಿಕೆ, ಸಾಹಿತ್ಯದ ಮೂಲಕ ಮಾನವೀಯ ಸಂದೇಶ ನೀಡುವ ಜವಾಬ್ದಾರಿಯನ್ನು ಬಾನು ಮುಷ್ತಾಕ್ ನಿರ್ವಹಿಸಿದ್ದಾರೆ.

ಕವಿರಾಜಮಾರ್ಗದಲ್ಲಿ ಪರಧರ್ಮ ಮತ್ತು ಪರವಿಚಾರಗಳನ್ನು ಸಹಾನುಭೂತಿಯಿಂದ ನೋಡಬೇಕು ಎಂಬ ಕರೆ ಇದ್ದರೆ, ಆದಿಕವಿ ಪಂಪ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದಿದ್ದು, ಬಸವಣ್ಣನವರು 'ಇವ ನಮ್ಮವ' ಎಂಬುದಾಗಿ ಹೇಳಿದರೆ, ಹೆಣ್ಣಿನ ಧ್ವನಿಯಾದ ಅಕ್ಕ ಮಹಾದೇವಿ ಇದನ್ನೇ ಪ್ರತಿಪಾದಿಸಿದ್ದು, ಇವರೆಲ್ಲರ ಆಶಯಗಳ ಮುಂದುವರಿಕೆಯಾಗಿ ಬಾನು ಮುಷ್ತಾಕ್ ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ ಎಂದರು.

## ಕನ್ನಡ ಸಹಿಷ್ಣು ಭಾಷೆ: 8 ಜ್ಞಾನಪೀಠ, 1 ಬೂಕರ್ ಪ್ರಶಸ್ತಿ; ಇದು ಕನ್ನಡದ ತಾಕತ್ತು

### ಕಮಲ್‌ಹಾಸನ್‌ಗೆ ಬಾನು ಮುಷ್ತಾಕ್ ತಿರುಗೇಟು

ಬೆಂಗಳೂರು, ಜೂ.2– ಕನ್ನಡ ಸಹಿಷ್ಣು ಭಾಷೆ, 8 ಜ್ಞಾನಪೀಠ, ಒಂದು ಬೂಕರ್ ಪ್ರಶಸ್ತಿ ಕನ್ನಡದ ತಾಕತ್ತು ಎಂದು ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರು ತಮಿಳು ನಟ ಕಮಲ್‌ಹಾಸನ್‌ಗೆ ತಿರುಗೇಟು ನೀಡಿದ್ದಾರೆ.

ರಾಜ್ಯ ಸರ್ಕಾರ ವಿಧಾನಸೌಧದಲ್ಲಿ ಆಯೋಜಿಸಿದ್ದ ಅವರ ಸನ್ಮಾನ ಸಭೆಯಲ್ಲಿ ಮಾತನಾಡಿದ ಮುಷ್ತಾಕ್, ಕರ್ನಾಟಕದಲ್ಲಿ ಇತರ ಭಾಷೆಗಳ ಬಗ್ಗೆ ಅಸಹಿಷ್ಣುತೆ ಏಕೆ ಇದೆ ಎಂದು ರಾಷ್ಟ್ರೀಯ ಮಾಧ್ಯಮಗಳು ತಮ್ಮನ್ನು ಆಗಾಗ್ಗೆ ಕೇಳುತ್ತವೆ. ಅದಕ್ಕೆ ನಾನು ಕನ್ನಡದ ಬಗ್ಗೆ ನಿಮ್ಮ ತಿಳುವಳಿಕೆ ತಪ್ಪು. ಕನ್ನಡದಷ್ಟು ಸಹಿಷ್ಣು ಭಾಷೆ ಇನ್ನೊಂದಿಲ್ಲ. ಇದು ಇತರ ಅನೇಕರಿಗೆ ವೇದಿಕೆಯನ್ನು ನೀಡಿದ ಭಾಷೆ. ಎಂಟು ಜ್ಞಾನಪೀಠ ಪ್ರಶಸ್ತಿಗಳು ಮತ್ತು ಒಂದು ಬೂಕರ್ ಪ್ರಶಸ್ತಿಯನ್ನು ಹೊಂದಿರುವ ಹೆಗ್ಗಳಿಕೆಯನ್ನು ಕನ್ನಡ ಭಾಷೆ ಹೊಂದಿದೆ ಎಂದು ಮುಷ್ತಾಕ್ ಹೇಳಿದರು.

ತಮಿಳಿನಿಂದ ಕನ್ನಡ ಹುಟ್ಟಿತು ಎಂದು ನಟ ಕಮಲ್‌ಹಾಸನ್ ಹೇಳಿಕೆಗೆ ರಾಜ್ಯದಲ್ಲಿ ಆಕ್ರೋಶ ಭುಗಿಲೆದ್ದಿದೆ. ಕಮಲ್ ಅಭಿನಯದ 'ಥಗ್ ಲೈಫ್' ಚಿತ್ರವನ್ನು ನಿಷೇಧಿಸಬೇಕು ಎಂದು ಕನ್ನಡಪರ ಸಂಘಟನೆಗಳು, ಬಿಜೆಪಿ ಒತ್ತಾಯಿಸುತ್ತಿವೆ. ಈ ಮಧ್ಯೆ ಕನ್ನಡದ ಗರಿಮೆಯನ್ನು ತಿಳಿಸುವ ಮೂಲಕ ಬಾನು ಮುಷ್ತಾಕ್ ಅವರು ಕಮಲ್ ಹಾಸನ್‌ಗೆ ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಿಮ್ಮ ಗೆಳೆಯ ಮದುವೆ ಆಗ್ತಿರೋ ಹುಡ್ಗಿ ಚೆನ್ನಾಗಿಲ್ಲ. ನೀವಾದ್ರೂ ಹೇಳಬಾರ್ದಾ?

ಗಂಡ : ನಾನು ಯಾಕೆ ಹೇಳಲಿ, ನಾನ್ ಮದುವೆ ಆಗುವಾಗ ಬಡ್ಡಿ ಮಗ ಸುಮ್ನೆ ಇದ್ದ...!


**ಮೈಸೂರು ಮಿತ್ರ**

ಮಂಗಳವಾರ 3 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


### ಅಮೃತ ವಾಹಿನಿ..........

ದೀಪದ ಬೆಳಕಿನಲ್ಲಿ ಒಬ್ಬಾತ ಗೀತೆಯನ್ನು ಓದಬಲ್ಲ, ಮತ್ತೊಬ್ಬಾತ ಕಳ್ಳತನ ಮಾಡಬಲ್ಲ, ಅದು ದೀಪದ ತಪ್ಪಲ್ಲ. ಮನುಷ್ಯ ಗುಣದ ತಪ್ಪು. – ಸಂತ ಕಬೀರರು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಹಣ ಇರುವ ಗಂಡನ ಕೈ ಹಿಡಿದರೂ ಋಣ ಇರುವಷ್ಟೇ ಪ್ರಾಪ್ತಿ.

## ನಿಮ್ಮ ಪತ್ರಗಳು

### ■ ಜಡತ್ವಗೊಂಡಿರುವ ಸ್ಥಳೀಯ ಸಂಸ್ಥೆಗಳ ಆಡಳಿತ ಚುರುಕುಗೊಳಿಸಲು ಚುನಾವಣೆ ಅವಶ್ಯಕ

ಮಾನ್ಯರೇ,

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಚುನಾವಣೆಗಳು ಸರ್ವೇ ಸಾಮಾನ್ಯ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ವಿಧಾನಸಭಾ ಚುನಾವಣೆ, ಸಂಸತ್ ಚುನಾವಣೆ ಕಾಲ ಕಾಲಕ್ಕೆ ನಡೆಯುತ್ತಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾತ್ರ ನನೆಗುದಿಗೆ ಬಿದ್ದಿರುವುದು ವಿಪರ್ಯಾಸವೇ ಸರಿ..

ರಾಜ್ಯದಲ್ಲಿನ ವಿಧಾನಸೌಧದಲ್ಲಿ ಶಾಸಕಾಂಗ, ಕಾರ್ಯಾಂಗ ಉತ್ತಮ ರೀತಿಯಲ್ಲಿ ಆಡಳಿತ ನಡೆಸಬೇಕಾದರೆ ಅದಕ್ಕೆ ಸ್ಥಳೀಯ ಸಂಸ್ಥೆಗಳ ಸಹಕಾರ ಬಹಳ ಮುಖ್ಯ. ಸ್ಥಳೀಯ ಸಂಸ್ಥೆಗಳಲ್ಲಿ ಜನಪರ ಕೆಲಸ ಕಾರ್ಯಗಳು ನಿರಂತರವಾಗಿ ನಡೆದಾಗ ಮಾತ್ರ ಆಳುವ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.

ಆದರೆ ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಇದಕ್ಕೆ ಪ್ರಮುಖ ಕಾರಣ ವರ್ಷಗಳು ಕಳೆದರೂ ರಾಜ್ಯದ ಸ್ಥಳೀಯ ಸಂಸ್ಥೆಗಳಾದ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಮಹಾ ನಗರಪಾಲಿಕೆಗಳಿಗೆ ಚುನಾವಣೆ ನಡೆಸದ ರಾಜ್ಯ ಸರ್ಕಾರ ವಿವಿಧ ಕಾರಣಗಳನ್ನು ನೀಡುತ್ತಾ ಮುಂದೂಡುತ್ತಲೇ ಬಂದಿದೆ. ಇದರಿಂದ ಇಂತಹ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಿಲ್ಲದೆ ಅಧಿಕಾರಿಗಳದ್ದೇ ದರ್ಬಾರ್ ಆಗಿದೆ. ಅಲ್ಲದೆ ಸರ್ಕಾರಿ ಕಚೇರಿಗಳಲ್ಲಿ ಜನಪ್ರತಿನಿಧಿಗಳು ಇಲ್ಲದ ಕಾರಣ ಮಧ್ಯವರ್ತಿಗಳ ಹಾವಳಿ ಮತ್ತಷ್ಟು ಹೆಚ್ಚಾಗಿದ್ದು, ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಅಧಿಕಾರಿಗಳ ದರ್ಪದಿಂದಾಗಿ ಮಧ್ಯವರ್ತಿಗಳನ್ನು ಅವಲಂಬಿಸುವ ಅನಿವಾರ್ಯತೆ ಉಂಟಾಗಿದೆ.

ಮೈಸೂರು ಮಹಾ ನಗರಪಾಲಿಕೆಯಲ್ಲಿ ಸಾರ್ವಜನಿಕರ ಆಸ್ತಿಪಾಸ್ತಿಗೆ ಸಂಬಂಧಿಸಿದಂತೆ ಬಿ–ಖಾತೆ, ಇ–ಖಾತೆ ಎಂಬ ಕಾನೂನನ್ನು ಜಾರಿಗೆ ತಂದು ಜನರಿಗೆ ಇದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲವಾಗಿದೆ. ಜನರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ನಗರಪಾಲಿಕೆಯಲ್ಲಿ ಜನಪ್ರತಿನಿಧಿಗಳಿಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಿಗಳು ನಿಗದಿಪಡಿಸಿದ ಸಮಯದಲ್ಲೇ ಜನರು ಹೋಗಬೇಕಾಗಿರುವುದರಿಂದ ಅವರ ಸಮಯಕ್ಕೆ ಕೂಲಿ ಮಾಡಿ ಬದುಕುವ ಬಡವರು, ಮಧ್ಯಮ ವರ್ಗದ ಜನರು ಕಚೇರಿಗೆ ಅಲೆಯಲೂ ಆಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಕುಂಟುನೆಪ ಹೇಳದೆ ಆದಷ್ಟು ಶೀಘ್ರದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ.

**–ನಾರಾಯಣ ಲೋಲಪ್ಪ, ಮೈಸೂರು ನಗರ ಬಿಜೆಪಿ ಎಸ್.ಟಿ.ಮೋರ್ಚಾ ಪ್ರಧಾನ ಕಾರ್ಯದರ್ಶಿ ಮೈಸೂರು.**

### ■ ಇರಬೇಕು ಇರುವಂತೆ ಎಂದ ಕವಿ ಎಚ್ಚೆಸ್ವಿ ಅಸ್ತಂಗತ

ಮಾನ್ಯರೆ,



'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ ಮಳೆ ಸುರಿಸಿ ಹಗುರಾದ ಮುಗಿಲಿನಂತೆ' ಎಂದು ಹೇಳಿದ ಭಾವಯಾನಿಯ ಕವಿ ಎಚ್ಚೆಸ್ವಿ ಅವರು ಮತ್ತೆ ಎಂದೂ ಬಾರದೂರಿಗೆ ಹೋಗಿರುವುದು ಕನ್ನಡಿಗರಿಗೆ ತುಂಬಲಾರದ ನಷ್ಟ, ಅವರ ಭಾವಗೀತೆಗಳಾದ ಪ್ರೀತಿ ಕೊಟ್ಟ ರಾಧೆಗೆ, ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ, ಲೋಕದ ಕಣ್ಣಿಗೆ ರಾಧೆಯು ಕೂಡ, ಇಷ್ಟು ಕಾಲ ಒಟ್ಟಿಗಿದ್ದು ಎಷ್ಟು ಬೆರೆತರೂ ಹಾಗೂ ತೂಗು ಮಂಚ ಹಾಡುಗಳನ್ನು ಕೇಳದ ಕನ್ನಡಿಗರೇ ಇಲ್ಲ. 85ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಚ್ಚೆಸ್ವಿ ಅವರು ರಾಜ್ಯೋತ್ಸವ ಪ್ರಶಸ್ತಿ, ಆಕಾಶವಾಣಿ ರಾಷ್ಟ್ರೀಯ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಇನ್ನೂ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿರುವ ಸಂಗತಿ ಹೆಮ್ಮೆ ಪಡುವಂತದ್ದು. ಎಚ್ಚೆಸ್ವಿ ಅವರ ನವ್ಯ ಕವಿತೆಗಳು, ಭಾವಗೀತೆಗಳು, ಚಲನಚಿತ್ರ ಗೀತೆಗಳು ಹಾಗೂ ಸಂಭಾಷಣೆ, ಮಕ್ಕಳ ಸಾಹಿತ್ಯ, ಸೀರಿಯಲ್ ಟೈಟಲ್ ಟ್ರ್ಯಾಕ್‌ಗಳು ಜನರ ಮನಸ್ಸನ್ನು ಸೆಳೆದಿವೆ. ಸರ್ ನೀವು ಕನ್ನಡಕ್ಕೆ ನೀಡಿದ ಕೊಡುಗೆಯನ್ನು ಕನ್ನಡಿಗರು ಎಂದಿಗೂ ಮರೆಯುವುದಿಲ್ಲ, ಹೋಗಿ ಬನ್ನಿ ನಿಮಗೊಂದು ನನ್ನ ಮನದಾಳದ ಸಲಾಮ್.

**– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

### ■ ವಿಜಯಲಕ್ಷ್ಮಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಒಲಿಯಲಿ




ಮಾನ್ಯರೆ,

ಐಪಿಎಲ್ ಅಂದರೆ ಇಂಡಿಯನ್ ಪ್ರೀಮಿಯರ್ ಲೀಗ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರಿದಂತೆ ಹಲವಾರು ತಂಡಗಳೊಂದಿಗೆ ವಿಶ್ವದಾದ್ಯಂತ ತನ್ನದೇ ಆದ ಅಪಾರ ಅಭಿಮಾನಿಗಳನ್ನು ಹೊಂದಿರುವ ಲೀಗ್ ಆಗಿದೆ. ಕನ್ನಡಿಗರು ಮಾತ್ರವಲ್ಲದೇ ಭಾರತದಾದ್ಯಂತ ಎಲ್ಲಾ ಭಾಷಿಕರು ಇಷ್ಟಪಡುವ ನೆಚ್ಚಿನ ತಂಡವೆಂದರೆ ಅದು ರಾಯಲ್ ಚಾಲೆಂಜರ್ಸ್ ಬೆಂಗಳೂರು. 2008 ರಿಂದ ಸತತವಾಗಿ 18 ವರ್ಷವೂ ಭಾಗವಹಿಸಿ ಆಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು 2009, 2011, 2016ನೇ ಆವೃತ್ತಿಗಳಲ್ಲಿ ಫೈನಲ್ ಪ್ರವೇಶಿಸಿದರೂ ಒಂದು ಬಾರಿಯೂ ಜಯಶಾಲಿ ಆಗಿಲ್ಲ. ಕೊಹ್ಲಿ ಸೇರಿದಂತೆ ಹಲವಾರು ದಿಗ್ಗಜ ಆಟಗಾರರಿರುವ ಈ ತಂಡವನ್ನು ಬೆಂಗಳೂರಿಗರಷ್ಟೇ ಅಲ್ಲದೇ ಉಳಿದ ತಂಡಗಳ ಅಭಿಮಾನಿಗಳೂ ಸಹ ಇಷ್ಟಪಡುತ್ತಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 2025 ನೇ ಸಾಲಿನ 18ನೇ ಆವೃತ್ತಿಯ ಫೈನಲ್ ತಲುಪಿದೆ. ಫೈನಲ್ ಪಂದ್ಯದ ದಿನಾಂಕ 3.6.2025. ಅಂದರೆ, 3+6+2+0+2+5=18. ಆವೃತ್ತಿಯು 18, ಕೊಹ್ಲಿ ಜೆರ್ಸಿ ನಂಬರ್ ಸಹ 18 ಕಾಕತಾಳೀಯವೆಂಬಂತೆ ಹೀಗಾದರೂ ಸಹ 18ರ ನಂಟಿನಿಂದ ಈ ಬಾರಿ ವಿಜಯಲಕ್ಷ್ಮಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಒಲಿಯಲಿ. 'ಈ ಸಲ ಕಪ್ ನಮ್ದೆ' ಎಂದು ಹದಿನೆಂಟು ವರ್ಷಗಳಿಂದ ಕನವರಿಸುತ್ತಿರುವ ಅಭಿಮಾನಿಗಳ ಮಹದಾಸೆ ನೆರವೇರಲಿ ಎಂದು ಹಾರೈಸೋಣ.

**–ಬಿ.ಗಣೇಶ್, ಕೆ.ಜಿ.ಕೊಪ್ಪಲು, ಮೈಸೂರು.**



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

**ದೀಪ ಸಾಲು**

# ಕನ್ನಡ್ ಸುದ್ದೀಗ್ ಏನ್ರ ಬಂದ್ರೆ ಮಾನಾ ಉಳ್ಸಾಕಿಲ್ಲ...!




ಪ್ರಾಕೃತವನ್ನು ಹೊರತುಪಡಿಸಿದರೆ ಕದಂಬಲಿಪಿಯ ಮುಖೇನ ತನ್ನ ಭಾಷಾ ಸ್ವರೂಪಕ್ಕೆ ಸ್ವಂತ ಲಿಪಿಯನ್ನು ರೂಪಿಸಿಕೊಂಡು ಅಕ್ಷರಲೋಕದಲ್ಲಿ ಕಾಣಿಸಿಕೊಂಡ ಭಾರತೀಯ ಭಾಷೆಗಳಲ್ಲಿ ಕನ್ನಡ ಮೊದಲ ಸ್ಥಾನದಲ್ಲಿದೆ. ಶಿಲಾಶಾಸನಗಳಲ್ಲಿ ತಮಿಳು ಕನ್ನಡಕ್ಕಿಂತ ಮೊದಲು ಕಾಣಿಸಿಕೊಂಡಿದೆಯಾದರೂ ಬಹುಕಾಲ ಅದು ಅಕ್ಷರ ರೂಪವಾದ ಸುಸ್ಥಿರ ಲಿಪಿಯನ್ನು ಪಡೆಯಲೇ ಇಲ್ಲ. ಹಾಗೆ ನೋಡಿದರೆ 'ವಟ್ಟೆಳ್ಳುತ್ತು' ಗ್ರಂಥ ತಮಿಳು ಲಿಪಿಗಳಲ್ಲಿ ನೆಲೆಹುಡುಕುತ್ತಾ ಸ್ಥಿರ ರೂಪವನ್ನು ತಳೆಯಲು ಕ್ರಿಶ 7ನೇ ಶತಮಾನದವರೆಗೂ ಹೆಣಗಾಡಿದ್ದು ಭಾಷಾ ಇತಿಹಾಸ. ಆದರೆ ಕನ್ನಡದ ವಿಷಯ ಹಾಗಾಗಲಿಲ್ಲ. ಕ್ರಿಶ 450ರ ಹಲ್ಮಿಡಿ ಶಾಸನ ಬರುವಷ್ಟರಲ್ಲೇ ತನ್ನ ಸುಸಜ್ಜಿತ ಅಭಿವ್ಯಕ್ತಿ ಕ್ರಮಕ್ಕಾಗಿ ಕನ್ನಡ ತನ್ನ ಲಿಪಿಯನ್ನೂ ರೂಪಿಸಿಕೊಂಡುಬಿಟ್ಟಿತ್ತು.

ಹಲ್ಮಿಡಿ ಶಾಸನದಲ್ಲಿ ಸಂಸ್ಕೃತದ ಪದಬಳಕೆ ಹೆಚ್ಚಾಗಿದ್ದರೂ ಕನ್ನಡದ ಪದಗಳು ರಾಜಾರೋಷವಾಗಿ ಬಳಕೆಯಾಗಿದ್ದವು. ಇಷ್ಟಾಗಿಯೂ ಕನ್ನಡ ಸಂಸ್ಕೃತ ಜನ್ಯವಲ್ಲ, ಪಂಚ ದ್ರಾವಿಡಗಳಲ್ಲಿ ಕನ್ನಡವೂ ಕೂಡ ಒಂದು ಪ್ರಮುಖ ಸೋದರ ಭಾಷೆ. ಇಷ್ಟಾಗಿಯೂ ಕನ್ನಡನಾಡು–ನುಡಿಗೆ ತನ್ನದೇ ಆದ ಪರಂಪರೆ ಮತ್ತು ಇತಿಹಾಸಗಳಿವೆ.

ಹಲ್ಮಿಡಿ ಶಾಸನ ಕನ್ನಡದ ಮೊಟ್ಟಮೊದಲ ಉಪಲಬ್ಧ ಶಾಸನ ವಾದರೆ, ಕವಿರಾಜ ಮಾರ್ಗ ಕನ್ನಡದ ಮೊದಲ ಉಪಲಬ್ಧ ಗ್ರಂಥ. ಕಾವೇರಿಯಿಂದ ಗೋದಾವರಿವರೆಗೆ ಕನ್ನಡದ ಸೀಮೆಯಿತ್ತು ಎಂದು ಮಾರ್ಗಕಾರನೇ ಕನ್ನಡದ ಗಡಿ ಗುರುತಿಸುತ್ತಾನೆ. ಹಾಗೆಯೇ ಹಲ್ಮಿಡಿಶಾಸನ ದೊರೆತ ಕ್ರಿ.ಶ.450ಕ್ಕಿಂತ ಹಿಂದೆಯೇ ಜಯಬಂಧು, ದುರ್ವಿನೀತ ಮುಂತಾದ ಕವಿಗಳು ಕಾವ್ಯರಚನೆಯಲ್ಲಿ ತೊಡಗಿದ್ದರೆಂಬ ಮಾಹಿತಿಯನ್ನು ಕ್ರಿಶ 850ರಲ್ಲೇ ಕವಿರಾಜ ಮಾರ್ಗವನ್ನು ಬರೆದ ಶ್ರೀ ವಿಜಯ ಉಲ್ಲೇಖಿಸುತ್ತಾನೆ.

ಅಂದ ಮೇಲೆ ಕನ್ನಡ ಭಾಷೆಯ ಪ್ರಾಚೀನತೆ ಕ್ರಿ.ಶ.ದ ಆರಂಭದ ಶತಮಾನಗಳಿಗೆ ಬಂದು ನಿಲ್ಲುತ್ತದೆ. ಕನ್ನಡ ಭಾಷೆಯನ್ನು ಕ್ರಿ.ಶ.ದ ಪೂರ್ವಕಾಲದಲ್ಲಿ ನರ್ಮದಾ ನದಿ ತೀರದಲ್ಲಿ ಗಿರಿಜನಾಂಗವೊಂದು ಬಳಸುತ್ತಿತ್ತೆಂದು ವಿಂಧ್ಯಪರ್ವದ ತಪ್ಪಲು ಪ್ರದೇಶದಲ್ಲಿ ಆ ಜನಾಂಗ ವಾಸವಾಗಿತ್ತೆಂದು ಡಾ.ಸಂಗಮೇಶ ಸವದತ್ತಿಮಠ ಕನ್ನಡ ಭಾಷೆಯ ಪ್ರಾಚೀನತೆ ಕುರಿತು ಬರೆಯುತ್ತಾ ಉಲ್ಲೇಖಿಸುವ ಮಾತು ಇಲ್ಲಿ ಗಮನಾರ್ಹ. ನಮ್ಮ ರಾಷ್ಟ್ರಕೂಟರ ರಾಜಧಾನಿ ರೇವಾನಗರಿ ಮೊದಲು ನರ್ಮದಾ ನದಿತೀರದಲ್ಲಿತ್ತೆಂದು ನಂಬಲು ಬೇಕಾದ ದಾಖಲೆಗಳಿವೆ. ಆದರೆ ಕವಿರಾಜ ಮಾರ್ಗಕಾರನೇ ಹೇಳುವ ಹಾಗೆ ಕಾವೇರಿಯಿಂದ ಗೋದಾವರಿವರೆಗಿದ್ದ ಕನ್ನಡನಾಡು ಈಗ ಗೋದಾವರಿವರೆಗೆ ಇದೆಯಾ ಹಾಗಂತ ಈಗ ನರ್ಮದಾ ನದಿ ಹರಿಯುವ ನೆರೆಯ ಆಂಧ್ರಪ್ರದೇಶ ನಮ್ಮದು ಎಂದು ಹೇಳಬಹುದೆ. ತಮಿಳಿನ ಪ್ರಾಚೀನ ಕಾವ್ಯ 'ಶಿಲಪ್ಪದಿಗಾರಂ'ನ ಉಲ್ಲೇಖದಂತೆಯೇ ಕನ್ನಡವು ಕ್ರಿ.ಶದ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿತ್ತೆಂಬುದನ್ನ ಅದು ದೃಢಪಡಿಸುತ್ತದೆ.

ಅಷ್ಟೇ ಏಕೆ! ಶಾತವಾಹನರ ರಾಜ ಹಾಲ ಸಂಗ್ರಹಿಸಿದ ಪ್ರಾಚೀನ ಕೃತಿ ಗಾಥಾಸಪ್ತಶತಿ ಎಂಬ ಕಾವ್ಯದಲ್ಲಿ ಕನ್ನಡದ ಪದ ಬಳಕೆ ಇವೆ. ಕ್ರಿ.ಶ ಮೂರನೇ ಶತಮಾನದ ಅಶೋಕನ ಶಾಸನವೊಂದರಲ್ಲಿ ಇಸಿಲ (ಕೋಳಿ) ಎಂಬ ಕನ್ನಡದ ಶಬ್ದ ಬಳಕೆಯಾಗಿದೆ. ಅಂದರೆ ಕ್ರಿ.ಶ ಎರಡನೇ ಶತಮಾನದ ವೇಳೆಗೇ ಕನ್ನಡ ತನ್ನ ಸ್ವಂತ ಅಸ್ತಿತ್ವವನ್ನು ಹೊಂದಿತ್ತು ಎನ್ನಬಹುದು. ಆನಂತರ ಕನ್ನಡ ಭಾಷೆ ಬಳಕೆಯ ದೃಷ್ಟಿಯಿಂದ ನೋಡುವುದಾದರೆ ಸುಶಿಕ್ಷಿತರಷ್ಟೇ ಅಲ್ಲ ಕನ್ನಡದ ಮಟ್ಟಿಗೆ ದೇಸಿ ಜನಪದರ ಆಡುನುಡಿ ಕೂಡ ಕಂಠಸ್ಥವಾಗಿಯೇ ಇದ್ದರೂ ಕನ್ನಡದ ಗ್ರಂಥಸ್ಥ ಭಾಷೆಯಂತೆಯೇ ಬೆಳೆಯತೊಡಗಿತು. ಹನ್ನೆರಡನೇ ಶತಮಾನದ ವಚನ ಚಳವಳಿಯ ನಂತರ ಭಾಷೆ ತನ್ನ ಬೆಳವಣಿಗೆಯ ಅವಸ್ಥಾಪ್ರಭೇದಗಳಲ್ಲಿ ವಿಭಿನ್ನ ಆಯಾಮಗಳಲ್ಲಿ ಪ್ರವಹಿಸುತ್ತಿತು. ಕನ್ನಡವು ಪ್ರಾಚೀನ ಕನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ಆಧುನಿಕ ಕನ್ನಡ– ಹೀಗೆ ವಿಶಿಷ್ಟ ಲಕ್ಷಣಗಳೊಂದಿಗೆ ನಿಖರವಾಗಿ ಗುರುತಿಸಿಕೊಳ್ಳುತ್ತಾ ಬೆಳೆಯತೊಡಗಿತು.

ಕನ್ನಡನಾಡಿಗೊಂದು ಪೂರ್ವೇತಿಹಾಸವಿದ್ದಂತೆ, ಕನ್ನಡನುಡಿಗೂ ತನ್ನದೇ ಆದ ಭಾಷಾ ಚರಿತ್ರೆ ಇದೆ. ಕ್ರಿಶ ಹತ್ತನೆಯ ಶತಮಾನ ಕನ್ನಡದ ಮಟ್ಟಿಗೆ ಸುವರ್ಣಯುಗ. ಹಾಗಂತ ಕರೆಸಿಕೊಳ್ಳುವಷ್ಟರ ಮಟ್ಟಿಗೆ ಮಹಾಕಾವ್ಯಗಳ ಮಹಾಯುಗ ಹತ್ತನೆಯ ಶತಮಾನದಲ್ಲಿ ತೆರೆದುಕೊಂಡಿತು. ಗದ್ಯ–ಪದ್ಯ ಮಿಶ್ರಿತ ಚಂಪೂ ಕಾವ್ಯ ಪರಂಪರೆಯಲ್ಲಿ ಪಂಪ–ಪೊನ್ನ–ರನ್ನ–ರಂತಹ ಕವಿಗಳು ಕನ್ನಡ ಸಿರಿದೇವಿಯ ಮಣಿಮುಕುಟಕ್ಕೆ ತಮ್ಮ ಕಾವ್ಯ ರತ್ನಗಳನ್ನಿಟ್ಟು ಅಲಂಕರಿಸಿದರು. ಇಂತಹ ಸಿರಿಭೂವಲಯದ ಕನ್ನಡ ಭಾಷೆಗೆ ದಕ್ಷಿಣ ದ್ರಾವಿಡ ಭಾಷೆಗಳ ಗುಂಪಿನಲ್ಲಿ ಪ್ರಮುಖ ಸ್ಥಾನವಿದೆ. ಸುಮಾರು 2 ಸಾವಿರ ವರ್ಷಗಳಿಗೂ ಹೆಚ್ಚು ವರ್ಷಗಳ ಸುದೀರ್ಘ ಇತಿಹಾಸವಿದೆ. ಇದಾವುದನ್ನು ನಮ್ಮ ಸಮಕಾಲೀನ ಲೇಖಕರು ಅಭಿಮಾನಕ್ಕೆಂದೋ, ಅತಿರೇಕಕೆಂದೋ ಬರೆದುಕೊಂಡವರಲ್ಲ. ಇವೆಲ್ಲವೂ ಕ್ರಿಶ 450 ಮತ್ತು ಕ್ರಿಶ 850ರ ಆಯಾಯ ಸಾಂದರ್ಭಿಕ ಮತ್ತು ಸಹಜ ಕಾವ್ಯಗಳ ದಾಖಲೀಕರಣ, ನಿಸರ್ಗದತ್ತ ಶಾಸನಗಳ ಉಲ್ಲೇಖಗಳ ಇತಿಹಾಸ. ಪ್ರಿಯ ಕನ್ನಡಿಗ ಇಲ್ಲಿ ಗಮನಾರ್ಹ ಪ್ರಾತಿನಿಧಿ ಅಂಶಗಳನ್ನಷ್ಟೇ ಉಲ್ಲೇಖಿಸಬಯಸುತ್ತೇನೆ.

ಏಕೆಂದರೆ ಕನ್ನಡ ಕನ್ನಡಿಗ–ಕರ್ನಾಟಕಗಳು ಈಗ ಮೊದಲಿನಂತಿಲ್ಲ, ಭಾಷೆ–ನೆಲ–ಜಲ–ನಾಡು–ನುಡಿಗಳ ವಿಷಯದಲ್ಲಿ,

> **"ಕನ್ನಡನಾಡಿಗೊಂದು ಪೂರ್ವೇತಿಹಾಸವಿದ್ದಂತೆ, ಕನ್ನಡನುಡಿಗೂ ತನ್ನದೇ ಆದ ಭಾಷಾ ಚರಿತ್ರೆ ಇದೆ. ಕ್ರಿ.ಶ. ಹತ್ತನೆಯ ಶತಮಾನ ಕನ್ನಡದ ಮಟ್ಟಿಗೆ ಸುವರ್ಣಯುಗ. ಹಾಗಂತ ಕರೆಸಿಕೊಳ್ಳುವಷ್ಟರ ಮಟ್ಟಿಗೆ ಮಹಾಕಾವ್ಯಗಳ ಮಹಾಯುಗ 10ನೇ ಶತಮಾನದಲ್ಲಿ ತೆರೆದುಕೊಂಡಿತು. ಗದ್ಯ–ಪದ್ಯ ಮಿಶ್ರಿತ ಚಂಪೂ ಕಾವ್ಯ ಪರಂಪರೆಯಲ್ಲಿ ಪಂಪ–ಪೊನ್ನ–ರನ್ನ–ರಂತಹ ಕವಿಗಳು ಕನ್ನಡ ಸಿರಿದೇವಿಯ ಮಣಿ ಮುಕುಟಕ್ಕೆ ತಮ್ಮ ಕಾವ್ಯ ರತ್ನಗಳನ್ನಿಟ್ಟು ಅಲಂಕರಿಸಿದರು. ಇಂತಹ ಸಿರಿಭೂವಲಯದ ಕನ್ನಡ ಭಾಷೆಗೆ ದಕ್ಷಿಣ ದ್ರಾವಿಡ ಭಾಷೆಗಳ ಗುಂಪಿನಲ್ಲಿ ಪ್ರಮುಖ ಸ್ಥಾನವಿದೆ. ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ವರ್ಷಗಳ ಸುದೀರ್ಘ ಇತಿಹಾಸವಿದೆ. ಇದಾವುದನ್ನು ನಮ್ಮ ಸಮಕಾಲೀನ ಲೇಖಕರು ಅಭಿಮಾನಕ್ಕೆಂದೋ, ಅತಿರೇಕಕ್ಕೆಂದೋ ಬರೆದುಕೊಂಡವರಲ್ಲ.**

ಕನ್ನಡಕ್ಕೆ ಅಪಚಾರವಾದಾಗ ಅದನ್ನ ಪ್ರಶ್ನಿಸಲಿಕ್ಕೆ ಎಚ್ಚೆತ್ತ ಕನ್ನಡ ಚಳವಳಿಗಾರರಿದ್ದಾರೆ, ಬರಹಗಾರರಿದ್ದಾರೆ. ಪತ್ರಿಕೆಗಳು, ಮಾಧ್ಯಮಗಳು, ಕನ್ನಡವನ್ನು ಗೌರವಿಸುವ ಮನಸ್ಸುಗಳು ಇಂದು ಎಚ್ಚರವಾಗಿವೆ. ಬರವಣಿಗೆ ಈ ನಾಡಿನ ಅಕ್ಷರ ಲೋಕವನ್ನು ಶ್ರೀಮಂತಗೊಳಿಸಿದರೆ, ಕನ್ನಡಪರ ಹೋರಾಟದ ಮೆರವಣಿಗೆಗಳು ಈ ನಾಡಿನ ಸಾಂಘಿಕ ಶಕ್ತಿಯನ್ನು ರೂಪಿಸಿವೆ. ಏಕೀಕರಣ ಚಳವಳಿಯ ಘೋಷವಾಕ್ಯ 'ಹಾರಿಸಿ ಏರಿಸಿ ಕನ್ನಡದ ಬಾವುಟ'– ಎಂಬ ಹೋರಾಟದ ಮಾತುಗಳು ಇಂದಿಗೂ ಜೀವಂತವಾಗಿವೆ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಕೆಲಸ ಕೊಡಿ, ನಾಮಫಲಕಗಳಲ್ಲಿ ಕನ್ನಡ ಬಳಸಿ, ಕನ್ನಡದ ಪತ್ರಿಕೆಗಳು, ಪುಸ್ತಕಗಳನ್ನು ಕೊಂಡು ಓದಿ, ಹೀಗೆ ಕನ್ನಡಿಗರ ಹಿತಾಸಕ್ತಿಗಾಗಿ ಈ ಹೋರಾಟದ ಮೆರವಣಿಗೆಗಳು ನಿರ್ದಿಷ್ಟವಾಗಿ ಹೆಜ್ಜೆಹಾಕಿವೆ. 1987ರಲ್ಲೇ ಬೆಂಗಳೂರಿನಲ್ಲಿ ವಿಶ್ವೇಶ್ವರಯ್ಯ ಗೋಪುರದ ಮುಂದೆ ಡಾ.ಸರೋಜಿನಿ ಮಹಿಷಿ ವರದಿ ಅನುಷ್ಠಾನಕ್ಕೆ ಕನ್ನಡ ಚಳವಳಿಗಾರರು ಧರಣಿ ನಡೆಸುವುದರೊಂದಿಗೆ ಮೆರವಣಿಗೆಗಳು ಕನ್ನಡದ ಪರ ನಡೆದುಹೋದದ್ದು ಇತಿಹಾಸ. ಹಳದಿ ಕೆಂಪು ಕನ್ನಡದ ಬಾವುಟ ರೂಪಿಸಿದ ಮ.ರಾಮಮೂರ್ತಿ ಬೆಂಗಳೂರಿನಲ್ಲಿ ತಮಿಳು ಬಾವುಟ ಕೆಳಗಿಳಿಸಿ ಕನ್ನಡ ಬಾವುಟ ಹಾರಿಸಿದ ಸಂದರ್ಭಗಳೇ ಕನ್ನಡ ಚಳುವಳಿಗಳ ದ್ಯೋತಕವಾಯಿತು. 1993ರ ನ.1ರಂದು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ 10 ಸಾವಿರಕ್ಕೂ ಹೆಚ್ಚು ಜನ ಸೇರಿ 128 ಕನ್ನಡ ಸಂಘಟನೆಗಳು ಕನ್ನಡ ರಾಜ್ಯೋತ್ಸವ ಆಚರಿಸಿ ಸಂಭ್ರಮಪಡುತ್ತಿದ್ದವು.

ಹೀಗೆ ರಾಜ್ಯೋತ್ಸವವನ್ನು ಆಚರಿಸಿ ಸಂಭ್ರಮಪಡುತ್ತಿದ್ದ ದಿನವೇ ಪಲ್ಲವರ ದೊರೆ ನರಸಿಂಹವರ್ಮ ಪುಲಿಕೇಶಿಯನ್ನು ಸೋಲಿಸುವ ಕಾಲ್ಪನಿಕ ಕತೆಯುಳ್ಳ 'ಕಾಂಚಿತಲೈವನ್'–ತಮಿಳು ಸಿನಿಮಾ ತೆರೆ ಕಂಡಿತ್ತು. ಚಿತ್ರತಂಡ ಪುಲಿಕೇಶಿಯನ್ನು ವಿದೂಷಕನಂತೆ ಚಿತ್ರಿಸಿತ್ತು, ಅದರಲ್ಲಿ ಕನ್ನಡ ಬಾವುಟವನ್ನು ತುಳಿಯುವ ದೃಶ್ಯವಿತ್ತು. ಕನ್ನಡ ಚಳವಳಿಗಾರರು ಈ ಘಟನೆಯಿಂದ ಕೆರಳಿದರು. ಆಗನೋಡಿ ಬೆಂಗಳೂರಿಗೆ ಸೀಮಿತವಾಗಿದ್ದ ಕನ್ನಡ ಚಳವಳಿ ನಾಡಿನಾದ್ಯಂತ ಹಬ್ಬಿತು. ನಾಡಿನ ಮೂಲೆಮೂಲೆಗಳಲ್ಲಿ ಕಪ್ಪು–ಕೆಂಪು ಬಣ್ಣದ ತಮಿಳು ಧ್ವಜದ ಜಾಗಗಳಲ್ಲಿ ಹಳದಿ–ಕೆಂಪು ಬಣ್ಣದ ಧ್ವಜಗಳು ಹಾರಾಡಿದವು, ಅಂದಿನಿಂದಲೇ ಡಬ್ಬಿಂಗ್ ಚಿತ್ರಗಳನ್ನು ವಿರೋಧಿಸಿ ಕನ್ನಡಿಗರು ಬೀದಿಗಿಳಿದರು.

ಇದೆಲ್ಲವೂ ಇತಿಹಾಸ. 1980ರ ಹೊತ್ತಿಗೆ ಕನ್ನಡ ಚಳವಳಿ ತನ್ನ ಹಿಂದಿನ ಆವೇಶ ಕಳೆದುಕೊಂಡು ನಿಸ್ತೇಜವಾಗಿತ್ತು. ಆಗ ಕನ್ನಡ ಚಳವಳಿಗೆ ಕನ್ನಡ ಜಾಗೃತಿಗೆ ಚಿಮ್ಮುಹಲಗೆಯಂತೆ ಗೋಚರಿಸಿದ್ದು ಗೋಕಾಕ್ ಚಳವಳಿ. 1982ರಲ್ಲಿ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಎನ್ನುವ ಜಯಘೋಷದೊಂದಿಗೆ ಗೋಕಾಕ್ ಚಳವಳಿ ರೂಪುಗೊಂಡಿತು. ನಾಡಿನ ಕನ್ನಡಿಗರು, ಚಳುವಳಿಗಾರರು, ಗಣ್ಯರು, ಸಾಹಿತಿಗಳು ವಿವಿಧ ಕ್ಷೇತ್ರಗಳ ಪ್ರಮುಖರು ಚಳವಳಿಯಲ್ಲಿ ಭಾಗವಹಿಸಿದರು. ಕನ್ನಡದ ವರನಟ ಡಾ.ರಾಜ್‌ಕುಮಾರ್ ಅದರ ನೇತೃತ್ವ ವಹಿಸಿದ್ದರು. ಕನ್ನಡಿಗರ ಹಿತಾಸಕ್ತಿಗೆ ನಾಡಿನಾದ್ಯಂತ ಜನಸಾಗರವೇ ಹರಿದು ಬಂದಿತ್ತು. ಹೀಗೆ ಕನ್ನಡದ ವಿಷಯಕ್ಕೆ, ಕನ್ನಡದ ಅಸ್ಮಿತೆಗೆ, ದೊಡ್ಡದೊಂದು ಇತಿಹಾಸವಿದೆ.

ಕನ್ನಡ ಭಾಷೆಯ ಉಗಮ ಮತ್ತು ಅದರ ಬೆಳವಣಿಗೆ, ಬರವಣಿಗೆ, ಮೆರವಣಿಗೆ, ಲಿಪಿಯ ಅನುಸಂಧಾನ, ಸಾಹಿತ್ಯ ಸೃಷ್ಟಿ, ಭಾಷಾ ವೈವಿಧ್ಯತೆ ಮುಂತಾಗಿ ಅದರದ್ದೆ ಆದ ವೈವಿಧ್ಯಮಯ ಬೆಳವಣಿಗೆಗಳು ಆಯಾಯ ಕಾಲಾನುಕಾಲಕ್ಕೆ ಬೆಳೆಯುತ್ತಾ, ಕನ್ನಡಿಗರ ಜೊತೆ ಬೆರೆಯುತ್ತಾ, ನಾಡಿನ ಜೀವನಾಡಿಯಾಗಿ ಭಾಷೆ ಪ್ರವಹಿಸುತ್ತಾ ಬಂದಿದೆ. ಇಂತಹ ಭಾಷೆ ಕುರಿತಾಗಿ ಚರ್ಚಿಸಬೇಕಾದಾಗ ಭಾಷಾ ಇತಿಹಾಸವನ್ನು ಅಧ್ಯಯನ ಮಾಡಿದ ಅಧ್ಯಯನಕಾರರ ವಿಚಾರಗೋಷ್ಠಿಗಳಲ್ಲೋ, ಸಾಹಿತ್ಯ ಸಮ್ಮೇಳನಗಳಲ್ಲೊ ಅಥವಾ ಒಂದು ತಾತ್ವಿಕ ಚೌಕಟ್ಟಿನಲ್ಲೋ ಮಾತನಾಡಬೇಕು. ಅದನ್ನು ಕಮಲಹಾಸನ್ ಥರದ ನಟರು ತಮ್ಮ ಸಿನಿಮಾ ಪಬ್ಲಿಸಿಟಿಯ ಕಾರ್ಯಕ್ರಮದಲ್ಲಿ ಮಾತನಾಡಿದರೆ ಹೇಗೆ? ಹಾಗೆ ಮಾತನಾಡುತ್ತಾ ಕನ್ನಡ ತಮಿಳಿನಿಂದ ಹುಟ್ಟಿದೆ ಎಂದು ಏಕಾಏಕಿ ಹೇಳಿಬಿಟ್ಟರೆ ಶುದ್ಧ ಶೋಧನಾತ್ಮಕ ದಾಖಲೆಗಳನ್ನು ಒದಗಿ ಸುವವರು ಯಾರು? ಒಂದು ಭಾಷೆ ಇನ್ನೊಂದು ಭಾಷೆಗೆ ಸೋದರ ಭಾಷೆಯೇ! ಅಥವಾ ಉಪ ಭಾಷೆಯೇ! ಮೂಲ ಮಾತೃ ಘಟಕಗಳಿಂದ ಸಿಡಿದ ಭಾಷಾ ಅನುಸಂಧಾನವೋ! ಯಾವುದದು! ಎಂಬುದರ ಬಗ್ಗೆ ತಾಂತ್ರಿಕ ಮತ್ತು ತಾತ್ವಿಕ ಪುರಾವೆಗಳನ್ನು ಒದಗಿಸಬೇಕು. ಆಗ ಮಾತ್ರ ಆ ಮಾತಿಗೆ ಬೆಲೆಬರುತ್ತದೆ.



ಕಮಲ್ ಹಾಸನ್

ಹೇಳಿ ಕೇಳಿ ಇದು ಭಾಷೆಯ ವಿಷಯ, ಅತ್ಯಂತ ಸೂಕ್ಷ್ಮ ಹಾಗೂ ಭಾವಾನಾತ್ಮಕ ಬಂಧ. ಕನ್ನಡಿಗರು ಮಾತ್ರವೇ ಅಲ್ಲ ಎಲ್ಲ ಭಾರತೀಯ ಭಾಷೆಗಳ ವಾರಸುದಾರರು ತಮ್ಮತಮ್ಮ ತಾಯಿ ಭಾಷೆಗಳ ವಿಷಯದಲ್ಲಿ ವಿವಾದಗಳು ಸೃಷ್ಟಿಯಾದಾಗ ಸಹಜವಾಗಿಯೇ ಕೆರಳುತ್ತಾರೆ. ಅದು ತಮಿಳೇ ಆಗಿರಲಿ, ತೆಲುಗೇ ಆಗಿರಲಿ, ಮಲಯಾಳಂ ಆಗಿರಲಿ, ಅದು ಯಾವುದೇ ಇರಲಿ ಉತ್ತರದಿಂದ ದಕ್ಷಿಣದವರೆಗೆ ಇಂದಿಗೂ ಜನಮಾನಸದ ನಿಲುವುಗಳು ಹಾಗೆಯೇ ಇವೆ. ಹಾಗಾದಾಗ ಏಕೀಕರಣ ಚಳವಳಿ, ಗೋಕಾಕ್ ಚಳವಳಿಗಳನ್ನು ಸಂಘಟಿಸಿ, ಅಖಂಡ ಕರ್ನಾಟಕ ಎಂದು ರಾಷ್ಟ್ರಕವಿ ಕುವೆಂಪು ಅವರಿಂದ ಒಕ್ಕಟ್ಟು ದೀಕ್ಷೆ ಪಡೆದ ರಾಜ್ಯ ಭಾಷೆಯೊಂದು ಪಕ್ಕದ ಇನ್ನೊಂದು ರಾಜ್ಯ ಭಾಷೆಯಿಂದ ಹುಟ್ಟಿದೆ ಎಂದುಬಿಟ್ಟರೆ ಆ ಮಾತಿಗೆ ಅರ್ಥ ಇದೆಯಾ? ಕಿಮ್ಮತ್ತಿದೆಯಾ? ಅದನ್ನ ಪ್ರತಿಭಟಿಸದೆ ಕನ್ನಡಿಗರು ಮೌನವ್ರತ ಆಚರಿಸಬೇಕಾ, ಕನ್ನಡಿಗರು ಅದನ್ನು ಪ್ರತಿಭಟಿಸುವುದರಲ್ಲಿ ತಪ್ಪೇನಿದೆ! ಅದರಲ್ಲೂ ಆ ರೀತಿ ಮಾತಾಡಿದ ಕಲಾವಿದ ಇಂದು ನಿನ್ನೆಯವರಲ್ಲ ಕಲಾಕ್ಷೇತ್ರದಲ್ಲಿ ತಮ್ಮದೇ ಕಲಾ ಹೆಗ್ಗುರುತನ್ನು ಹೊಂದಿದ ಕಲಾವಿದ. ಅವರು ದೇಶಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗಲೆಲ್ಲಾ ಯಾರೂ ವಿರೋಧಿಸಲಿಲ್ಲ. ಸಾಮಾಜಿಕ ಜಾಲತಾಣ ಹೊರತುಪಡಿಸಿ, ಅಲ್ಲಿಯೂ ಪರ–ವಿರೋಧದ ಚರ್ಚೆಗಳಾದವು ಅಷ್ಟೆ. ಆದರೆ ಈಗ ಮಾತ್ರ ಇಷ್ಟೊಂದು–ಚರ್ಚೆ, ಆವೇಶಗಳಿಗೆ ಕಾರಣ ತರ್ಕಬದ್ಧವಲ್ಲದ ಅವರ ಮಾತಿಗೆ ಇಂಬು ಕೊಡುವ ದಾಖಲೆಗಳನ್ನು ಇಡಬೇಕು ಅಥವಾ ಬೇಷರತ್ತಾಗಿ ಕನ್ನಡಿಗರ ಕ್ಷಮೆಯಾಚಿಸಬೇಕು. ಅವರು ಕ್ಷಮೆ ಕೇಳಿದ ಕೂಡಲೇ ಚಿಕ್ಕವರಾಗುವುದಿಲ್ಲ.

ತಮಿಳಿನ ತಲೈವಾ ರಜನೀಕಾಂತ್ ಕೂಡ ಹೀಗೆ ಪ್ರಕರಣವೊಂದರಲ್ಲಿ ಕ್ಷಮೆ ಕೇಳಿ ಪ್ರಕರಣವನ್ನು ಸುಖಾಂತ್ಯಗೊಳಿಸಿದ್ದು ಇತಿಹಾಸ. ಈಗಲೂ ಕೋಟ್ಯಾನುಕೋಟಿ ಕನ್ನಡಿಗರ ಮನಸ್ಸಿಗೆ ನೋವಾದಾಗ ವ್ಯಕ್ತಿಗಲ್ಲ, ಸಂಸ್ಥೆಗಲ್ಲ, ಒಂದು ನಾಡಿಗೆ ಕೋಟ್ಯಾನುಕೋಟಿ ಕನ್ನಡಿಗರಿಗೆ ತಮ್ಮ ಒಂದು ಕ್ಷಮಾಪಣೆಯ ಮಾತಿನಿಂದ ಭಾಷಾಗೌರವವನ್ನು ಕಾಪಾಡಿದಂತಾದರೆ ಅದು ವ್ಯಕ್ತಿಯ ವ್ಯಕ್ತಿತ್ವದ ದೊಡ್ಡತನವಲ್ಲವೇ? ಕಮಲಹಾಸನ್‌ರ ಪ್ರೌಢಿಮೆ ಕಲಾವಂತಿಕೆಗಳನ್ನು ಮೆಚ್ಚಿಕೊಂಡು ಮತ್ತೊಬ್ಬ ಕಲಾವಿದರು ನಿನ್ನೆಯಷ್ಟೆ ಮೈಸೂರಿನಲ್ಲಿ ಭಾಷೆಯನ್ನು ಭಾವುಕತೆಯಿಂದ ನೋಡದೆ ಭಾಷೆಯನ್ನು ಭಾಷೆಯಾಗಿ ನೋಡಿ ಅವರ ಹೇಳಿಕೆಯಿಂದ ಯಾರಿಗೂ ಅವಮಾನವಾಗಿಲ್ಲ–ಎಂದು ಮಾತಾಡಿದ್ದಾರೆ. ಭಾಷೆಯನ್ನು ಭಾಷೆಯಾಗಿಯೇ ನೋಡಿದ್ದರೆ ಇದೇ ಕಮಲಹಾಸನ್ 'ಬೆಂಕಿಯಲ್ಲಿ ಅರಳಿದ ಹೂ'– ಎಂಬ ಕನ್ನಡ ಚಿತ್ರದಲ್ಲಿ ಕಂಡಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡು ಹಾಡುವ

**'ಮುಂದೆ ಬನ್ನಿ ಇನ್ನೂ ಮುಂದೆ ಬನ್ನಿ**
**ಬೇರೆ ಯಾರು ಈ ಮಾತನ್ನು ಹೇಳೋದಿಲ್ಲ,**
**ಹಿಂದೆ ತಳ್ಳೋ ಜನರೆ ಹೆಚ್ಚು ಊರಲ್ಲೆಲ್ಲಾ'**

ಹಾಡಿಗೆ ಹೆಜ್ಜೆ ಹಾಕುವಾಗ ಇಡೀ ಥಿಯೇಟರಿನ ಜನ ಹಾಡು ಕೇಳುತ್ತಾರೆ. ಅದೇ ಹಾಡಿನ ಮುಂದಿನ ಚರಣ

**'ಕನ್ನಡ ನಾಡಿನಲ್ಲಿ ಕನ್ನಡ ಮಾತಾಡು**
**ನಿನ್ನ ಮನೇಲಿ ನಿನ್ನ ಭಾಷೆ ಮಾತಾಡು'**

ಎನ್ನುವ ಸಾಲು ಹೇಳುತ್ತಿದ್ದಂತೆ ಜನ, ಥಿಯೇಟರಿನಲ್ಲಿ ಹುಚ್ಚೆದ್ದು ಕುಣಿಯುತ್ತಾರೆ. ಅದೇ ಕಲಾವಿದ ಅದೇ ಹಾಡು, ಆದರೆ ಕನ್ನಡದ ವಿಷಯ ಬಂದಾಗ ಮಾತ್ರ ಶಿಳ್ಳೆ, ಚಪ್ಪಾಳೆ, ಸಂತೋಷ, ಸಂಭ್ರಮ ಯಾಕೆ? ಅದು ಭಾಷೆಯೊಂದಗಿನ ಭಾವುಕತೆ, ರಂಗಭೂಮಿ, ಸಿನಿಮಾ, ಕತೆ–ಕಾದಂಬರಿಗಳಲ್ಲಿ, ದೇಶಭಾಷೆಗಳ ಕುರಿತಂತೆ

ಭಾವುಕವಾಗಿ ಚಿತ್ರಿಸಿದ ಅಸಂಖ್ಯಾತ ಕಲಾಕೃತಿಗಳ ಮೂಲ ಬಂಡವಾಳವೇ ಜನರ ಭಾವುಕತೆಯ ನಗದೀಕರಣ. ಅಂದ ಮೇಲೆ ಭಾಷೆಯ ವಿಷಯದಲ್ಲಿ ಭಾವುಕತೆ ಬೇಡ ಎಂದರೆ ಹೇಗೆ?

ಈಗ,

**ಆಗ್ನೆ ಮಾಡೋ ಬಿಗೋಳ್ ಎಲ್ಲಾ**
**ದೇವ್ರೆ ಆಗ್ಲಿ–ಎಲ್ಲ!**
**ಕನ್ನಡ್ ಸುದ್ದೀಗ್ ಏನ್ರ ಬಂದ್ರೆ**
**ಮಾನಾ ಉಳಸಾಕಿಲ್ಲ.**

ಎಂಬ ಜಿ.ಪಿ.ರಾಜರತ್ನಂರ ಮಾತು ಇಲ್ಲಿ ಅನ್ವರ್ಥ. ಕನ್ನಡದ ಪ್ರೀತಿಗೆ ಕೈಯೆತ್ತಿ, ತಲೆಯೆತ್ತಿ ಕನ್ನಡದ ಘನ ಇತಿಹಾಸಕ್ಕೆ ನಾವೂ ದಾಖಲಿಸೋಣ ನಮ್ಮ ಅಭಿಮತ ಏನಂತೀರಿ?

## ಸೇವಾಕಾರ್ಯಗಳೊಂದಿಗೆ ವಕೀಲ ಹೆಚ್.ಎಸ್.ಪುಟ್ಟರಸ ಹುಟ್ಟುಹಬ್ಬ ಆಚರಣೆ

ಮೈಸೂರು,ಜೂ.2(ಪಿಎಂ)– ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷರೂ ಆದ ಡಿಸಿಸಿ ಕಾರ್ಯದರ್ಶಿ ಮತ್ತು ವಕೀಲ ಹೆಚ್.ಎಸ್. ಪುಟ್ಟರಸ (ಪ್ರೇಮ್) ತಮ್ಮ 50ನೇ ವರ್ಷದ ಹುಟ್ಟುಹಬ್ಬವನ್ನು ಸೇವಾ ಕಾರ್ಯಗಳೊಂದಿಗೆ ಭಾನುವಾರ ಸಮಾಜಮುಖಿಯಾಗಿ ಆಚರಿಸಿಕೊಂಡರು.

ಕೂರ್ಗಳ್ಳಿ ಕೈಗಾರಿಕೆ ಪ್ರದೇಶದಲ್ಲಿರುವ ಜನಸೇವಾ ಟ್ರಸ್ಟ್‌ನ ಚಿಗುರು ಆಶ್ರಮದಲ್ಲಿ ನಿರಾಶ್ರಿತರು ಮತ್ತು ಬುದ್ಧಿಮಾಂದ್ಯ ಮಹಿಳೆಯರಿಗೆ ಸ್ವೆಟರ್‌ಗಳ ವಿತರಣೆ ಹಾಗೂ ಅವರಿಗೆ ಸಿಹಿ ಜೊತೆಗೆ ಉಪಾಹಾರದ ವ್ಯವಸ್ಥೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸಿಕೊಂಡರು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮತ್ತು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಆಶ್ರಮದ ನಿವಾಸಿಗಳಿಗೆ ಸ್ವೆಟರ್‌ಗಳನ್ನು ವಿತರಿಸಿದರು.

ಇದೇ ವೇಳೆ ಚಿಗುರು ಆಶ್ರಮದ ಸಂಸ್ಥಾಪಕಿ ಸುಷ್ಮಾ ಮಾತನಾಡಿ, ವಿದ್ಯಾಭ್ಯಾಸ ಬಳಿಕ ಮುಂದೇನೆಂದು ಆಲೋಚನೆಯಲ್ಲಿದ್ದಾಗ ಆಶ್ರಮ ಆರಂಭಿಸಿದೆ.





ಮೈಸೂರಿನ ಚಿಗುರು ಆಶ್ರಮದಲ್ಲಿ ಸ್ವೆಟರ್‌ಗಳನ್ನು ಇಲ್ಲಿನ ನಿವಾಸಿಗಳಿಗೆ ವಿತರಿಸಲಾಯಿತು. ಬಲಚಿತ್ರದಲ್ಲಿ ಪುಟ್ಟರಸ ಅವರನ್ನು ಹಿತೈಷಿಗಳು, ಸ್ನೇಹಿತರು ಅಭಿನಂದಿಸುತ್ತಿರುವುದು.

ಕಳೆದ ವರ್ಷ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸರ್ಕಾರದ ನೆರವಿನ ಜೊತೆಗೆ ದಾನಿಗಳೂ ಕೈ ಜೋಡಿಸಿದರೆ ಸಂಕಷ್ಟದಲ್ಲಿರುವ ಜನರಿಗೆ ನೆರವಾಗಬಹುದು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಂ.ಲಕ್ಷ್ಮಣ್ ಹಾಗೂ ಎನ್.ಭಾಸ್ಕರ್, ಸರ್ಕಾರದ ನೆರವು ಕೊಡಿಸುವುದಾಗಿ ಹಾಗೂ ವೈಯಕ್ತಿಕವಾಗಿಯೂ ನೆರವು ನೀಡುವುದಾಗಿ ಭರವಸೆ ನೀಡಿದರು. ಅಲ್ಲದೆ, ಸುಷ್ಮಾ ಅವರು ನಿರ್ಗತಿಕರಿಗೆ ಪುನರ್ವಸತಿ ಕಲ್ಪಿಸಲು ಶ್ರಮಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ದರು. ಸಂಕಷ್ಟದಲ್ಲಿರುವ ಮಹಿಳೆಯರಿಗೆ ನೆರವಾಗುವ ಮೂಲಕ ಜನ್ಮದಿನ ಆಚರಿಸಿಕೊಂಡಿದ್ದೇನೆ. ಇದು ನನಗೆ ಅತ್ಯಂತ ಸಂತಸ ಉಂಟು ಮಾಡಿದೆ ಎಂದು ಪುಟ್ಟರಸ ಹರ್ಷ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ನಗರದ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಮುಖಂಡರು, ವಕೀಲರು, ಸ್ನೇಹಿತರೊಂದಿಗೆ ಕೇಕ್ ಕತ್ತರಿಸುವ ಮೂಲಕ ಸರಳವಾಗಿ ಹೆಚ್.ಎಸ್. ಪುಟ್ಟರಸ ಹುಟ್ಟುಹಬ್ಬ ಆಚರಿಸಿಕೊಂಡರು. ಇದೇ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಸೇರಿದಂತೆ ಸ್ನೇಹಿತರು ಹಾಗೂ ಹಿತೈಷಿಗಳು ಹೆಚ್.ಎಸ್. ಪುಟ್ಟರಸ ಅವರಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ವಕೀಲರಾದ ಎ.ಆರ್.ಕಾಂತರಾಜ್, ಕೆ.ಗಂಗಾಧರ್, ಮುಖಂಡರಾದ ಜೆ.ಪ್ರಭು, ಮಂಜುಳಾ, ಅಪರ ಜಿಲ್ಲಾ ಸರ್ಕಾರಿ ವಕೀಲ ತಿಮ್ಮಯ್ಯ, ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್, ಡಿಸಿಸಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ವಕ್ತಾರ ರಾಹುಲ್, ವಕೀಲರಾದ ಉಮೇಶ್, ಸುರೇಶ್ ಪಾಳ್ಯ, ವಿಷ್ಣುವರ್ಧನ್, ಎಸ್.ಬಿ.ಮಹೇಶ್, ಪುಟ್ಟಸಿದ್ದೇಗೌಡ, ಸನಾತ್, ಶಿವಸ್ವಾಮಿ, ಮೀನಾಕ್ಷಿ, ಕೋಮಲಾ, ತನುಜಾ, ಮಹೇಶ್ ಮತ್ತಿತರರು ಹಾಜರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ
ಮಂಗಳವಾರ 3 ಜೂನ್ 2025

# ಶಿಕ್ಷಕ ವೃತ್ತಿಯೇ ಶ್ರೇಷ್ಠ ವೃತ್ತಿ

## ಮೈವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಮಂಟೇಲಿಂಗು ಅಭಿಮತ



ಶ್ರೀ ಛಾಯಾದೇವಿ ಶಿಕ್ಷಣ ವಿದ್ಯಾಲಯದಲ್ಲಿ ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಕೆ.ಮಂಟೇಲಿಂಗು ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ. 2– ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶೈಕ್ಷಣಿಕ ವಸ್ತುಪ್ರದರ್ಶನ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ನಾನಾ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸುವ ಒಂದು ಸೃಜನಾತ್ಮಕ ಕ್ರಿಯೆ. ಇದು ಬೋಧನಾ ಪ್ರಕ್ರಿಯೆಯನ್ನು ಅರ್ಥಪೂರ್ಣವಾಗಿಸಲು ಸಹಾಯಕವಾಗುತ್ತದೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಹೆಚ್ಚಿಸುತ್ತದೆ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಕೆ. ಮಂಟೇಲಿಂಗು ಮಾತನಾಡಿ, ತಮ್ಮ ಸ್ಫೂರ್ತಿದಾಯಕ ಮಾತುಗಳ ಮೂಲಕ ವಿದ್ಯಾರ್ಥಿಗಳನ್ನು ಉತ್ತೇಜಿಸಿದರು. ಪ್ರತಿಯೊಬ್ಬ ಶಿಕ್ಷಕನು ತಾನು ಮಾಡುವ ಕೆಲಸವನ್ನು ಪ್ರೀತಿಸಬೇಕು. ತಾನು ಬೋಧಿಸುವ ವಿಷಯವನ್ನು ಪ್ರೀತಿಸಬೇಕು. ತಮ್ಮ ವಿದ್ಯಾರ್ಥಿಗಳನ್ನು ಪ್ರೀತಿಸಬೇಕು. ಆಗ ವಿದ್ಯಾರ್ಥಿಗಳಲ್ಲಿ ಕಲಿಕೆ ಎಂಬುದು ಉಂಟಾಗುತ್ತದೆ ಮತ್ತು ಬೋಧನಾ ಪ್ರಕ್ರಿಯೆಯು ಅರ್ಥಪೂರ್ಣವಾಗಿ ನಡೆಯುತ್ತದೆ ಎಂದರು.

ಶಿಕ್ಷಕ ವೃತ್ತಿಯು ಅತೀ ಶ್ರೇಷ್ಠವಾದ ವೃತ್ತಿಯಾಗಿದೆ ಎಂದು ಹೇಳುತ್ತಾ ಶ್ರೀಹರಿಕೋಟಾದ ಉದಾಹರಣೆಯನ್ನು ನೀಡಿದರು. ಇಂದಿನ ಯುವ ಪೀಳಿಗೆಯ ತಮ್ಮ ಸಾಕಷ್ಟು ಸಮಯವನ್ನು ಸಾಮಾಜಿಕ ಜಾಲತಾಣದಲ್ಲಿ ವ್ಯರ್ಥ ಮಾಡುತ್ತಿದೆ. ಸಾಮಾಜಿಕ ಜಾಲತಾಣಗಳು ಅಗತ್ಯವಾಗಿದೆ. ಆದರೆ ಅದನ್ನು ಮಿತವಾಗಿ ಹಿತವಾಗಿ ಬಳಸಿದಾಗ ಅದರ ಸದ್ಬಳಕೆ ಎಂಬುದು ಉಂಟಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಡಾ.ರಾಜಗೋಪಾಲ್ ವಿದ್ಯಾ ವಿಕಾಸ್ ಕಾಲೇಜಿನ ಪ್ರಾಂಶುಪಾಲ ಡಾ.ರಾಜಗೋಪಾಲ್ ಮಾತನಾಡಿದರು.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜೂ.2–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ನಿರ್ವಹಣಾ ಕೆಲಸದ ನಿಮಿತ್ತ ಜೂ.3ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ತೊಣಚಿಕೊಪ್ಪಲು, ಹರಿಹರ ಹೋಟೆಲ್, ಅಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸ್ ರಸ್ತೆ, ಆರ್.ಟಿ.ಟಿ.ಸಿ ಕಾಂಪ್ಲೆಕ್ಸ್, ಅರವಿಂದ ನಗರ, ಕುವೆಂಪುನಗರ ಎಂ ಬ್ಲಾಕ್, ಎನ್ ಬ್ಲಾಕ್, ಕೆ–ಬ್ಲಾಕ್, ಕುವೆಂಪುನಗರ ಕೆ.ಹೆಚ್.ಬಿ ಕಾಲೋನಿ, ಅನಿಕೇತನ ರಸ್ತೆ, ಪಡುವಣ ರಸ್ತೆ, ಸರಸ್ವತಿಪುರಂ 1ರಿಂದ 4ನೇ ಮುಖ್ಯ ರಸ್ತೆ, ವಿಶ್ವಮಾನವ ಜೋಡಿ ರಸ್ತೆ, ಪಂಚಮಂತ್ರ ರಸ್ತೆ, ಎಂ ಬ್ಲಾಕ್ ಲೈಬ್ರರಿ, ಪಾಂಡುರಂಗ ದೇವಸ್ಥಾನ, ವಿವೇಕಾನಂದ ವೃತ್ತ, ವಿವೇಕಾನಂದನಗರ, ಇ.ಡಬ್ಲ್ಯೂ.ಎಸ್ ಗಣಪತಿ ದೇವಸ್ಥಾನ, ಎಂ.ಎಲ್.ಎ ವಿಶ್ವನಾಥ್ ಮನೆ ಸುತ್ತಮುತ್ತ ಕೆನರಾ ಬ್ಯಾಂಕ್, ಬಿ.ಜಿ.ಎಸ್ ಬಾಲ ಜಗನ್ನಾಥ ಶಾಲೆ, ಎಸ್.ಬಿ.ಎಂ ಕಾಲೋನಿ, ಶಿವ ಟೆಂಪಲ್, ಸೂರ್ಯ ಲೇಔಟ್, ನಿಮಿಷಾಂಬ ಲೇಔಟ್, ಕಂದಾಯನಗರ 3ನೇ ಹಂತ, ಗಿರಿಯಪ್ಪ ನಿಂಗೇಗೌಡ ಲೇಔಟ್, ಟೆಂಪಲ್ ಬೆಲ್ ಲೇಔಟ್, ಮಹಾಲಿಂಗೇಶ್ವರ ದೇವಸ್ಥಾನ, ಕಬಿನಿ ಲೇಔಟ್, ಎಸ್.ಎಂ.ಎಸ್ ಸ್ಕೂಲ್ ಲೇಔಟ್, ಕಂದಾಯ ಲೇಔಟ್, ಹಂಸ ಲೇಔಟ್ 1ನೇ ಹಂತ, ಗಗನ ಶೇಖರ ಲೇಔಟ್, ಹುಲಿನಾರಾಯಣಪ್ಪ ಲೇಔಟ್, ಭವ್ಯ ಭಾರತಿ ಲೇಔಟ್, ಎಂ.ಡಿ. ಸಿ.ಸಿ ಬ್ಯಾಂಕ್ ಎಂಪ್ಲಾಯಿಸ್ ಲೇಔಟ್, ಟಿ.ಕೆ ಸ್ಟುಡಿಯೋ ಲೇಔಟ್, ಕಂದಾಯ ಲೇಔಟ್ 2ನೇ ಹಂತ, ತಪೋವನ, ಅನ್ನಪೂರ್ಣ ಲೇಔಟ್, ಎಂ.ಡಿ.ಸಿ.ಸಿ ಲೇಔಟ್, ಶ್ರೀರಾಂಪುರ, ಪ್ರೀತಿ ಲೇಔಟ್, ಡಿ.ವಿ.ಜಿ ಲೇ ಔಟ್, ಟಿ.ಕೆ.ರಾಮ್ ಲೇಔಟ್, ಚಿದಾನಂದ ಮತ್ತು ರಕ್ಷಾ ಲೇಔಟ್, ಆರ್.ಕೆ ನಗರ ಕೆ ಬ್ಲಾಕ್, ವಾಸು ಲೇಔಟ್, ಮುಡಾ ಎಂಪ್ಲಾಯಿಸ್ ಲೇಔಟ್, ಮಾಧವ ಪಾರ್ಕ್, ಇ ಮತ್ತು ಎಫ್ ಬ್ಲಾಕ್, ಜನತಾನಗರ, ಶಾರದಾ ದೇವಿನಗರ, ನಿವೇದಿತಾನಗರ, ಬಸವೇಶ್ವರನಗರ, ಗಂಗೋತ್ರಿ ಹುಡ್ಕೋ ಲೇಔಟ್, ಸಬ್ ರಿಜಿಸ್ಟಾರ್ ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಬಿವಿಎ ಪದವಿಗೆ ಅರ್ಜಿ ಆಹ್ವಾನ

**ಮೈಸೂರು:** ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿವಿಎ) (ನಾಲ್ಕು ವರ್ಷದ ಎಂಟು ಸೆಮಿಸ್ಟರ್ ಎನ್ಇಪಿ ಪದ್ಧತಿ) ದೃಶ್ಯ ಕಲೆಯಲ್ಲಿ 2025–26ನೇ ಶೈಕ್ಷಣಿಕ ಶಾಲೆಗೆ ಪ್ರಥಮ ಬಿಬಿಎ ಪದವಿ ಪ್ರವೇಶಾತಿಗೆ ಆನ್‌ಲೈನ್ (UUCMS) ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 10 ಕೊನೆಯ ದಿನಾಂಕವಾಗಿರುತ್ತದೆ. ಸದರಿ ಪದವಿಯಲ್ಲಿ 3ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪ ಕಲೆ, ಗ್ರಾಫಿಕ್ಸ್ ಕಲೆ (ಅಚ್ಚು ಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ htts;// uucms.karnataka.gov.in ಅಥವಾ https://www.cavamysore.karntaka.gov.in ಮೂಲಕವೇ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ 0821–2438931.

# ಹಿರಿಯ ನಾಗರಿಕರಿಗೆ ಮೂಲ ಸೌಕರ್ಯ ಕಲ್ಪಿಸುವಲ್ಲಿ ಕೇಂದ್ರ ವಿಫಲ

- ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ 9ನೇ ಸಮ್ಮೇಳನದಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ಪ್ರಾಧ್ಯಾಪಕ ಪ್ರೊ.ಆರ್.ರಾಮಕುಮಾರ್ ಕಿಡಿನುಡಿ
- ಬರೀ ಧರ್ಮ, ಒಂದು ದೇಶ–ಒಂದು ಚುನಾವಣೆ, ಭಾಷೆ ಎಂಬ ಅನಗತ್ಯ ವಿಚಾರ ಪ್ರಸ್ತಾಪ




ಮೈಸೂರಿನ ಬನ್ನಿಮಂಟಪದ ಹೈವೇ ವೃತ್ತದ ಬಳಿಯಿರುವ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಬೆಳಗ್ಗೆ ಆರಂಭಗೊಂಡ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ 9ನೇ ಅಖಿಲ ಭಾರತ ಮಹಾ ಸಮ್ಮೇಳನದಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನ ಪ್ರಾಧ್ಯಾಪಕ ಪ್ರೊ.ಆರ್.ರಾಮಕುಮಾರ್ ಮಾತನಾಡಿದರು.

ಮೈಸೂರು,ಜೂ.2(ಎಂಟಿವೈ)– ಪ್ರಜಾಸತ್ತಾತ್ಮಕ ಸಮಾಜವಾದವನ್ನು ಅಳವಡಿಸಿಕೊಂಡಿರುವ ಭಾರತದಲ್ಲಿ ಹಿರಿಯ ನಾಗರಿಕರಿಗೆ ಮೂಲಭೂತ ಅಗತ್ಯತೆಗಳನ್ನು ಪೂರೈಸಲು ವಿಫಲವಾಗಿರುವ ಸರ್ಕಾರ ಧರ್ಮ, ಒಂದು ದೇಶ–ಒಂದು ಚುನಾವಣೆ, ಒಂದು ದೇಶ–ಒಂದು ಭಾಷೆಯಂತಹ ಅನಗತ್ಯ ವಿಷಯಗಳನ್ನು ಮುನ್ನೆಲೆಗೆ ತಂದು ಜನರನ್ನು ದಿಕ್ಕು ತಪ್ಪಿಸುತ್ತಿದೆ ಎಂದು ಟಾಟಾ ಇನ್‌ಸ್ಟಿ ಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನ ಪ್ರಾಧ್ಯಾಪಕ ಪ್ರೊ.ಆರ್.ರಾಮಕುಮಾರ್ ಕಿಡಿಕಾರಿದ್ದಾರೆ.

ಮೈಸೂರಿನ ಬನ್ನಿಮಂಟಪದ ಹೈವೇ ವೃತ್ತದ ಬಳಿಯಿರುವ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಬೆಳಗ್ಗೆ ಆರಂಭಗೊಂಡ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ 9ನೇ ಅಖಿಲ ಭಾರತ ಮಹಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬಹುತ್ವದ ಭಾವೈಕ್ಯ ಸಂಬಂಧವನ್ನು ಹೊಂದಿರುವ ಭಾರತದಲ್ಲಿ ಏಕತ್ವದ ಪರಿಕಲ್ಪನೆ ಹೊಂದಿಕೆಯಾಗುವುದಿಲ್ಲ. ಒಕ್ಕೂಟ ತತ್ವ, ಸಹಬಾಳ್ವೆ, ಸಹೋದರತೆ ಮತ್ತು ವೈವಿಧ್ಯತೆ ಭಾರತದ ಶಕ್ತಿಯಾಗಿದೆ. ಆದ್ದರಿಂದ ಒಂದು ದೇಶ–ಒಂದು ಭಾಷೆ, ಒಂದು ದೇಶ–ಒಂದು ಧರ್ಮ ಎಂಬ ಪರಿಕಲ್ಪನೆ ಅರ್ಥಹೀನವಾದುದು.

ದೇಶದ ಜನರ ಸಂಕಷ್ಟಗಳಿಗೆ ಧ್ವನಿ ಆಗಬೇಕಿದ್ದ ಮಾಧ್ಯಮಗಳು ಕೇಂದ್ರ ಸರ್ಕಾರ ಮತ್ತು ಬಂಡವಾಳಶಾಹಿಗಳ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿವೆ. ವಿಭಿನ್ನವಾದ ಮತ್ತು ಸೃಜನಶೀಲವಾದ ಯಾವ ಕೆಲಸವನ್ನೂ ನಿರ್ವಹಿಸದೇ ಮಾಧ್ಯಮಗಳು ಸಂಪೂರ್ಣವಾಗಿ ರಾಜಕಾರಣದಲ್ಲಿ ಮುಳುಗಿವೆ. ಸತ್ಯವನ್ನು ಮರೆಮಾಚಿ ಸುಳ್ಳುಗಳನ್ನೇ ವೈಭವೀಕರಿಸುತ್ತಿವೆ. ಆ ಮೂಲಕ ಜನರಿಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸುತ್ತಿವೆ ಎಂದು ವಿಷಾದಿಸಿದರು.

ಅಮೆರಿಕ, ಜಪಾನ್, ಇಂಗ್ಲೆಂಡ್ ಇತ್ಯಾದಿ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೇ ಹಿರಿಯ ನಾಗರಿಕರು ತಮ್ಮ ಜೀವನಾವಶ್ಯಕ ಅಗತ್ಯತೆಗಳನ್ನು ಪೂರೈಸಿಕೊಂಡು ನೆಮ್ಮದಿಯಿಂದ ಬದುಕಲು ಸಾಧ್ಯವಾಗುವಷ್ಟು ಪಿಂಚಣಿಯನ್ನು ನೀಡುತ್ತಿವೆ. ಆದರೆ ಪ್ರಜಾಸತ್ತಾತ್ಮಕ ಸಮಾಜವಾದವನ್ನು ಅಳವಡಿಸಿಕೊಂಡಿರುವ ಭಾರತದಲ್ಲಿ ಹಿರಿಯ ನಾಗರಿಕರಿಗೆ ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಾಕಾಗುವಷ್ಟು ಪಿಂಚಣಿ ಸೌಲಭ್ಯ ದೊರೆಯುತ್ತಿಲ್ಲ ಎಂದರು.

ದೇಶದಲ್ಲಿನ ಎಲ್ಲ ಹಿರಿಯ ನಾಗರಿಕರಿಗೆ ಸಾರ್ವತ್ರಿಕ ಪಿಂಚಣಿ ಹಾಗೂ ಆರೋಗ್ಯ ವಿಮೆಯ ಅಗತ್ಯವಿದೆ, ಆದರೆ ಆರೋಗ್ಯ ವಿಮೆ ಯೋಜನೆಗಳಿಂದ ಹಿರಿಯರನ್ನು ಹೊರಗೆ ಇಟ್ಟಿರುವುದು ಸರಿಯಲ್ಲ. ಎಲ್ಲರಿಗೂ ಕಡ್ಡಾಯವಾಗಿ ಈ ಸೇವೆಗಳು ವಿಸ್ತರಣೆ ಆಗಬೇಕಿದೆ ಎಂದು ಆಶಿಸಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷೆ ಸಬೀಹಾ ಭೂಮಿಗೌಡ ಮಾತನಾಡಿ, ಸಾರ್ವಜನಿಕ ವಲಯದ ವಿಮಾ ಉದ್ದಿಮೆ ಮೇಲಿನ ದಾಳಿಯ ಸಂದರ್ಭದಲ್ಲಿ ಎನ್‌ಡಿಎ ಅದನ್ನು ಶೇ.100ರಷ್ಟು ಹೆಚ್ಚಿಸುವ ಮತ್ತು ಎಲ್‌ಐಸಿ ಷೇರು ಹಿಂಪಡೆಯುವ, ಒಂದು ಸಾಮಾನ್ಯ ವಿಮಾ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಸರ್ಕಾರದ ಕ್ರಮಗಳ ವಿರುದ್ಧ ಈ ಸಮ್ಮೇಳನ ಜನಾಂದೋಲನ ರೂಪಿಸಲು ನಿರ್ಧರಿಸುತ್ತದೆ ಎಂಬ ವಿಶ್ವಾಸವಿದೆ. ಸಮಾಜದ ಪ್ರತಿಯೊಬ್ಬರಿಗೂ ಘನತೆಯ ಬದುಕು ನಡೆಸಲು ಸಾರ್ವತ್ರಿಕ ಪಿಂಚಣಿ ಪಡೆಯಲು ಬಲವಾದ ಚಳವಳಿ ಹುಟ್ಟು ಹಾಕಬೇಕು ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವಿಮಾ ನೌಕರರ ಸಂಘದ ರಾಷ್ಟ್ರೀಯ ಅಧ್ಯಕ್ಷ ವಿ.ರಮೇಶ್, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಮಿಶ್ರಾ, ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ ಅಧ್ಯಕ್ಷ ಸತನ್‌ಜಿಬ್‌ದಾಸ್, ಪ್ರಧಾನ ಕಾರ್ಯದರ್ಶಿ ಎಂ. ಕುನ್ನಿ ಕೃಷ್ಣನ್, ಶ್ರೀಧರ್, ಸಿ.ಆರ್.ಕೃಷ್ಣ ಮೂರ್ತಿ, ಬಲರಾಮ್, ಮಹದೇವಯ್ಯ, ರಾಜೇಂದ್ರ, ಉಮಾಪತಿ ಇದ್ದರು. ಸಮ್ಮೇಳನದಲ್ಲಿ ದೇಶದ ಎಲ್ಲಾ ರಾಜ್ಯಗಳಿಂದ ಸಂಘದ 700 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.

> ಭಾರತವು ಆರ್ಥಿಕತೆಯಲ್ಲಿ ಜಾಗತಿಕವಾಗಿ 4ನೇ ಸ್ಥಾನದಲ್ಲಿದ್ದು, ಸದ್ಯದಲ್ಲೇ 3ನೇ ಸ್ಥಾನಕ್ಕೆ ತಲುಪುವ ವಿಶ್ವಾಸವಿದೆ. ತಲಾದಾಯದಲ್ಲಿ ವಿಶ್ವದ 193 ದೇಶಗಳಲ್ಲಿ 127ನೇ ಸ್ಥಾನದಲ್ಲಿದೆ. ಇದು ದೇಶದ ಆರ್ಥಿಕ ದುಸ್ಥಿತಿಯಾಗಿದೆ. ಜನಸಂಖ್ಯೆಯಲ್ಲಿ ವಿಶ್ವದಲ್ಲೇ ನಾವು ಮುಂದಿರುವ ಕಾರಣ ಸಹಜವಾಗಿಯೇ ಈ ಸಾಧನೆ ಸಾಧ್ಯವಾಗಿದೆ. ವಿಕಸಿತ ಭಾರತ ಸಾಧನೆ ಸಾಧ್ಯವಾದರೂ 2047ರ ವೇಳೆಗೆ ಭಾರತವು ತಲಾ ಆದಾಯದಲ್ಲಿ 90ನೇ ಸ್ಥಾನ ತಲುಪಬಹುದು. ಹೀಗಾಗಿ ಭಾರತದ ಆರ್ಥಿಕತೆ ಗಾತ್ರಕ್ಕೂ ಇಲ್ಲಿನ ಜನ ಜೀವನ ವೃದ್ಧಿಗೂ ಸಂಬಂಧ ಇಲ್ಲ. **–ಪ್ರೊ.ರಾಮಕುಮಾರ್**

# ಹಿಂದೂ ಮುಖಂಡರಿಗೆ ನೋಟಿಸ್; ಮಾಜಿ ಸಂಸದ ಪ್ರತಾಪ್ ಸಿಂಹ ಆಕ್ರೋಶ

- ಹಿಂದೂಗಳ ಹತ್ಯೆ ಹಿಂದಿರುವ ಕೆಎಫ್‌ಡಿ, ಪಿಎಫ್‌ಐ ವಿರುದ್ಧ ಕ್ರಮ ಕೈಗೊಳ್ಳದ್ದಕ್ಕೆ ಕಿಡಿ
- ತಮಿಳ್ನಾಡಲ್ಲೇ ತಿರಸ್ಕೃತಗೊಂಡಿರುವ ಕಮಲ್‌ಹಾಸನ್‌ಗೆ ನಮ್ಮವರ ಬೆಂಬಲ ಸರಿಯಲ್ಲ
- ಕರವೇ ನಾರಾಯಣಗೌಡರೇ ಮೈಸೂರು ಸಂಸ್ಥಾನದ ಟೀಕೆ ಸರಿಯಲ್ಲ...!

ಮೈಸೂರು,ಜೂ.2(ಎಂಟಿವೈ)– ರಾಜ್ಯದಲ್ಲಿ ನಡೆದಂತಹ ಹಿಂದೂಗಳ ಹತ್ಯೆ ಪ್ರಕರಣದಲ್ಲಿ ಪಿಎಫ್‌ಐ, ಕೆಎಫ್‌ಡಿಯಂತಹ ಸಂಘಟನೆಗಳನ್ನು ಮಟ್ಟ ಹಾಕುವ ಬದಲು ಹಿಂದೂ ಮುಖಂಡರಿಗೆ ನೋಟಿಸ್ ನೀಡುವ ಮೂಲಕ ರಾಜ್ಯದಲ್ಲಿರುವುದು ತಾಲಿಬಾನ್ ಸರ್ಕಾರ ಎಂಬುದನ್ನು ರುಜುವಾತುಪಡಿಸಿದೆ ಎಂದು ಮಾಜಿ ಸಂಸದ ಪ್ರತಾಪಸಿಂಹ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಿಂದುಪರ ಸಂಘಟನೆಗಳ ಮುಖಂಡರಾದ ಕಲ್ಲಡ್ಕ ಪ್ರಭಾಕರ್ ಮತ್ತು ಅರುಣ್ ಪುತ್ತಿಲ್‌ಗೆ ನೋಟಿಸ್ ನೀಡುವ ಮೂಲಕ ರಾಜ್ಯ ಸರ್ಕಾರ ಹಿಂದು ವಿರೋಧಿ ಎಂಬುದು ಬಹಿರಂಗವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂಗಳಲ್ಲಿ ಅಭದ್ರತೆ, ಆತಂಕ ಮನೆ ಮಾಡಿದೆ. ಹಿಂದೂಪರ ಕಾರ್ಯಕರ್ತ ಪ್ರವೀಣ್ ನೆಟ್ಟಾರ್ ಹತ್ಯೆ ಆಗದಿದ್ದರೆ ಈ ಸರಣಿ ಹತ್ಯೆ ನಡೆಯುತ್ತಿರಲಿಲ್ಲ. ಸರ್ಕಾರ ಪ್ರವೀಣ್ ನೆಟ್ಟಾರ್ ಕೊಲೆ ಮಾಡಿದ ಆರೋಪಿಗಳಿಗೆ ಸರಿಯಾದ ಪಾಠ ಕಲಿಸಿದ್ದರೆ ಈ ಹತ್ಯೆ ಸರಣಿ ಮುಂದುವರೆಯುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.



ಹಿಂದೂ ನಾಯಕರಿಗೆ ನೋಟಿಸ್ ನೀಡಿರುವುದು ಎಷ್ಟು ಸರಿ?. ಹಿಂದೂಗಳ ಧ್ವನಿ ಅಡಗಿಸಲು ಮಾಡಿರುವ ಕೆಲಸ ಇದು ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ತಮಿಳುನಾಡಲ್ಲೇ ತಿರಸ್ಕಾರಗೊಂಡಿರುವ ವ್ಯಕ್ತಿ:** ಕನ್ನಡ ಭಾಷೆಯ ಗಂಧ–ಗಾಳಿ ಗೊತ್ತಿಲ್ಲದೆ ನಮ್ಮ ಭಾಷೆಯ ಬಗ್ಗೆ ಮಾತನಾಡಿರುವ ನಟ ಕಮಲ್‌ಹಾಸನ್ ಅವರನ್ನು ವಿತಂಡವಾದಿ ಎಂದು ತಮಿಳುನಾಡಿನ ಜನ ತಿರಸ್ಕರಿಸಿ, ತಿಪ್ಪೆಗೆ ಎಸೆದಿದ್ದಾರೆ. ಆತನ ಹೇಳಿಕೆಯನ್ನು ಇಲ್ಲಿನ ಕೆಲವರು ಬೆಂಬಲಿಸುತ್ತಾರೆ. ಅವರಿಗೆ ನಾಚಿಕೆ ಆಗಬೇಕು. ಕನ್ನಡ ಕೇವಲ ಭಾಷೆ ಅಲ್ಲ. ಅದು ನಮ್ಮ ಸಂಸ್ಕೃತಿ, ನಮ್ಮ ಸ್ವಾಭಿಮಾನ, ನಮ್ಮ ಅಸ್ಮಿತೆ. ಕನ್ನಡ ನೆಲದ ಭಾಷೆ. ಎಲ್ಲಿಂದಲ್ಲೋ ಬಂದ ಭಾಷೆ ಅಲ್ಲ. ಸಂಸ್ಕೃತ, ಮರಾಠಿ ಪದಗಳು ಕನ್ನಡದೊಳಗೆ ಸೇರಿಕೊಂಡಿವೆ. ಹಾಗಂತ ಇದು ಯಾವುದೇ ಭಾಷೆಯಿಂದ ಹುಟ್ಟಿದ ಭಾಷೆ ಅಲ್ಲ. ಕನ್ನಡಕ್ಕೆ ಅಪ್ಪ ಅಮ್ಮನನ್ನು ಹುಡುಕ ಬೇಡಿ. ಇದು ಮಣ್ಣಿನ ಭಾಷೆ ಎಂದು ತಾಕೀತು ಮಾಡಿದರು.

**ಮೈಸೂರು ಸಂಸ್ಥಾನದ ಟೀಕೆ ಸರಿಯಲ್ಲ:** ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ ಮೈಸೂರು ಸಂಸದ ಯದುವೀರ ಒಡೆಯರ್ ಅವರನ್ನು ಸಂಸ್ಥಾನವಿಲ್ಲದ ರಾಜರು ಎಂದು ಟೀಕಿಸಿರು ವುದಕ್ಕೆ ಪ್ರತಿಕ್ರಿಯಿಸಿದ ಅವರು, ಸಂಸ್ಥಾನ ವಿಲ್ಲದ ಮಹಾರಾಜ ಎಂಬ ಹೇಳಿಕೆ ಸರಿ ಅಲ್ಲ. ಸಂಸದ ಯದುವೀರ್ ಕುರಿತು ಟೀಕೆ ಮಾಡಲು ನಾರಾಯಣಗೌಡರಿಗೆ ಅಧಿಕಾರವಿದೆ. ಆದರೆ ಮೈಸೂರು ಸಂಸ್ಥಾನವನ್ನು ಎಳೆದು ತರಬಾರದು. ಸಂಸದ ಯದುವೀರ್ ಬಗ್ಗೆ ಟೀಕೆ, ವಿಮರ್ಶೆ ಮಾಡ ಬಹುದು. ಕನ್ನಡ ಭಾಷೆ, ಸಂಸ್ಕೃತಿಗೆ ಮೈಸೂರು ಸಂಸ್ಥಾನದ ಕೊಡುಗೆ ಅಪಾರ. ಮೈಸೂರು ಸಂಸ್ಥಾನದ ಋಣದಲ್ಲಿ ನಾವೆಲ್ಲರೂ ಇರಬೇಕು. ಕನ್ನಡ ನಾಡಿನ ಬಗ್ಗೆ ನಾಲ್ವಡಿ ಅವರಿಗೆ ಇದ್ದ ದೂರದೃಷ್ಟಿ ಅಪಾರ. ಕನ್ನಡ, ಸಂಸ್ಕೃತದಿಂದ ಜನ್ಮ ತಳೆದಿಲ್ಲ. ಅಲ್ಲಿನ ಕೆಲ ಪದಗಳು ಕನ್ನಡಕ್ಕೆ ಸೇರಿಕೊಂಡಿವೆ. ಹಾಗಂತ ಕನ್ನಡ ಸಂಸ್ಕೃತದಿಂದ ಹುಟ್ಟಿಲ್ಲ ಎಂದರು.

# ಪರಬ್ರಹ್ಮ ಸರ್ವಶಕ್ತ–ಸರ್ವಾಂತರ್ಯಾಮಿ

## ಶ್ರೀ ಗಣೇಶಾನಂದ ಮಹಾರಾಜರು



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಶ್ರೀ ನಿಜಗುಣ ಶಿವಯೋಗಿಗಳವರ ಅನುಭವ ಸಾರ ಕೃತಿಯ ಅಧ್ಯಯನ ಶಿಬಿರದಲ್ಲಿ ಬೀದರ್‌ನ ಶ್ರೀ ಗುರುದೇವಾಶ್ರಮ ಹಾಗೂ ಶ್ರೀ ಸಿದ್ಧಾರೂಢ ಮಠದ ಶ್ರೀ ಗಣೇಶಾನಂದ ಮಹಾರಾಜರು ವಿಷಯ ಮಂಡಿಸಿದರು.

ಮೈಸೂರು, ಜೂ. 2– ಪರಬ್ರಹ್ಮವು ಸರ್ವಶಕ್ತ–ಸರ್ವಾಂತರ್ಯಾಮಿ ಎಂದು ಬೀದರ್‌ನ ಶ್ರೀ ಗುರುದೇವಾಶ್ರಮ ಹಾಗೂ ಶ್ರೀ ಸಿದ್ಧಾರೂಢ ಮಠದ ಪೂಜ್ಯ ಶ್ರೀ ಗಣೇಶಾನಂದ ಮಹಾರಾಜರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಶ್ರೀ ನಿಜಗುಣ ಶಿವಯೋಗಿಗಳವರ ಅನುಭವ ಸಾರ ಕೃತಿಯ ಅಧ್ಯಯನ ಶಿಬಿರದಲ್ಲಿ ಮಾತನಾಡಿದರು.

ನಿಜಗುಣ ಶಿವಯೋಗಿಗಳ ಸಾಹಿತ್ಯ ಮತ್ತು ಪ್ರತಿಪಾದನೆಯು ಅತ್ಯಂತ ಶ್ರೇಷ್ಠವಾದುದು. ಗುರುವಿನ ಕೃಪೆಯಿದ್ದರೆ ಸಾಕು ಮೋಕ್ಷ ಪ್ರಾಪ್ತವಾಗುತ್ತದೆ. ಜಗತ್ತಿನಲ್ಲಿರುವ ಎಲ್ಲಾ ಜೀವಿಗಳು ಬ್ರಹ್ಮಸ್ವರೂಪಿಗಳು, ಅದನ್ನೆ ಉಪನಿಷತ್ತು ಅಹಂ ಬ್ರಹ್ಮಾಸ್ಮಿ ಎಂದು ಹೇಳುತ್ತದೆ. ಚಾರ್ವಕ ಹಾಗೂ ವೇದಾಂತ ಸಿದ್ಧಾಂತಗಳಿಗೆ ಸಾಮ್ಯ ಸಾಧ್ಯವಿಲ್ಲ. ಯಾವುದೇ ವಸ್ತುವಿನ ಜ್ಞಾನವಾಗಬೇಕಾದರೆ ಬೆಳಕು ಬೇಕು. ಹಾಗೆಯೇ ನಮ್ಮಲ್ಲಿರುವ ಆತ್ಮವನ್ನು ಅರಿಯಲು ಗುರು ತೋರಿಸುವ ಜ್ಞಾನ ಬೇಕು. ಶ್ರದ್ಧಾ ಭಕ್ತಿಯಿಂದ ಗುರುವಿನ ಉಪಾಸನೆ ಮಾಡಿದರೆ ಜೀವನದಲ್ಲಿ ಸತ್ಯ ದರ್ಶನವಾಗುತ್ತದೆ. ಜಗತ್ತು ಎಂಬುದು ಮಿಥ್ಯ, ಪರಬ್ರಹ್ಮನೇ ಸತ್ಯ ಇದನ್ನರಿತು ನಾವು ಬದುಕಬೇಕು ಎಂದು ನಾಲ್ಕನೇ ಸಂಧಿಯ ಕುರಿತು ವಿಷಯ ಮಂಡಿಸುತ್ತಾ ತಿಳಿಸಿದರು.

ಶಿಬಿರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ, ತೆಲಂಗಾಣದ ಹೈದರಾಬಾದ್‌ನಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಸೇರಿದಂತೆ ಸುಮಾರು 132 ಕ್ಕೂ ಹೆಚ್ಚು ಸಾಧಕರು ಪಾಲ್ಗೊಂಡಿದ್ದಾರೆ. ಶಿಬಿರಾರ್ಥಿಗಳು ಶ್ರೀ ಮಲೆಮಹದೇಶ್ವರ ಬೆಟ್ಟ, ಚಿಲಕವಾಡಿಯ ಶ್ರೀ ನಿಜಗುಣ ಶಿವಯೋಗಿಗಳವರ ಅನುಭವ ಮಂಟಪಕ್ಕೆ ಪ್ರವಾಸ ಕೈಗೊಂಡರು.



## ಹುಟ್ಟುಹಬ್ಬದ ಶುಭಾಶಯ


ಭಾನುವಾರ ಹೆಚ್.ಡಿ. ಕೋಟೆ ತಾಲೂಕು ಕಬಿನಿ ಜಲಾಶಯದ ಹಿನ್ನೀರಿನ ಬಳಿ ಬರುವ ಸಂದೇಶ್ ವಾಟರ್ ಎಡ್ಜ್ ರೆಸಾರ್ಟ್‌ನಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ರಾಜ್ಯ ಕೃಷಿ ಸಚಿವ ಎನ್. ಚೆಲುವರಾಯ ಸ್ವಾಮಿ ಅವರನ್ನು ಶಾಸಕರಾದ ಅನಿಲ್ ಚಿಕ್ಕಮಾದು, ನರೇಂದ್ರ ಸ್ವಾಮಿ, ಮಾಜಿ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್, ಉದ್ಯಮಿ ಹಾಗೂ ಕಾಂಗ್ರೆಸ್ ಯುವ ಮುಖಂಡ ಎನ್. ಸಂದೇಶ್, ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಲೋಕೇಶ್ ಪಿಯಾ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

## ಕೆಆರ್‌ಎಸ್ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಸೋಮವಾರ | 105.70 ಅಡಿ |
| ಒಳಹರಿವು | 16170 ಕ್ಯೂಸೆಕ್ |
| ಹೊರಹರಿವು | 772 ಕ್ಯೂಸೆಕ್ |

## ಕಬಿನಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2284 ಅಡಿ |
| ಸೋಮವಾರ | 2280.67 ಅಡಿ |
| ಒಳಹರಿವು | 9025 ಕ್ಯೂಸೆಕ್ |
| ಹೊರಹರಿವು | 8000 ಕ್ಯೂಸೆಕ್ |

## ಹಾರಂಗಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2859 ಅಡಿ |
| ಭಾನುವಾರ | 2850.58 ಅಡಿ |
| ಒಳಹರಿವು | 2005 ಕ್ಯೂಸೆಕ್ |
| ಹೊರಹರಿವು | 100 ಕ್ಯೂಸೆಕ್ |

# ಬಂಬೂಬಜಾರ್ ಹಳೇ ಎಪಿಎಂಸಿಯಲ್ಲಿ ರಾಶಿ ರಾಶಿ ಕಸ; ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿ ವ್ಯಾಪಾರಿಗಳು





ಮೈಸೂರು,ಜೂ.2(ಎಂಕೆ)– ಮೈಸೂರು ಬಂಬೂಬಜಾರ್‌ನ ಹಳೇ ಎಪಿಎಂಸಿ ಹಣ್ಣುಗಳ ಸಗಟು ಮಾರುಕಟ್ಟೆ(ಉಪ ಪ್ರಾಂಗಣ)ಯಲ್ಲಿ ಕಂಡಲ್ಲೆಲ್ಲಾ ಕೊಳೆತ ಹಣ್ಣುಗಳ ರಾಶಿ ರಾಶಿ ಬಿದ್ದಿದ್ದು, ಭಾರಿ ದುರ್ವಾಸನೆಯಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿ ಇದ್ದರೂ ನಿರ್ವಹಣೆ ಶೂನ್ಯ...!

ಸುಮಾರು 150ಕ್ಕೂ ಹೆಚ್ಚು ಮಳಿಗೆಗಳಿರುವ ಸಗಟು ಮಾರುಕಟ್ಟೆಯಲ್ಲಿ ಕಸ ವಿಲೇವಾರಿ ಸಂಪೂರ್ಣ ನೆಲಕಚ್ಚಿದ್ದು, ವ್ಯಾಪಾರಸ್ಥರು ಹತ್ತಾರು ಮನವಿಗಳನ್ನು ಕೊಟ್ಟು ಅಂಗಲಾಚುತ್ತಿದ್ದರೂ ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಮನಸ್ಥಿತಿ ಮಾತ್ರ ನಾಯಿಬಾಲ ಡೊಂಕು ಎಂಬಂತಾಗಿದೆ.

ಇಡೀ ಮಾರುಕಟ್ಟೆ ಕೊಳಚೆ ನೀರು, ಕೊಳೆತ ಹಣ್ಣಿನ ರಾಶಿ ರಾಶಿ ಕಸದಿಂದ ಆವೃತ್ತವಾಗಿದೆ. ಜನಜಂಗುಳಿಯೇ ಸೇರುವ ಮಾರುಕಟ್ಟೆಯಲ್ಲಿ ದುರ್ನಾತ ಆವರಿಸಿದ್ದು, ಐದತ್ತು ನಿಮಿಷ ನಿಲ್ಲುವುದಕ್ಕೂ ಪ್ರಯಾಸಪಡುವಂತಾಗಿದೆ. ಒಂದೆಡೆ ಕೊಳಚೆ ನೀರು, ಮತ್ತೊಂದು ವಿಲೇವಾರಿಯಾಗದ ಕಸ ನಮ್ಮನ್ನು ಹೈರಾಣಾಗಿಸಿದೆ ಎಂದು ಮಳಿಗೆದಾರರು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡಿದ್ದಾರೆ.

**ಮೂವರು ಗುತ್ತಿಗೆದಾರರು!:** ಮಾರುಕಟ್ಟೆಯಲ್ಲಿ ಕಸ ವಿಲೇವಾರಿ ಮಾಡುವುದಕ್ಕಾಗಿಯೇ ಗುತ್ತಿಗೆ ಪಡೆದಿರುವವರಿಗೆ ಇಬ್ಬರು ಹೂಡಿಕೆದಾರರು ಸೇರಿ ಮೂವರು ಗುತ್ತಿಗೆದಾರರು ಎಂಬಂತಾಗಿದೆ. ಒಬ್ಬರ ಬಳಿ ಕಸ ವಿಲೇವಾರಿ ಮಾಡಿ ಎಂದು ಕೇಳಿದರೆ ಅವರು, ಮತ್ತೊಬ್ಬರ ಮೇಲೆ ಹೇಳುತ್ತಾರೆ. ನಿಜವಾದ ಗುತ್ತಿಗೆದಾರ ಯಾರೆಂಬುದೇ ತಿಳಿಯುತ್ತಿಲ್ಲ ಎಂದು ಕೆಲ ಮಳಿಗೆದಾರರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

**ಅಧಿಕಾರಿಗಳ ಅಸಡ್ಡೆ:** ಇಡೀ ಮಾರುಕಟ್ಟೆ ಗಬ್ಬೆದ್ದು ನಾರುತ್ತಿದ್ದರೂ ಎಪಿಎಂಸಿ ಅಧಿಕಾರಿಗಳು ಮಾತ್ರ ತಮಗೆ ಇದ್ಯಾವುದೂ ಸಂಬಂಧಪಟ್ಟಿದ್ದಲ್ಲ ಎಂಬ ರೀತಿ ವರ್ತಿಸುತ್ತಿದ್ದಾರೆ. ಅಧಿಕಾರಿಗಳ ಅಸಡ್ಡೆಯಿಂದಾಗಿ ನಾವು ಸಂಕಷ್ಟ ಅನುಭವಿಸುವಂತಾಗಿದೆ. ದಿನಪೂರ್ತಿ ಕಸ, ಕೊಳೆತ ಹಣ್ಣಿನ ವಾಸನೆ ನಡುವೆಯೇ ಬದುಕುತ್ತಿದ್ದೇವೆ ಎಂದು ಮರುಗಿದ್ದಾರೆ.

> ಹಣ್ಣಿನ ಸಗಟು ಮಾರುಕಟ್ಟೆಯಲ್ಲಿ ಕಸದ ರಾಶಿಯಾಗುವುದು ಸಹಜ. ಆದರೆ, ತ್ವರಿತವಾಗಿ ವಿಲೇವಾರಿಯಾಗಬೇಕು. ಇಲ್ಲಿಯಂತೂ ಎರಡ್ಮೂರು ದಿನವಾದರೂ ಕಸ ವಿಲೇವಾರಿ ಮಾಡಲ್ಲ. ಹಳೇ ಗುಜರಿ ಟ್ರ್ಯಾಕ್ಟರ್‌ಗಳನ್ನು ಕಸ ವಿಲೇವಾರಿ ಮಾಡಲು ಬಳಸುತ್ತಿದ್ದು, ಅವು ಒಂದೆರಡು ದಿನದಲ್ಲೇ ಕೆಟ್ಟು ನಿಲ್ಲುತ್ತವೆ. ಪ್ರತಿನಿತ್ಯ ದುರ್ವಾಸನೆ, ಕಸದ ನಡುವೆ ಹೊಟ್ಟೆ ಪಾಡು ನಡೆಸುವ ದುಸ್ಥಿತಿ ನಮ್ಮದಾಗಿದೆ. **– ನೊಂದ ವ್ಯಾಪಾರಸ್ಥರು**

### ಅನಾಹುತಕ್ಕೆ ಆಹ್ವಾನ ನೀಡುತ್ತಿದೆ ತೆರೆದ ಚರಂಡಿ...

ಮಾರುಕಟ್ಟೆ ನಡುವೆ ಹರಿಯುವ ದೊಡ್ಡ ಮೋರಿ ಸ್ಲ್ಯಾಬ್‌ಗಳನ್ನು ತೆಗೆದುಹಾಕಿದ್ದು, ಭಾರಿ ಅನಾಹುತಕ್ಕೆ ಆಹ್ವಾನ ನೀಡಿದಂತಾಗಿದೆ. ರೈಲ್ವೆ ನಿಲ್ದಾಣದ ಕಡೆಯಿಂದ ಬರುವ ಕೊಳಚೆ ನೀರು ಬ್ಲಾಕ್ ಆಗುತ್ತಿದೆ ಎಂಬ ಕಾರಣಕ್ಕೆ ಚರಂಡಿ ಕ್ಲೀನ್ ಮಾಡಲು ಸ್ಲ್ಯಾಬ್‌ಗಳನ್ನು ತೆರವು ಮಾಡಿದ್ದು, ಮಾರುಕಟ್ಟೆಗೆ ಬರುವ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಚರಂಡಿಗೆ ವಾಹನ ಸಮೇತ ಉರುಳಿ ಬೀಳುವ ಆತಂಕವೂ ಎದುರಾಗಿದೆ.

## ಕತ್ತರಘಟ್ಟ ದಲಿತ ರೈತನ ಸಜೀವ ದಹನ ಪ್ರಕರಣದ

# ನ್ಯಾಯಾಂಗ ತನಿಖೆಗೆ ಕರ್ನಾಟಕ ರಾಜ್ಯ ರೈತಸಂಘ ಒತ್ತಾಯ



ಕರ್ನಾಟಕ ರಾಜ್ಯ ರೈತಸಂಘ(ರೈತಬಣ)ದ ಸದಸ್ಯರು ಭೇಟಿ ನೀಡಿದರು.

ಕೆ.ಆರ್.ಪೇಟೆ, ಜೂ.2– ತಾಲೂಕಿನ ಕತ್ತರಘಟ್ಟ ಗ್ರಾಮದಲ್ಲಿ ನಡೆದಿರುವ ಜಯಕುಮಾರ್ ಅವರ ಸಜೀವ ದಹನ ಪ್ರಕರಣ ನಡೆದಿರುವ ಸ್ಥಳಕ್ಕೆ ಕರ್ನಾಟಕ ರಾಜ್ಯ ರೈತಸಂಘ (ರೈತಬಣ) ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಅವರು ಭೇಟಿ ನೀಡಿ, ಘಟನೆಯನ್ನು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಮೃತ ಜಯಕುಮಾರ್ ಪುತ್ರಿಯ ವಿದ್ಯಾಭ್ಯಾಸದ ವೆಚ್ಚಗಳನ್ನು ರೈತ ಸಂಘವು ಭರಿಸಲಿದೆ. ಜೊತೆಗೆ ಹೆಣ್ಣುಮಗು ಮತ್ತು ತಾಯಿಯ ಹೆಸರಿನ 25 ಸಾವಿರ ರೂಪಾಯಿಗಳ ಜಂಟಿ ಫಿಕ್ಸೆಡ್ ಡೆಪಾಸಿಟ್ ಇಡುವುದಾಗಿ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ದಲಿತ ಸೇನೆ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್‌ಶೆಟ್ಟಿ ಬಣದ ನೂರಾರು ಕಾರ್ಯಕರ್ತರೊಂದಿಗೆ ಕತ್ತರಘಟ್ಟ ಗ್ರಾಮಕ್ಕೆ ಭೇಟಿ ನೀಡಿ, ಮೃತ ಜಯಕುಮಾರ್ ಧರ್ಮಪತ್ನಿ ಲಕ್ಷ್ಮಿ ಅವರನ್ನು ಭೇಟಿ ಮಾಡಿ ಧೈರ್ಯ ತುಂಬಿದರು. ತಮ್ಮ ಯಾವುದೇ ಕಷ್ಟ ಸುಖಗಳಿಗೆ ರಾಜ್ಯ ರೈತ ಸಂಘವು ಸದಾ ಸ್ಪಂದಿಸಲಿದೆ.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತಸಂಘ(ರೈತಬಣ) ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ, ಯುವ ರೈತ ಜಯಕುಮಾರ್ ಅವರ ಸಜೀವ ದಹನ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು. ಪೊಲೀಸರು ಸದರಿ ಪ್ರಕರಣದಲ್ಲಿ ಮೃತನ ಪತ್ನಿ ನೀಡಿದ ದೂರನ್ನು ತಿರುಚಿ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಮೃತ ಜಯಕುಮಾರ್ ಅವರ ಪತ್ನಿ ಲಕ್ಷ್ಮಿ ಅವರು ಆರೋಪಿಸಿದ್ದು, ಈ ಬಗ್ಗೆಯೂ ಸಮಗ್ರ ತನಿಖೆಯಾಗಬೇಕು. ಒಂದು ವೇಳೆ ಪೊಲೀಸರು ದೂರು ದಾಖಲಿಸುವಲ್ಲಿ ತಪ್ಪು ಎಸಗಿದ್ದರೆ ಅವರ ವಿರುದ್ಧ ಸರ್ಕಾರವು ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಮೃತ ಜಯಕುಮಾರ್ ಅವರ ಜಮೀನಿನಲ್ಲಿ ಹುಲ್ಲಿನ ಮೆದೆ ಹಾಕಿಕೊಂಡಿದ್ದ ಸದ್ಯ ಆರೋಪಿ ಎಂದು ಗುರುತಿಸಲಾಗಿರುವ ಅನಿಲ್‌ಕುಮಾರ್ ಎಂಬಾತನ ವಿರುದ್ಧ ಮೇ 15 ರಂದು ಜಯಕುಮಾರ್ ಪೊಲೀಸರಿಗೆ ದೂರು ನೀಡಿದ್ದರೂ ಸಹ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಕಾರಣ ಅನಿಲ್‌ಕುಮಾರ್ ಅವರು ಜಯಕುಮಾರ್ ಮೇಲೆ ನಿರಂತರ ದೌರ್ಜನ್ಯ ಎಸಗಿರುವ ಬಗ್ಗೆ ವರದಿಯಾಗಿದ್ದು, ಈ ಬಗ್ಗೆಯೂ ಸೂಕ್ತ ತನಿಖೆ ನಡೆಸಿ, ಕರ್ತವ್ಯ ನಿರ್ಲಕ್ಷ್ಯ ಎಸಗಿರುವ ಪೊಲೀಸರ ಮೇಲೆ ಕ್ರಮ ಜರುಗಿಸಬೇಕು. ಮೃತ ಜಯಕುಮಾರ್ ಕುಟುಂಬಕ್ಕೆ ಸರ್ಕಾರ ಒಂದು ಕೋಟಿ ರೂ ಪರಿಹಾರ ಕೊಡಬೇಕು. ಮತ್ತು ಮೃತನ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಅವರ ಮಕ್ಕಳ ಶಿಕ್ಷಣದ ಖರ್ಚನ್ನು ಸರ್ಕಾರವೇ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರವೇ ಪ್ರವೀಣ್ ಶೆಟ್ಟಿ ಬಣದ ಮಂಡ್ಯ ಜಿಲ್ಲಾಧ್ಯಕ್ಷ ಡಿ. ಅಶೋಕ್, ಹರಳಹಳ್ಳಿ ಶಿವರಾಂ, ಕರವೇ ಕಾಂತರಾಜು, ಡಿ.ಎಸ್.ಎಸ್ ಅಧ್ಯಕ್ಷ ದೇವರಾಜು ಅರಳಕುಪ್ಪೆ, ಕರ್ನಾಟಕ ರಾಜ್ಯ ರೈತಸಂಘ (ರೈತಬಣ) ಗೌರವಾಧ್ಯಕ್ಷ ಬಿಡದಿ ಪಿ.ಎಂ. ರವಿಕುಮಾರ್, ಮೈಸೂರು ಜಿಲ್ಲಾಧ್ಯಕ್ಷ ಮಾಲೀಕ್ ಅರ್ವತಿ, ರೈತಬಣ, ರಾಜ್ಯ ಅಲ್ಪಸಂಖ್ಯಾತರ ವಿಭಾಗದ ರಾಜ್ಯಾಧ್ಯಕ್ಷ ತನ್ವಿರ್ ಮುಜಾದ್, ಮಂಡ್ಯ ಜಿಲ್ಲಾಧ್ಯಕ್ಷ ಕೆ.ಹೆಚ್ ಕಂಠೀರವರು ಕಾರಸವಾಡಿ, ವಿಜಯನಗರ ಜಿಲ್ಲಾಧ್ಯಕ್ಷ ಹರಪನಹಳ್ಳಿ ಲೋಕೇಶ್‌ನಾಯಕ್, ಬಂಜಾರ ಸಮಾಜದ ರಾಜ್ಯಾಧ್ಯಕ್ಷ ಸುರೇಶ ನಾಯಕ್, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಕೆಂಪರಾಜು, ಕೆ.ಆರ್. ಪೇಟೆ ತಾಲೂಕು ಅಧ್ಯಕ್ಷ ದೊಡ್ಡನಕಟ್ಟೆ ಹರೀಶ್‌ಕುಮಾರ್, ಹಾಸನ ಜಿಲ್ಲಾ ಅಧ್ಯಕ್ಷ ದಯಾನಂದ್ ಬೆಳಗುಂಬ, ಮುಖಂಡರಾದ ಕಾಳಪ್ಪ ಜಯಪುರ, ಮಂಜುಪಾಳ್ಯ, ಪುಟ್ಟಸ್ವಾಮಿ ನಾಯಕ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

## ತಪ್ಪು ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಜಿಲ್ಲಾಧಿಕಾರಿ ಡಾ.ಕುಮಾರ್ ಭರವಸೆ



ಮಂಡ್ಯ, ಜೂ.2– ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕತ್ತರಘಟ್ಟ ಗ್ರಾಮದ ದಲಿತ ಯುವಕ ಜಯಕುಮಾರ್ ಸಾವಿನ ಬಗ್ಗೆ ಸಮಗ್ರ ತನಿಖೆ ನಡೆಸಿ ಪ್ರಕರಣದಲ್ಲಿ ಯಾವುದೇ ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಭರವಸೆ ನೀಡಿದರು.

ಸೋಮವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ತಿದ್ದುಪಡಿ ಕಾಯ್ದೆ –2015 ಹಾಗೂ ತಿದ್ದುಪಡಿ ನಿಯಮಗಳು 2016 ಅನ್ನು ಅನುಷ್ಠಾನಗೊಳಿಸುವ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆ ಜಾರಿಯಲ್ಲಿದ್ದು, ಇದರ ಬಗ್ಗೆ ಜನರಿಗೆ ತಿಳಿದಿದ್ದರೂ ಪ್ರಕರಣಗಳು ಮರುಕಳಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಮರುಕಳಿಸದಂತೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಘಟನೆಯಲ್ಲಿ ದೊರೆತ ಸಾಕ್ಷಿಗಳನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ. ಘಟನೆ ನಡೆದ ಹಿಂದಿನ ದಿನ ಪೊಲೀಸ್ ಇಲಾಖೆಯಲ್ಲಿ ದೂರು ದಾಖಲು ಮಾಡಿಕೊಳ್ಳದೆ ಇರುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ವರದಿ ಬಂದ ಬಳಿಕ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈಗಾಗಲೇ ಜಿಲ್ಲಾಡಳಿತ ಸ್ಥಳಕ್ಕೆ ಭೇಟಿ ನೀಡಿ, ಸರ್ಕಾರದಿಂದ ಮೃತರ ಪತ್ನಿ ಹಾಗೂ ಮಕ್ಕಳಿಗೆ ಕಾನೂನು ವ್ಯಾಪ್ತಿಯಲ್ಲಿ ಒದಗಿಸಬಹುದಾದ ಸೌಲಭ್ಯಗಳ ಬಗ್ಗೆ ಯೋಚಿಸಲಾಗಿದೆ. 8.25 ಲಕ್ಷ ರೂ. ಪರಿಹಾರ ಹಣವನ್ನು ಈಗಾಗಲೇ ಮಂಜೂರು ಮಾಡಲಾಗಿದ್ದು, 4.12 ಲಕ್ಷ ರೂ. ಪರಿಹಾರದ ಚೆಕ್ ನೀಡಲಾಗಿದೆ. ಚಾರ್ಜ್‌ಶೀಟ್ ಸಲ್ಲಿಕೆಯಾದ ನಂತರ ಉಳಿದ ಪರಿಹಾರ ಹಣವನ್ನು ಸಹ ನೀಡಲಾಗುವುದು. ತಿಂಗಳಿಗೆ ಐದು ಸಾವಿರ ರೂ. ಪಿಂಚಣಿಯಾಗಿ ನೀಡಲಾಗುವುದು ಎಂದರು.

ಮೃತರ ಕುಟುಂಬದ ಹೆಸರಿನಲ್ಲಿ 1 ಎಕರೆ 20 ಕುಂಟೆ ಜಮೀನಿದ್ದು, ಇದಕ್ಕೆ ಪೌತಿ ಖಾತೆ ಮಾಡಿಕೊಡಲು ಹಾಗೂ ಮನೆಯ ದುರಸ್ತಿ ಮಾಡಿಕೊಡಲು ಕ್ರಮವಹಿಸಲಾಗುವುದು. ಗಂಗಾ ಕಲ್ಯಾಣ ಯೋಜನೆಯಡಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊಳವೆ ಬಾವಿ ಕೊಡಿಸಲಾಗುವುದು. ಮೃತರಿಗೆ ಇಬ್ಬರು ಮಕ್ಕಳಿದ್ದು, ಅವರ ತಾಯಿ ಇಚ್ಛಿಸಿದಲ್ಲಿ ಹತ್ತಿರದ ಆಶ್ರಮ ಶಾಲೆ ಅಥವಾ ಪ್ರತಿಷ್ಠಿತ ಶಾಲೆಯಲ್ಲಿ ವಿದ್ಯಾಭ್ಯಾಸ ಯೋಜನೆಯಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಉಚಿತ ಶಿಕ್ಷಣಕ್ಕೆ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ವಿವರಿಸಿದರು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಎಫ್‌ಐಆರ್ ಆದ 60 ದಿನಗಳಲ್ಲಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಬೇಕು, ವಿಚಾರಣೆ ಸಂದರ್ಭದಲ್ಲಿ ದೊರೆತ ಮಾಹಿತಿ ಆಧಾರದ ಮೇಲೆ ಚಾರ್ಜ್‌ಶೀಟ್ ಸಲ್ಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ಸಭೆಯಲ್ಲಿ ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸಿದ್ದಲಿಂಗೇಶ್, ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕ ರಂಗಸ್ವಾಮಿ, ತಹಶೀಲ್ದಾರ್‌ಗಳಾದ ಶಿವಕುಮಾರ್ ಬಿರಾದರ್, ಸ್ಮಿತಾ ಹಾಗೂ ಸಮಿತಿ ಸದಸ್ಯರಾದ ಕೆರಗೋಡು ಸೋಮಶೇಖರ್, ಮಾರಕಾಳು ಮಾಧು, ಆನಂದ್, ವಿಶ್ವನಾಥ್, ಗುರುಪ್ಪ ಉಬೇದುಲ್ಲಾ, ನರಸಿಂಹ ಮೂರ್ತಿ, ನಾಗರತ್ನ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

### ಮಿಮ್ಸ್‌ನಲ್ಲಿ ಬಾಲಕಿಯ ಸಾವು ಪ್ರಕರಣ

## ತನಿಖೆಗೆ ತಜ್ಞವೈದ್ಯರ ಸಮಿತಿ ರಚನೆ

ಮಂಡ್ಯ, ಜೂ.2– ಮಳವಳ್ಳಿ ತಾಲೂಕು ನೆಲ್ಲೂರು ಗ್ರಾಮದ ಏಳು ವರ್ಷದ ಬಾಲಕಿ ಸಾನ್ವಿ ಮಿಮ್ಸ್ ಆಸ್ಪತ್ರೆಯಲ್ಲಿ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಐವರು ತಜ್ಞವೈದ್ಯರ ಸಮಿತಿ ರಚಿಸಿ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶಿಸಿದ್ದಾರೆ.

ಬಾಲಕಿಯ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂಬ ಆರೋಪ ಬಂದ ಹಿನ್ನೆಲೆಯಲ್ಲಿ ಸದರಿ ಪ್ರಕರಣವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿ, ಸತ್ಯಾಸತ್ಯತೆಯನ್ನು ಪರಿಶೀಲಿಸುವ ಸಲುವಾಗಿ ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಸಮಿತಿಯಲ್ಲಿ ಮೈಸೂರು ವೈದ್ಯಕೀಯ ಕಾಲೇಜಿನ ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್ ಅವರು ಅಧ್ಯಕ್ಷರಾಗಿ, ನಾಗಮಂಗಲ ತಾಲೂಕಿನ ಬಿ.ಜಿ.ನಗರದಲ್ಲಿರುವ ಮೂಳೆ ಮತ್ತು ಕೀಲು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಹೇಶ್, ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಬಾಲಕೃಷ್ಣ, ಅರಿವಳಿಕೆ ವಿಭಾಗದ ಮುಖ್ಯಸ್ಥ ಡಾ.ಚೇತನಾನಂದ ಸದಸ್ಯರಾಗಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸೋಮಶೇಖರ್ ಸದಸ್ಯ ಕಾರ್ಯದರ್ಶಿಗಳಾಗಿ ಸಮಿತಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಸಮಿತಿಯು ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಕೂಡಲೇ ತನಿಖೆ ನಡೆಸಿ ತನಿಖಾ ವರದಿಯನ್ನು 15 ದಿನದೊಳಗಾಗಿ ತಪ್ಪದೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಸೂಚಿಸಿದ್ದಾರೆ.

## ಪ್ರೋತ್ಸಾಹಧನ ಮಂಜೂರಾತಿಗಾಗಿ ಅರ್ಜಿ ಆಹ್ವಾನ

**ಮಂಡ್ಯ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ದ್ವಿತೀಯ ಪಿ.ಯು.ಸಿ ಐ.ಟಿ.ಐ, ಡಿಪ್ಲೊಮಾ ಹಾಗೂ ಪದವಿ, ಇತರೆ ಕೋರ್ಸುಗಳಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳಿಸಿದ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗದ ವಿದ್ಯಾರ್ಥಿಗಳ ಪ್ರೋತ್ಸಾಹಧನ ಮಂಜೂರಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://swdservices.karnataka.gov.in ನಲ್ಲಿ ಆನ್‌ಲೈನ್ ಅಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08236–256124 ಅನ್ನು ಹಾಗೂ ಪಾಂಡವಪುರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

## ಸಚಿವ ಎನ್.ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಣೆ



ಪಾಂಡವಪುರ ಸಾರ್ವಜನಿಕ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣುಹಂಪಲು ವಿತರಿಸುವ ಮೂಲಕ ಸಚಿವ ಎನ್.ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಿಸಲಾಯಿತು.

ಪಾಂಡವಪುರ, ಜೂ.2– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಅಭಿಮಾನಿ ಬಳಗದ ವತಿಯಿಂದ ರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡಲಾಯಿತು.


ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡಿ, ನೆಚ್ಚಿನ ನಾಯಕರ ಹುಟ್ಟುಹಬ್ಬವನ್ನು ಆಚರಣೆ ಮಾಡುವ ಮೂಲಕ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ಶ್ರೀಕಾಂತ್ ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷರಾದ ಚಂದ್ರಶೇಖರ್, ಭರತ್ ಪಟೇಲ್, ಮುಖಂಡರಾದ ಮನೋರಂಜನ್, ಮಹಮದ್ ಹನೀಫ್ (ಪಾಮು), ಎಂಜಿನಿಯರ್ ಯೋಗೇಶ್, ಪುರಸಭೆ ಸದಸ್ಯ ಉಮಾಶಂಕರ್, ಗಂಗಾದರ್, ಹೇಮಾದ್ರಿ, ಅಂಕಯ್ಯ, ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಹಾಜರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

**ಮಂಡ್ಯ:** ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂನ್ 3 ರಂದು ಬೆಳಿಗ್ಗೆ 9 ರಿಂದ 10 ಮತ್ತು ಸಂಜೆ 5ರಿಂದ 6 ರ ವರೆಗೆ ವಿದ್ಯುತ್‌ನಲ್ಲಿ ವ್ಯತ್ಯಯವಾಗಲಿದೆ. ವಿದ್ಯುತ್ ವ್ಯತ್ಯಯ ಉಂಟಾಗುವ ಪ್ರದೇಶಗಳು: ಫ್ಯಾಕ್ಟರಿ ಸರ್ಕಲ್, ಗುತ್ತಲು ರಸ್ತೆ, ಅರ್ಕೇಶ್ವರ ನಗರ, ಸಾಹುಕಾರ್ ಚನ್ನಯ ಬಡಾವಣೆ, ಸಾದತ್ ನಗರ, ಇಂದಿರಾ ಕಾಲೋನಿ, ವಿ.ವಿ.ಪುರಂ, ನೆಹರು ನಗರ, ಉದಯಗಿರಿ, ಲೇಬರ್ ಕಾಲೋನಿ, ಹಾಲನಹಳ್ಳಿ ಕೆರೆ, ಇಂಡಸ್ಟ್ರಿಯಲ್ ಏರಿಯಾ ಹಂತ–1 , ಹಂತ–2 ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

## ಬಿ.ಆರ್.ಸ್ವಾಮಿ ನಿಧನ



**ಶ್ರೀರಂಗಪಟ್ಟಣ:** ತಾಲೂಕಿನ ಬೆಳಗೊಳ ಗ್ರಾಮದ ಹಾರ್ಮೋನಿಯಂ ವಿದ್ವಾಂಸರಾದ ಬಿ.ಆರ್.ಸ್ವಾಮಿ(82) ಇವರು ಇಂದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಮೃತರು ಮಗ ಚಿದಂಬರ, ಸೊಸೆ ಮತ್ತು ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಬೆಳಗೊಳದ ಅವರ ತೋಟದಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

## ಮನೆಗೇ ಆರೋಗ್ಯ ಭಾಗ್ಯ

ಇದರ ಯಶಸ್ಸಿನ ನಂತರ ಇದೀಗ ಈ ಯೋಜನೆಯನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರಂಭದಲ್ಲಿ 30 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳಲ್ಲಿ ಪ್ರಮುಖ ಎನ್‌ಸಿಡಿಗಳಿಗೆ ತಪಾಸಣೆ ನಡೆಸಲಾಗುವುದು. ಅದರಲ್ಲಿ ಪ್ರಮುಖವಾಗಿ ಮಧುಮೇಹ, ಅಧಿಕ ರಕ್ತದೊತ್ತಡ, ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ರೋಗಗಳ ತಪಾಸಣೆ ಮತ್ತು ನಿರ್ವಹಣೆಯನ್ನು ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಆಶಾ ಕಾರ್ಯಕರ್ತೆಯರು ಪ್ರತಿ ಮನೆ ಮನೆಗೆ ತೆರಳಿ ಜನರಲ್ಲಿ ಅಸಾಂಕ್ರಾಮಿಕ ರೋಗಗಳ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಸಮುದಾಯ ಆರೋಗ್ಯಾಧಿಕಾರಿಗಳ ಮೂಲಕ ತಪಾಸಣಾ ಕಾರ್ಯಕ್ಕೆ ನೆರವಾಗುವರು. ಸಮುದಾಯ ಆರೋಗ್ಯ ಅಧಿಕಾರಿಗಳು ತಪಾಸಣೆ ನಡೆಸಿ, ಎನ್‌ಸಿಡಿ ಪೋರ್ಟಲ್‌ನಲ್ಲಿ ಡೇಟಾ ನಮೂದಿಸಲಿದ್ದು, ರಕ್ತದೊತ್ತಡ, ಡಯಾಬಿಟಿಸ್ ಹೊಂದಿದವರಿಗೆ ಸ್ಥಳದಲ್ಲೇ ಔಷಧಿಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆಯನ್ನು ಗೃಹ ಆರೋಗ್ಯ ಯೋಜನೆಯಲ್ಲಿ ಕಲ್ಪಿಸಲಾಗಿದೆ.

## ಅಸಾಂಕ್ರಾಮಿಕ ರೋಗಗಳ ತಪಾಸಣೆ

ಗೃಹ ಆರೋಗ್ಯ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಿಸಲಾಗುತ್ತಿದೆ. ಎಲ್ಲಾ ಮನೆಗಳಲ್ಲಿ 30 ವರ್ಷ ಮೇಲ್ಪಟ್ಟವರನ್ನು ತಪಾಸಣೆಗೆ ಒಳಪಡಿಸಿ, ಸೂಕ್ತ ಔಷಧಗಳನ್ನು ಅವರ ಬಳಿಗೆ ತಲುಪಿಸುವ ಕಾರ್ಯ ಪ್ರಾರಂಭಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಗೃಹ ಆರೋಗ್ಯ ಯೋಜನೆಯನ್ನು ಮೊದಲು ಕೋಲಾರ ಜಿಲ್ಲೆಯಲ್ಲಿ ಮಾತ್ರ ಪ್ರಾರಂಭಿಸಿದಾಗ ಹಲವು ಸಂಗತಿಗಳು ಬೆಳಕಿಗೆ ಬಂದವು. ಅವೆಲ್ಲವನ್ನೂ ತುಲನೆ ಮಾಡಿ ಯೋಜನೆಯಲ್ಲಿ ಒಂದಿಷ್ಟು ಬದಲಾವಣೆಗಳನ್ನು ತರಲಾಗಿದೆ. ಆಶಾ ಕಾರ್ಯಕರ್ತೆಯರಿಂದ ಹಿಡಿದು ಸಮುದಾಯ ಆರೋಗ್ಯ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ವಹಿಸಿ, ಸ್ಪಷ್ಟ ಮಾಹಿತಿಯುಳ್ಳ ಕೈಪಿಡಿ ನೀಡಿದ್ದೇವೆ. ತಪಾಸಣೆ ಬಳಿಕ ರೋಗಿಗಳ ಮೇಲ್ವಿಚಾರಣೆ ಕೂಡ ನಡೆಯಬೇಕು. ಆ ನಿಟ್ಟಿನಲ್ಲಿ ವ್ಯವಸ್ಥಿತವಾಗಿ ಯಾರು ಏನು ಮಾಡಬೇಕು ಎಂಬ ಸ್ಪಷ್ಟ ಚಿತ್ರಣವನ್ನ ಆರೋಗ್ಯ ಸಿಬ್ಬಂದಿಗೆ ನೀಡಲಾಗಿದೆ ಎಂದರು.

## ತ್ವರಿತಗತಿಯಲ್ಲಿ ಭೂಸ್ವಾಧೀನ

ರೈಲ್ವೆ ಮಾರ್ಗ ನಿರ್ಮಾಣಕ್ಕೆ ಸಂಬಂಧಿಸಿದಂತೆ ಆಂಧ್ರ–ಕರ್ನಾಟಕ ಗಡಿ ಭಾಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ನಿಶಾಂತ್, ಗಂಟೆಗೆ 350 ಕಿಲೋ ಮೀಟರ್ ವೇಗದಲ್ಲಿ ಚಲಿಸುವ ಈ ರೈಲಿಗೆ ಪ್ರತ್ಯೇಕ ಮಾರ್ಗ ನಿರ್ಮಿಸಲಾಗುತ್ತದೆ. ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕರ್ನಾಟಕ ಭಾಗದಲ್ಲಿ ಸಂಚರಿಸುವ ಈ ರೈಲು ಮೈಸೂರಿನಿಂದ ಚೆನ್ನೈಗೆ ಕೇವಲ 2–25 ಗಂಟೆಯಲ್ಲಿ ಕ್ರಮಿಸಲಿದೆ. ಬುಲೆಟ್ ರೈಲು ಸಂಚಾರಕ್ಕೆ ಅನುಕೂಲವಾಗುವಂತೆ ನೇರ ಮಾರ್ಗ ನಿರ್ಮಿಸಲಾಗುವುದು, ಇದರಲ್ಲಿ ಹಲವೆಡೆ ಎತ್ತರದ ಸೇತುವೆಗಳ ನಿರ್ಮಾಣವೂ ಸೇರಿದೆ. ತಮಿಳುನಾಡು ಮತ್ತು ಆಂಧ್ರದಲ್ಲಿ ಭೂಸ್ವಾಧೀನ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಕರ್ನಾಟಕದಲ್ಲೂ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಬುಲೆಟ್ ರೈಲು ಕ್ರಿಯಾ ಯೋಜನೆ ಸಿದ್ಧಗೊಳ್ಳಲಿದೆ ಎಂದರು. ಪ್ರಸ್ತುತ ಈ ಮಾರ್ಗದಲ್ಲಿ ಶತಾಬ್ದಿ ಅತಿವೇಗದ 'ವಂದೇ ಭಾರತ್ ಎಕ್ಸ್‌ಪ್ರೆಸ್' ರೈಲು ಸಂಚರಿಸುತ್ತಿದ್ದು, ಚೆನ್ನೈ–ಬೆಂಗಳೂರು–ಮೈಸೂರು ಅಂತರವನ್ನು 6 ಗಂಟೆ 30 ನಿಮಿಷಗಳಲ್ಲಿ ಕ್ರಮಿಸುತ್ತಿವೆ.

## ಸಪ್ತರ್ಷಿ ಗುರುಕುಲ ಸೇವಾಶ್ರಮದಲ್ಲಿ ಸಾಮೂಹಿಕ ಉಪನಯನ



ಮೈಸೂರಿನ ಸಾಧನಹಳ್ಳಿ ಸಪ್ತರ್ಷಿ ಗುರುಕುಲ ಸೇವಾಶ್ರಮದಲ್ಲಿ ಸಾಮೂಹಿಕ ಉಪನಯನ ಆಶ್ರಮದ ಸಂಸ್ಥಾಪಕರಾದ ಶ್ರೀ ಅಭಿನವ ರಾಮಾನುಜ ಜೀಯರ್ ನೇತೃತ್ವದಲ್ಲಿ ನೆರವೇರಿತು. ಉಪನಯನದಲ್ಲಿ ಪಾಲ್ಗೊಂಡಿದ್ದ ವಟುಗಳು, ಭಕ್ತಾದಿಗಳು ಪಾಲ್ಗೊಂಡಿದ್ದರು.

## ಇಂದು ಐಪಿಎಲ್ 18ನೇ ಆವೃತ್ತಿ ಫೈನಲ್

ಸಮಾರಂಭದಲ್ಲಿ ಪ್ರಸಿದ್ಧ ಗಾಯಕ ಶಂಕರ್ ಮಹಾದೇವನ್ ಅವರು ಆಪರೇಷನ್ ಸಿಂಧೂರ್‌ನ ವೀರರು ಮತ್ತು ಪಹಲ್ಗಾಮ್ ದಾಳಿಯಲ್ಲಿ ಮಡಿದವರಿಗೆ ಗೌರವ ಸಲ್ಲಿಸಲಿದ್ದಾರೆ. ಅಲ್ಲದೇ ಅನೇಕ ತಾರೆಯರು ಪ್ರದರ್ಶನ ನೀಡಲಿದ್ದಾರೆ ಎನ್ನಲಾಗಿದೆ.

### ಆರ್‌ಸಿಬಿ ಪ್ರಶಸ್ತಿ ಗೆಲ್ಲುವ ಫೇವರಿಟ್

ಕ್ವಾಲಿ ಫೈಯರ್ 1ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸುವ ಮೂಲಕ ಆರ್‌ಸಿಬಿ ನೇರವಾಗಿ ಫೈನಲ್ ಪ್ರವೇಶಿಸಿದೆ. ಹಿಂದಿನ ಆವೃತ್ತಿಗಳಲ್ಲಿನ ನೀರಸ ಪ್ರದರ್ಶನ ಮೀರಿರುವ ಆರ್‌ಸಿಬಿ, ಈ ವರ್ಷ ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಆರಂಭಿಕ ಕ್ರಮಾಂಕದಲ್ಲಿ ಕೊಹ್ಲಿ ಸ್ಥಿರ ಪ್ರದರ್ಶನ ನೀಡಿ ತಂಡಕ್ಕೆ ಭದ್ರ ಅಡಿಪಾಯ ಒದಗಿಸಿದ್ದಲ್ಲದೆ, ಈ ಬಾರಿ ಒಟ್ಟು 614 ರನ್ ಗಳಿಸಿದ್ದಾರೆ.

ಬ್ಯಾಟಿಂಗ್‌ನಲ್ಲಿ ಕೊಹ್ಲಿ ತಂಡಕ್ಕೆ ಆಧಾರವಾಗಿದ್ದರೆ, ಬೌಲಿಂಗ್‌ನಲ್ಲಿ ಜೋಷ್ ಹೇಜಲ್‌ವುಡ್ 21 ವಿಕೆಟ್‌ಗಳನ್ನು ಕಬಳಿಸಿ ತಂಡಕ್ಕೆ ಆಧಾರವಾಗಿದ್ದಾರೆ. ಆರ್‌ಸಿಬಿಗೆ ಆಸರೆ ಒದಗಿಸಿರುವವರ ಪೈಕಿ ವಿರಾಟ್ ಕೊಹ್ಲಿ ಜೊತೆಗೆ ಫಿಲ್ ಸಾಲ್ಟ್, ನಾಯಕ ರಜತ್ ಪಾಟೀದಾರ್, ಜಿತೇಶ್ ಶರ್ಮ, ಕೃಣಾಲ್ ಪಾಂಡ್ಯ, ಹೇಜಲ್‌ವುಡ್, ಯಶ್ ದಯಾಳ್, ಸುಯಾಶ್, ರೊಮಾರಿಯೊ ಶೆಫರ್ಡ್ ಹೀಗೆ ತಂಡದ ಪ್ರತಿಯೊಬ್ಬ ಸದಸ್ಯನೂ ಫೈನಲ್‌ವರೆಗಿನ ಪಯಣದಲ್ಲಿ ತಮ್ಮ ಹೊಣೆಗಾರಿಕೆ ನಿಭಾಯಿಸುವ ಮೂಲಕ ಹೆಗಲು ನೀಡಿದ್ದಾರೆ.

### ಫೈನಲ್‌ನಲ್ಲಿ ಪಂಬಾಬ್ ಕಮ್‌ಬ್ಯಾಕ್

ಅತ್ತ ಕಳೆದ ಆವೃತ್ತಿಯಲ್ಲಿ ಕೋಲ್ಕತ್ತಾ ತಂಡಕ್ಕೆ ಪ್ರಶಸ್ತಿ ದಕ್ಕಿಸಿಕೊಟ್ಟಿರುವ ಪಂಜಾಬ್ ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್, 18 ವರ್ಷದ ಐಪಿಎಲ್ ಇತಿಹಾಸದಲ್ಲಿ 3 ತಂಡಗಳನ್ನು ಫೈನಲ್‌ಗೆ ಮುನ್ನಡೆಸಿದ ಕೀರ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ವರ್ಷವೂ ಪಂಜಾಬ್ ತಂಡವನ್ನು ಫೈನಲ್ ತಲುಪಿಸುವ ಮೂಲಕ ತಮ್ಮ ನಾಯಕತ್ವ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಕಳೆದ ಆವೃತ್ತಿಯಲ್ಲಿ ಕೆಕೆಆರ್ ಪ್ರಶಸ್ತಿ ಗೆಲುವಿನ ಶ್ರೇಯವನ್ನು ಅಯ್ಯರ್‌ಗೆ ನೀಡಿರಲಿಲ್ಲ ಎನ್ನುವ ಟೀಕೆಗಳು ಕೇಳಿ ಬಂದಿದ್ದವು. ಇನ್ನು ಪ್ರಭ್‌ಸಿಮ್ರನ್ ಸಿಂಗ್, ಜೋಷ್ ಇಂಗ್ಲಿಸ್, ಪ್ರಿಯಾಂಶ್ ಆರ್ಯ, ಶಶಾಂಕ್ ಸಿಂಗ್, ಅಯ್ಯರ್ ಪಡೆಗೆ ಆಸರೆ ಒದಗಿಸಿದ್ದಾರೆ. ಕೈ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಸ್ಟಾರ್ ಸ್ಪಿನ್ನರ್ ಯಜ್ವೇಂದ್ರ ಚಾಹಲ್ ಕ್ವಾಲಿಫೈಯರ್ 2 ಪಂದ್ಯದಲ್ಲಿ ನಿರೀಕ್ಷಿತ ಪ್ರದರ್ಶನ ನೀಡಿರಲಿಲ್ಲ. ತಂಡ, ಚಾಹಲ್ ಫೈನಲ್‌ನಲ್ಲಿ ಕಮ್‌ಬ್ಯಾಕ್ ಮಾಡುವ ನಿರೀಕ್ಷೆಯಲ್ಲಿದೆ.

### ಆರ್‌ಸಿಬಿಗೆ 4ನೇ ಫೈನಲ್ ಪಂದ್ಯ

ಐಪಿಎಲ್ ಇತಿಹಾಸದಲ್ಲಿ ಆರ್‌ಸಿಬಿ ತಂಡ ಇದುವರೆಗೂ ಮೂರು ಬಾರಿ ಫೈನಲ್ ಪ್ರವೇಶಿಸಿದೆ. ಆದರೆ ಗೆದ್ದು ಟ್ರೋಫಿ ಎತ್ತಿ ಹಿಡಿಯುವಲ್ಲಿ ಅದು ವಿಫಲವಾಗಿದೆ. ಆರ್‌ಸಿಬಿಯ ಫೈನಲ್ ಕಂಟಕ ಮೂರಕ್ಕೆ ಮುಕ್ತಾಯಗೊಳ್ಳಲಿ ಎಂಬ ಅಭಿಮಾನಿಗಳ ಹಾರೈಕೆಯೊಂದಿಗೆ ಕನ್ನಡಿಗರ ನೆಚ್ಚಿನ ಫ್ರಾಂಚೈಸಿ ಮಂಗಳವಾರ 4ನೇ ಸಲ ಪ್ರಶಸ್ತಿ ಸೆಣಸಾಟದಲ್ಲಿ ಕಾಣಿಸಿಕೊಳ್ಳಲಿದೆ.

ಆರ್‌ಸಿಬಿ ತೋರಿದ ಜೋಶ್, ಆಡಿದ ಆಟ, ಫೈನಲ್ ತನಕ ಸಾಗಿಬಂದ ರೀತಿ ಗಮನಿಸಿದಾಗ ಹಾಗೂ ಆರ್‌ಸಿಬಿ ತಂಡದ ಅಭಿಮಾನಿಗಳು ಒಂದು ಐಪಿಎಲ್ ಟ್ರೋಫಿಗಾಗಿ ಕಳೆದ ಹದಿನೆಂಟು ವರ್ಷಗಳಿಂದ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದು, 'ಈ ಸಲ ಕಪ್ ನಮ್ದೇ' ಎನ್ನುವ ಅವಕಾಶ ಅವರಿಗೆ ಒದಗಿ ಬರಲಿ ಎಂಬುದು ಎಲ್ಲರ ಆಶಯವಾಗಿದೆ.

### ಪಂಜಾಬ್–ಆರ್‌ಸಿಬಿ ಮುಖಾಮುಖಿ




ಐಪಿಎಲ್ ಇತಿಹಾಸದಲ್ಲಿ ಆರ್‌ಸಿಬಿ ಮತ್ತು ಪಂಜಾಬ್ ನಡುವೆ ಇಲ್ಲಿವರೆಗೆ 36 ಐಪಿಎಲ್ ಪಂದ್ಯಗಳು ನಡೆದಿದ್ದು ಇದರಲ್ಲಿ ಪಂಜಾಬ್ ಕಿಂಗ್ಸ್ 18 ಪಂದ್ಯಗಳನ್ನು ಗೆದ್ದಿದ್ದರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು 18 ಪಂದ್ಯಗಳಲ್ಲಿ ಗೆಲುವು ಸಾಧಿಸಿ ಸಮಬಲ ಸಾಧಿಸಿವೆ. ಪ್ರಸಕ್ತ ಐಪಿಎಲ್ ಟೂರ್ನಿಯಲ್ಲಿ ಕ್ವಾಲಿಫೈಯರ್–1ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪಂಜಾಬ್ ಕಿಂಗ್ಸ್ ವಿರುದ್ಧ ಜಯಗಳಿಸಿ ಫೈನಲ್ ಪ್ರವೇಶಿಸಿದರೆ, ಕ್ವಾಲಿಫೈಯರ್ – 2 ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ 5 ಬಾರಿಯ ಚಾಂಪಿಯನ್ ಬಲಿಷ್ಠ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿ ಫೈನಲ್‌ಗೆ ಲಗ್ಗೆ ಇಟ್ಟಿದೆ. ಈ ಸೀಸನ್‌ನಲ್ಲಿ ಎರಡೂ ತಂಡಗಳ ನಡುವೆ ಮೂರು ಪಂದ್ಯಗಳು ನಡೆದಿದ್ದು, ಆರ್‌ಸಿಬಿ ಎರಡು ಪಂದ್ಯಗಳನ್ನು ಗೆದ್ದಿದ್ದರೆ, ಪಂಜಾಬ್ ಒಂದು ಪಂದ್ಯವನ್ನು ಗೆದ್ದಿದೆ. ಅಂತಹ ಪರಿಸ್ಥಿತಿಯಲ್ಲಿ, ಈ ಫೈನಲ್ ಪಂದ್ಯವು ತುಂಬಾ ರೋಮಾಂಚನಕಾರಿಯಾಗಿರುತ್ತದೆ.

### 2009: 6 ರನ್ ಸೋಲು

**ಆರ್‌ಸಿಬಿ ಮೊದಲ ಸಲ ಫೈನಲ್ ಪ್ರವೇಶಿಸಿದ್ದು 2009ರಲ್ಲಿ. ಅದು ಜೊಹಾನ್ಸ್‌ಬರ್ಗ್‌ನಲ್ಲಿ ನಡೆದ ಡೆಕ್ಕನ್ ಚಾರ್ಜರ್ ಎದುರಿನ ಮುಖಾಮುಖಿ. ಸ್ವತಃ ನಾಯಕ ಅನಿಲ್ ಕುಂಬ್ಳೆ 16ಕ್ಕೆ 4 ವಿಕೆಟ್ ಉರುಳಿಸಿ ಡೆಕ್ಕನ್ ಮೊತ್ತವನ್ನು 143ಕ್ಕೆ (6 ವಿಕೆಟ್) ಹಿಡಿದು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಆರ್‌ಸಿಬಿಗೆ ಈ ಸಾಮಾನ್ಯ ಗುರಿಯನ್ನೂ ಮುಟ್ಟಲಾಗಲಿಲ್ಲ. 9ಕ್ಕೆ 137 ರನ್ ಗಳಿಸಿ ಕಪ್ ಕೈಚೆಲ್ಲಿತು.**




### ಪಂಜಾಬ್‌ಗೆ 2ನೇ ಫೈನಲ್

ಅದೇ ರೀತಿ ಪಿಬಿಕೆಎಸ್ ಕೂಡ ಐಪಿಎಲ್ ಇತಿಹಾಸದಲ್ಲಿ ಕೇವಲ ಒಮ್ಮೆ ಮಾತ್ರ ಫೈನಲ್ ಪ್ರವೇಶಿಸಿದೆ. ಆಗ ಈ ತಂಡದ ಹೆಸರು ಕಿಂಗ್ಸ್ ಇಲೆವೆನ್ ಪಂಜಾಬ್ ಆಗಿತ್ತು. ಇದೀಗ ಮತ್ತೊಮ್ಮೆ ಫೈನಲ್ ಪ್ರವೇಶಿಸಿದ್ದು ಇತಿಹಾಸ ಸೃಷ್ಟಿಸಲು ಇನ್ನೊಂದು ಹೆಜ್ಜೆ ಬಾಕಿ ಇದೆ.

**2014:** ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಈ ಪಂದ್ಯದಲ್ಲಿ ಆಗ ಕಿಂಗ್ ಇಲೆವನ್ ಪಂಜಾಬ್ ತಂಡ ನಿಗದಿತ 20 ಓವರ್‌ಲ್ಲಿ 4 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತ್ತು. ಈ ಗುರಿಯನ್ನು ಬೆನ್ನಟ್ಟಿದ್ದ ಕೆಕೆಆರ್ ನಿಗದಿತ 20 ಓವರ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಗೆಲುವು ಪಡೆದಿತ್ತು.

### 2011: ಧೋನಿ ಪಡೆಗೆ ಶರಣು

2011ರಲ್ಲಿ ಆರ್‌ಸಿಬಿ 2ನೇ ಸಲ ಫೈನಲ್ ಪ್ರವೇಶಿಸಿತು. ವಿಶೇಷವೆಂದರೆ, ಆರ್‌ಸಿಬಿ ಲೀಗ್‌ನಲ್ಲಿ 19 ಅಂಕ ಸಂಪಾದಿಸಿ ಅಗ್ರಸ್ಥಾನ ಅಲಂಕರಿಸಿತ್ತು. ಫೈನಲ್ ಎದುರಾಳಿ ಚೆನ್ನೈ, ಪಂದ್ಯ ನಡೆದದ್ದೂ ಚೆನ್ನೈನಲ್ಲೇ. ಆದರೆ ಇಲ್ಲಿಯೂ ಬ್ಯಾಟಿಂಗ್ ವೈಫಲ್ಯ ಮುಂದುವರಿಯಿತು. ಚೆನ್ನೈ 5ಕ್ಕೆ 205 ರನ್ ಪೇರಿಸಿದರೆ, ಡೇನಿಯಲ್ ವೆಟೋರಿ ನಾಯಕತ್ವದಲ್ಲಿ ಆಡಲಿಳಿದಿದ್ದ ಆರ್‌ಸಿಬಿಗೆ ಗಳಿಸಲು ಸಾಧ್ಯವಾದದ್ದು 8ಕ್ಕೆ 147 ರನ್ ಮಾತ್ರ

### 2016: ತವರಿನಂಗಳದಲ್ಲೇ ಪಲ್ಟಿ

ಆರ್‌ಸಿಬಿ 3ನೇ ಸಲ ಫೈನಲ್ ತಲುಪಿದ್ದು 2016ರಲ್ಲಿ. ಎದುರಾಳಿ ಸನ್‌ರೈಸರ್ ಹೈದರಾಬಾದ್. ಇದು ಬೆಂಗಳೂರಿನಲ್ಲೇ ನಡೆದ ಪಂದ್ಯ ವಾದ್ದರಿಂದ ಆರ್‌ಸಿಬಿ ಮೇಲೆ ಭಾರೀ ಭರವಸೆ ಇರಿಸಲಾಗಿತ್ತು. ಆದರೆ ಇಲ್ಲಿಯೂ ನಸೀಬು ಕೆಟ್ಟಿತ್ತು. ಗೇಲ್, ಎಬಿಡಿ, ಕೊಹ್ಲಿ ಅವರಂಥ ಘಟಾನುಘಟಿ ಬ್ಯಾಟರ್‌ಗಳನ್ನೂ ಹೊಂದಿಯೂ 8 ರನ್ ಸೋಲನ್ನು ಹೊತ್ತುಕೊಂಡಿತು. ಹೈದರಾಬಾದ್ 7ಕ್ಕೆ 208 ರನ್ ಗಳಿಸಿದರೆ, ಗೆಲುವಿನತ್ತ ಮುನ್ನುಗ್ಗುತ್ತಿದ್ದ ಆರ್‌ಸಿಬಿ ಅಂತಿಮವಾಗಿ 7ಕ್ಕೆ 200ರನ್ನಷ್ಟೇ ಗಳಿಸಲು ಶಕ್ತವಾಯಿತು.

ಆರ್‌ಸಿಬಿ ಮೇಲಿನ ಈ ಮೂರೂ ಪಂದ್ಯಗಳಲ್ಲಿ ರನ್ನರ್ ಅಪ್ ಆಗಿ ತೃಪ್ತಿಪಟ್ಟುಕೊಂಡಿತ್ತು. ಈಗ ತಂಡವು 4ನೇ ಬಾರಿ ಫೈನಲ್ ಪ್ರವೇಶಿಸಿದ್ದು, ಈ ಬಾರಿ ಆರ್‌ಸಿಬಿ ಮೊದಲ ಸಲ ಕಪ್ ಗೆಲ್ಲುವ ಭರವಸೆ ಹೊಂದಿದೆ.

### ಹೇಗಿದೆ ಮೋದಿ ಕ್ರೀಡಾಂಗಣ

ಮೋದಿ ಕ್ರೀಡಾಂಗಣದ ಬ್ಯಾಟಿಂಗ್ ಸ್ನೇಹಿ ಪಿಚ್‌ನಲ್ಲಿ ಭರಪೂರ ರನ್ ಗಳಿಕೆಯನ್ನು ಇತ್ತಂಡಗಳೂ ನಿರೀಕ್ಷಿಸಬಹುದು. ಆದರಲ್ಲೂ ಇಬ್ಬನಿಯ ಪ್ರಭಾವದಿಂದಾಗಿ ಎರಡನೇ ಅವಧಿಯಲ್ಲಿ ಬ್ಯಾಟಿಂಗ್ ಮಾಡುವವರಿಗೆ ಅನುಕೂಲ ಹೆಚ್ಚು. ಹೀಗಾಗಿ ಟಾಸ್ ಗೆದ್ದ ತಂಡವು ಇಲ್ಲಿ ಚೇಸಿಂಗ್ ಆಯ್ದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಈ ನಿಟ್ಟಿನಲ್ಲಿ ಟಾಸ್ ನಿರ್ಣಾಯಕವಾಗಲಿದೆ.

### ಮಳೆ ಸಾಧ್ಯತೆ

ಫೈನಲ್ ಪಂದ್ಯಕ್ಕೆ ಸಾಕ್ಷಿಯಾಗಲಿರುವ ಅಹಮದಾಬಾದ್‌ನಲ್ಲಿ ಸದ್ಯದ ಮಾಹಿತಿ ಪ್ರಕಾರ ಮಂಗಳವಾರ ಮಳೆಯ ಸಾಧ್ಯತೆ ಶೇ.62ರಷ್ಟಿದೆ. ಆದರೆ ಬೆಳಗ್ಗೆ ಅಥವಾ ಮಧ್ಯಾಹ್ನ ಮಳೆಯಾಗುವ ಸಾಧ್ಯತೆ ಹೆಚ್ಚಿದೆ. ರಾತ್ರಿ ವೇಳೆ ಮಳೆಯ ಸಾಧ್ಯತೆ ಶೇ.5ರಷ್ಟು ಎಂದು ಹವಾಮಾನ ವರದಿ ತಿಳಿಸಿದೆ.

### ರಾಜ್ಯಾದ್ಯಂತ ಪ್ರಾರ್ಥನೆ

4ನೇ ಬಾರಿಗೆ ಐಪಿಎಲ್ ಫೈನಲ್ ತಲುಪಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಈ ಬಾರಿ ಚೊಚ್ಚಲ ಟ್ರೋಫಿ ಮುಡಿಗೇರಿಸಿಕೊಳ್ಳಲಿ ಎಂದು ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಬಳ್ಳಾರಿ ಸೇರಿದಂತೆ ರಾಜ್ಯಾದ್ಯಂತ ಆರ್‌ಸಿಬಿ ಅಭಿಮಾನಿಗಳು ಹೋಮ, ಹವನ ನಡೆಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದ್ದಾರೆ.

## ಆರ್‌ಸಿಬಿಗೆ ಗಣ್ಯರಿಂದ ಶುಭಾಶಯಗಳ ಮಹಾಪೂರ

ಬೆಂಗಳೂರು, ಜೂ.2– ಮಂಗಳವಾರ ನಡೆಯಲಿರುವ ಐಪಿಎಲ್ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ಗೆಲುವಿಗೆ ಕೇಂದ್ರ ಸಚಿವ ಹೆಚ್‌ಡಿಕೆ, ಡಿಸಿಎಂ ಡಿಕೆಶಿ, ಸಂಗೀತ ನಿರ್ದೇಶಕ ಹಂಸಲೇಖ ಸೇರಿದಂತೆ ಹಲವು ಗಣ್ಯರು ಶುಭ ಹಾರೈಸಿದ್ದಾರೆ.

ಕುಮಾರಸ್ವಾಮಿಯವರು ಐಪಿಎಲ್ ಫೈನಲ್ ಪಂದ್ಯದ ಬಗ್ಗೆ ಮಾತಾಡಿ, ಅಭಿಮಾನಿಗಳಿಗೆ ಆರ್‌ಸಿಬಿ ಗೆಲ್ಲಬೇಕೆಂಬ ನಿರೀಕ್ಷೆ ಇದೆ. ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡಕ್ಕೆ ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ.

ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ನಮ್ಮ ಕನ್ನಡದ ತಂಡ ಈ ಬಾರಿ ಕಪ್ ಗೆಲ್ಲುತ್ತೆ. 'ಈ ಸಲ ಕಪ್ ನಮ್ದೆ' ಎಂದು ಜೋಶ್‌ನಿಂದ ಹೇಳಿಕೊಂಡಿದ್ದಾರೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ನಾನು ಕಿಕೆಟ್‌ನ ದೊಡ್ಡ ಅಭಿಮಾನಿ, ಈ ಬಾರಿ ಫೈನಲ್‌ನಲ್ಲಿ ಆರ್‌ಸಿಬಿ ಆಟಗಾರರಿಗೆ ದೇವರು ಶಕ್ತಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ಬಾರಿ ವಿರಾಟ್ ಕೊಹ್ಲಿ ಸೇರಿದಂತೆ ಎಲ್ಲರೂ ತುಂಬಾ ಚೆನ್ನಾಗಿ ಆಡಿದ್ದಾರೆ. ತಾಯಿ ಚಾಮುಂಡೇಶ್ವರಿಯಲ್ಲಿ ನಾನು ವಿಶೇಷ ಪ್ರಾರ್ಥನೆ ಮಾಡುತ್ತೇನೆ. 'ಈ ಸಲ ಕಪ್ ನಮ್ದೆ' ಎಂದಿದ್ದಾರೆ.

ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಹಲವಾರು ವರ್ಷಗಳ ನಂತರ ಆರ್‌ಸಿಬಿ ಫೈನಲ್‌ಗೆ ಬಂದಿದೆ. ಕಪ್ ಗೆಲ್ಲಲಿ ಎಂಬುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಆರ್‌ಸಿಬಿಗೆ ಶುಭವಾಗಲಿ ಎಂದು ಹಾರೈಸಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಸಹ ಆರ್‌ಸಿಬಿ ಗೆಲುವಿಗೆ ಶುಭ ಹಾರೈಸಿದ್ದಾರೆ. ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿ, ಆರ್‌ಸಿಬಿ ಈ ಬಾರಿ ಐಪಿಎಲ್ ಮ್ಯಾಚ್ ಗೆದ್ದೇ ಗೆಲ್ಲುತ್ತೆ. ಈ ಹಿಂದೆ ತಪ್ಪು ಮಾಡಿದ್ದೇವೆ. ಈಗ ತಪ್ಪು ಆಗೋದಿಲ್ಲ, ಈ ಸಲ ಕಪ್ ನಮ್ಮದೇ ಎಂದಿದ್ದಾರೆ.

# ಮಳೆಯ ಅವಾಂತರ ತಪ್ಪಿಸಲು ಮೈಸೂರು ನಗರ ಪಾಲಿಕೆ ಯೋಜಿತ ಮುನ್ನೆಚ್ಚರಿಕಾ ಕ್ರಮಗಳನ್ನೇ ಕೈಗೊಂಡಿಲ್ಲ


● ಸಾರ್ವಜನಿಕರ ಬೇಸರ; ಆತಂಕ ● ಮಳೆ ನೀರು ಕೆರೆಗೆ ಹರಿಸಲು ಸರ್ಕಾರಕ್ಕೆ ಇಚ್ಛಾಸಕ್ತಿಯೇ ಇಲ್ಲ



ಚರಂಡಿಯಲ್ಲಿ ಕಸಕಡ್ಡಿ ತುಂಬಿಕೊಂಡಿರುವುದು.



ಪೂರ್ಣಯ್ಯ ನಾಲೆಯಲ್ಲಿ ಕಾಂಕ್ರೀಟ್ ಕಾಲುವೆ ನಿರ್ಮಾಣ.



ಯುಜಿಡಿ ಪೈಪ್‌ಲೈನ್ ಹಾಕಿ ಮಣ್ಣು ಮುಚ್ಚಿದ್ದಾರೆ.

ಮೈಸೂರು, ಜೂ.2(ಎಸ್‌ಪಿಎನ್)– ನಗರದಲ್ಲಿ ಮಳೆ ನೀರಿನಿಂದ ಉಂಟಾಗುವ ಅವಾಂತರಗಳನ್ನು ನಿವಾರಿಸಲು ಮೈಸೂರು ಮಹಾನಗರ ಪಾಲಿಕೆ ಮುನ್ನೆಚ್ಚರಿಕೆ–ಮುಂಜಾಗ್ರತಾ ಕಾರ್ಯಸೂಚಿ ಹೊಂದಿಲ್ಲ ಎಂಬ ದೂರು ಸಾರ್ವಜನಿಕ ವಲಯದಿಂದ ಕೇಳಿಬರುತ್ತಿದೆ.

ಮಳೆಗಾಲದಲ್ಲಿ ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗಿ ಸೃಷ್ಟಿಸುವ ಅವಾಂತರಗಳಿಂದ ನೊಂದವರು ನಗರ ಪಾಲಿಕೆ ಕಂಟ್ರೋಲ್ ರೂಂಗೆ ಮಾಹಿತಿ ನೀಡುತ್ತಾರೆ. ನಂತರ ಅಭಯ ಸಿಬ್ಬಂದಿಗಳು ಆಗಮಿಸಿ ಈ ಸಮಸ್ಯೆಗೆ ಪರಿಹಾರ ಒದಗಿಸುವುದು ಮಾಮೂಲು. ಆದರೆ, ಮೊದಲೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ನಗರ ಪಾಲಿಕೆ ಅಧಿಕಾರಿಗಳು ವಿಫಲವಾಗಿದ್ದಾರೆ ಎಂಬ ದೂರು ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

**ಕಸಕಡ್ಡಿ ವಿಲೇವಾರಿಯಾಗಬೇಕು:** ನಗರದ ವಿವಿಧ ಬಡಾವಣೆಯ ಪ್ರಮುಖ ರಸ್ತೆಗಳ ಎರಡೂ ಬದಿ ಚರಂಡಿಗಳಲ್ಲಿ ನೀರು ಹರಿದು ಶೇಖರಣೆಯಾಗಿರುವ ಕಸಕಡ್ಡಿ ವಿಲೇವಾರಿ ಮಾಡಬೇಕೆಂಬ ಸಾಮಾನ್ಯ ಜ್ಞಾನ ನಗರಪಾಲಿಕೆ ಅಧಿಕಾರಿಗಳಿಗೆ ಇಲ್ಲ. ಇದರ ಬಗ್ಗೆ ತಿಳಿದಿದ್ದರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಉದಾಹರಣೆಗೆ ಹೈವೇ ವೃತ್ತದ (ನ್ಯೂ ಸಯ್ಯಾಜಿರಾವ್ ರಸ್ತೆ) ಸಮೀಪ ನಗರ ಬಸ್ ನಿಲ್ದಾಣದ ಬಳಿ ಧಾರಾಕಾರ ಮಳೆ ಸುರಿದಾಗ ಈ ನೀರು ಚರಂಡಿ ಮೂಲಕ ಸರಾಗವಾಗಿ ಹೋಗಲು ಸಾಧ್ಯವಾಗುತ್ತಿಲ್ಲ. ಈ ನೀರು ನಿಂತು ರಸ್ತೆಯೇ ಕೆರೆಯಂತಾಗುತ್ತಿದೆ ಈ ನೀರಿಗೆ ಯುಜಿಡಿ ನೀರಿಗೆ ಕಲುಷಿತ ನೀರು ಸೇರಿ ಸುತ್ತಮುತ್ತ ವಾಸಿಸುವ ನಾಗರಿಕರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ ಎನ್ನುತ್ತಾರೆ ಎಂಜಿಪಿ ಸದಸ್ಯ ಭಾನುಪ್ರಶಾಂತ್

**ಆಳುವ ಸರ್ಕಾರಕ್ಕೆ ಮನಸ್ಸಿಲ್ಲ:** 22 ಕಿ.ಮೀ ಉದ್ದದ ಪಾರಂಪರಿಕ ಪೂರ್ಣಯ್ಯ ನಾಲೆ ಉಳಿಸಿಕೊಂಡು, ಈ ನಾಲೆ ಮೂಲಕ ಕುಕ್ಕರಹಳ್ಳಿ ಕೆರೆಗೆ ಮಳೆನೀರು ಒದಗಿಸುವಂತೆ ಒತ್ತಾಯಿಸಿ ಕಳೆದ ಹಲವು ವರ್ಷಗಳಿಂದ ಎಂಜಿಪಿ ಸೇರಿದಂತೆ ಇತರೆ ಪರಿಸರ ಸಂಘಟನೆಗಳು ಹೋರಾಟ ಮಾಡುತ್ತಿದ್ದರೂ ರಾಜ್ಯ ಸರ್ಕಾರ, ಅಳಿದುಳಿದ ನಾಲೆ ಜಾಗ ಉಳಿಸಿಕೊಂಡು ಅಭಿವೃದ್ಧಿಪಡಿಸುವ ಮನಸ್ಸಿಲ್ಲ. ಈ ನಾಲಾ ಜಾಗದಲ್ಲಿ ಹಲವು ಸಂಘ–ಸಂಸ್ಥೆಗಳು ಸೇವೆ ಹೆಸರಿನಲ್ಲಿ ಒತ್ತುವರಿ ಮಾಡಿಕೊಂಡಿವೆ. ಸಮುದಾಯದ ಹೆಸರಿನಲ್ಲಿ ಸ್ಮಶಾನಕ್ಕೆ ನಾಲಾ ಜಾಗ ಅಕ್ರಮಿಸಿಕೊಂಡಿವೆ. ಇದರ ಸ್ಪಷ್ಟೀಕರಣ ಕೇಳಿದರೂ ಅಧಿಕಾರಿಗಳ ಬಳಿ ಮಾಹಿತಿ ಇಲ್ಲ. ಈ ಜಾಗದಲ್ಲಿ ನೀರು ನಿಲ್ಲದಂತೆ ಮಾಡಲು ಸಣ್ಣದೊಂದು ಕಾಂಕ್ರೀಟ್ ಕಾಲುವೆ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಿರುವುದು ಸೋಜಿಗದ ವಿಷಯ ಎನ್ನುತ್ತಾರೆ ಹಲವು ಎಂಜಿಪಿ ಸದಸ್ಯರು.

**ಅಧಿಕಾರಿಗಳಿಗೆ ಪರಿಸರ ಜಾಗೃತಿ ಇಲ್ಲ:** ನಗರದ ವಿವಿಧೆಡೆ ಅನಾವಶ್ಯಕವಾಗಿ ಮರಗಳನ್ನು ಕತ್ತರಿಸಲು ಅರಣ್ಯ ಇಲಾಖೆ ಅನುಮತಿ ನೀಡುತ್ತದೆ.ಈ ವಿಷಯ ನಗರ ಪಾಲಿಕೆ ಅಧಿಕಾರಿಗಳಿಗೆ ತಿಳಿದೇ ಇರುವುದಿಲ್ಲ. ಆದರೆ, ಕೆಲವು ಜಾಗದಲ್ಲಿ ಸಣ್ಣಪುಟ್ಟ ರೆಂಬೆಗಳನ್ನು ತೆಗೆಯುವಂತೆ ಸಾರ್ವಜನಿಕರು ಮನವಿ ಮಾಡಿದ್ದರೆ, ಇಡೀ ಮರಗಳನ್ನೇ ಬುಡಸಮೇತ ಕಡಿಯಲು ಅನುಮತಿ ನೀಡುತ್ತಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮರಗಳನ್ನು ಕಡಿಯದಂತೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಎಂಜಿಪಿ ಸದಸ್ಯ ಭಾನುಪ್ರಶಾಂತ್ 'ಮೈಸೂರು ಮಿತ್ರ'ನ ಬಳಿ ಬೇಸರ ವ್ಯಕ್ತಪಡಿಸಿದರಲ್ಲದೆ, ಯಾದವಗಿರಿಯಲ್ಲಿ ರಾಜಕಾಲುವೆ ಸಂಪೂರ್ಣ ಮುಚ್ಚಿ ಹೋಗಿದೆ. ಈ ಕಾಲುವೆಯಲ್ಲಿ ತುಂಬಿರುವ ಹೂಳೆತ್ತುವ ಗೋಜಿಗೆ ಪಾಲಿಕೆ ಮುಂದಾಗುತ್ತಿಲ್ಲ.

> ಯುಜಿಡಿ ಸಮಸ್ಯೆ, ಪ್ರಮುಖ ಬಡಾವಣೆಗಳ ರಾಜಕಾಲುವೆಗಳಲ್ಲಿ ಹೂಳೆತ್ತುವ ಕಾಮಗಾರಿ ಕಳೆದೊಂದು ತಿಂಗಳಿಂದ ನಡೆಯುತ್ತಿದೆ. ರೆವಿನ್ಯೂ ಬಡಾವಣೆಗಳಲ್ಲಿನ ಸಮಸ್ಯೆಗಳನ್ನು ಹೊರತುಪಡಿಸಿ, ಬಹುತೇಕ ನಗರ ಪಾಲಿಕೆ ವ್ಯಾಪ್ತಿಯ ಬಡಾವಣೆಗಳಲ್ಲಿ ಸಮಸ್ಯೆ ಬಗೆಹರಿದಿದೆ. ಅಂತೆಯೇ ಕೆ.ಆರ್.ವೃತ್ತ ಪಾದಚಾರಿಗಳಿಗೆ ಆಗುತ್ತಿರುವ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಮಾಡಬಹುದು. ಆದರೆ, ಈ ಸ್ಥಳದಲ್ಲಿ ಸಂಪೂರ್ಣವಾಗಿ ಫುಟ್‌ಪಾತ್ ವ್ಯಾಪಾರ ನಿಲ್ಲಿಸಲು ಸಾಧ್ಯವಿಲ್ಲ.
> – ಶೇಖ್ ತನ್ವೀರ್ ಆಸೀಫ್, ಆಯುಕ್ತರು, ಮೈಸೂರು ನಗರಪಾಲಿಕೆ

**ಪೈಪ್‌ಲೈನ್ ಹಾಕಿ ಮಣ್ಣು ಮುಚ್ಚಿದ್ದಾರೆ:** ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ನಗರಾದ್ಯಂತ ವಿವಿಧ ಬಡಾವಣೆ, ಪ್ರಮುಖ ರಸ್ತೆಗಳಲ್ಲಿ ಹೊಸ ಯುಜಿಡಿ ಪೈಪ್‌ಲೈನ್ ಇಲ್ಲವೇ ನೀರು ಪೂರೈಕೆ ಪೈಪ್ ಹಾಕಿ, ಮಣ್ಣು ಮುಚ್ಚಿ ತಿಂಗಳುಗಳೇ ಕಳೆದಿವೆ. ಮಳೆಗಾಲ ಆರಂಭವಾದರೂ ಆ ಕಾಮಗಾರಿ ನಡೆದ ಜಾಗದಲ್ಲಿ ಡಾಂಬರ್ ಹಾಕಿಲ್ಲ. ಉದಾಹರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಅವರು ಗೌರವಾಧ್ಯಕ್ಷರಾಗಿರುವ ನೃಪತುಂಗ ವಿದ್ಯಾಸಂಸ್ಥೆ ಮುಂಭಾಗದಲ್ಲಿ ಯುಜಿಪಿ ಪೈಪ್‌ಲೈನ್ ಕಾಮಗಾರಿ ನಡೆದು ತಿಂಗಳುಗಳೇ ಕಳೆದಿವೆ. ಆದರೂ ಆ ಜಾಗದಲ್ಲಿ ಡಾಂಬರ್ ಹಾಕಿಲ್ಲ. ಅಂತೆಯೇ ಸುಯೋಗ್ ಆಸ್ಪತ್ರೆ ಮುಂಭಾಗ ಸೇರಿದಂತೆ ರಾಮಕೃಷ್ಣನಗರ ವಿವಿಧ ಹಂತದಲ್ಲಿ ಹೊಸ ಯುಜಿಡಿ ಪೈಪ್‌ಲೈನ್ ಹಾಕಿದ್ದಾರೆ. ಈ ಕಾಮಗಾರಿ ಮುಗಿದು ವರ್ಷ ಕಳೆದರೂ ಕಾಮಗಾರಿ ನಡೆದ ಜಾಗದಲ್ಲಿ ಡಾಂಬರ್ ಹಾಕಿಲ್ಲ. ಈ ಭಾಗದಲ್ಲಿ ಮಳೆಗಾಲ ಸಮೀಪಿಸಿದಾಗ ಈ ಮಾರ್ಗದಲ್ಲಿ ಓಡಾಡುವ ದ್ವಿಚಕ್ರ ವಾಹನ ಸವಾರರ ಪಾಡು ಹೇಳತೀರದು ಎನ್ನುತ್ತಾರೆ ಸಾಮಾಜಿಕ ಹೋರಾಟಗಾರ ಎಂ.ಎಸ್.ಸತ್ಯಾನಂದ ವಿಟ್ಟು.

**ಪಾದಚಾರಿಗಳ ಗೋಳು:** ಕೆ.ಆರ್.ವೃತ್ತ ಸಾಂಸ್ಕೃತಿಕ ನಗರಿ ಮೈಸೂರು ಭಾಗದ ಜೀವನಾಡಿ, ಈ ವೃತ್ತದ ಮೂಲಕ ಮೈಸೂರು ಗ್ರಾಮಾಂತರ ಮತ್ತು ನಗರ ಬಸ್ ನಿಲ್ದಾಣ, ದೇವರಾಜ ಮಾರುಕಟ್ಟೆ, ಕೆ.ಆರ್.ಆಸ್ಪತ್ರೆ, ಸರ್ಕಾರಿ ಆಯುರ್ವೇದ ಕಾಲೇಜು, ಜೆಎಸ್‌ಎಸ್ ಆಸ್ಪತ್ರೆ, ಶಂಕರಮಠ, ಕಾಡಾ ಕಚೇರಿ, ಮರಿಮಲ್ಲಪ್ಪ, ಸದ್ವಿದ್ಯಾ, ಮಹಾರಾಣಿ, ಯುವರಾಜ ಕಾಲೇಜು ಸೇರಿದಂತೆ ಇತರೆ ವಿದ್ಯಾಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸುವ ವೃತ್ತ ಹಾಗೂ ಪ್ರಮುಖ ವಾಣಿಜ್ಯ ಚಟುವಟಿಕೆಗಳು ನಡೆಯುವ ಈ ಜಾಗದಲ್ಲಿ ಬೆಳಗ್ಗೆ 7ರಿಂದ ರಾತ್ರಿ 10ರವರೆಗೆ ಜನಜಂಗುಳಿ. ಪಾದಚಾರಿಗಳು ಈ ರಸ್ತೆಯಲ್ಲಿ ಓಡಾಡುವಾಗ ಫುಟ್‌ಪಾತ್ ವ್ಯಾಪಾರಿಗಳು, ಅಸಭ್ಯವಾಗಿ ಸನ್ನೆಮಾಡಿ ಅವಮಾನಿಸುವ ಪ್ರಸಂಗಗಳು ಜರುಗಿ ದೇವರಾಜ ಠಾಣೆಯಲ್ಲಿ ನಿತ್ಯ 1–2 ಎನ್‌ಸಿಆರ್ ದಾಖಲಾಗುತ್ತಿವೆ. ಈ ಜಾಗದಲ್ಲಿ ಪಾದಚಾರಿಗಳಿಗೆ ಆಗುತ್ತಿರುವ ತೊಂದರೆಗೆ ಪರೋಕ್ಷವಾಗಿ ನಗರ ಪಾಲಿಕೆ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳ ಮೌನವೂ ಕಾರಣವಾಗಿದೆ ಎನ್ನುತ್ತಾರೆ ಎಂಜಿಪಿ ಸದಸ್ಯರು.

## ವಾಯುವಿಹಾರದಿಂದ ಮನೆಗೆ ಮರಳುತ್ತಿದ್ದ ವೃದ್ಧೆಯ ಸರ ಕದ್ದ ಖದೀಮ

ಮೈಸೂರು, ಜೂ.2– ವಾಯು ವಿಹಾರ ಮುಗಿಸಿ ಮನೆಗೆ ತೆರಳುತ್ತಿದ್ದ ವೃದ್ಧೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ನಿವೇದಿತಾನಗರದಲ್ಲಿ ಹಾಡಹಗಲೇ ನಡೆದಿದೆ. ಘಟನೆಯಲ್ಲಿ ವೃದ್ಧೆಯ ಕುತ್ತಿಗೆಗೆ ಗಾಯವಾಗಿದೆ.



ನಿವೇದಿತಾನಗರ ನಿವಾಸಿ ಡಿ.ಎಸ್. ಗೌರಮ್ಮ(78) ಅವರ ಸುಮಾರು 4.57 ಲಕ್ಷ ರೂ. ಮೌಲ್ಯದ 52 ಗ್ರಾಂ ಮಾಂಗಲ್ಯ ಸರವನ್ನು ಖದೀಮನೊಬ್ಬ ಕಿತ್ತುಕೊಂಡು ಪರಾರಿಯಾಗಿದ್ದಾನೆ.

ಭಾನುವಾರ ಬೆಳಗ್ಗೆ 8.30ರ ಸಮಯದಲ್ಲಿ ನಿವೇದಿತಾನಗರದ ಒಂದನೇ ಕ್ರಾಸ್‌ನಲ್ಲಿ ವಾಕ್ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾಗ ಸ್ವಲ್ಪ ದೂರದಲ್ಲಿ ವ್ಯಕ್ತಿಯೊಬ್ಬ ನಿಂತಿದ್ದ. ನನ್ನ ಪಾಡಿಗೆ ಹೋಗುತ್ತಿದ್ದಾಗ ಆತ ಎದುರಿಗೆ ನಿಂತು, ಏಕಾಏಕಿ ಕುತ್ತಿಗೆಗೆ ಕೈಹಾಕಿ ಮಾಂಗಲ್ಯ ಸರ ಕಿತ್ತುಕೊಂಡ. ಇದರಿಂದ ಗಾಬರಿಗೊಂಡು ಕೂಗುವಷ್ಟರಲ್ಲಿ ಆತ ತಳ್ಳಿದ್ದರಿಂದ ನಾನು ಮುಗ್ಗರಿಸಿದೆ. ಅಷ್ಟರಲ್ಲಿ ಆತ ಓಡಿಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನದಲ್ಲಿ ಪರಾರಿಯಾದ. ಆತ ಸರ ಕಿತ್ತುಕೊಂಡಾಗ ನನ್ನ ಕುತ್ತಿಗೆಗೆ ಗಾಯವಾಯಿತು ಎಂದು ಗೌರಮ್ಮ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸರ ಕಿತ್ತುಕೊಂಡವನು ಸುಮಾರು 35 ವರ್ಷದವನಾಗಿದ್ದು, ಅರ್ಧ ತೋಳಿನ ಹೂವುಗಳ ಚಿತ್ರವಿರುವ ಶರ್ಟ್ ಹಾಗೂ ಕಪ್ಪು ಪ್ಯಾಂಟ್ ಧರಿಸಿದ್ದ ಎಂದು ಗೌರಮ್ಮ ಹೇಳಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಸರಗಳ್ಳನ ಬಂಧನಕ್ಕೆ ಬಲೆ ಬೀಸಿದ್ದಾರೆ. ಈ ನಿಟ್ಟಿನಲ್ಲಿ ಸುತ್ತಮುತ್ತಲ ಸಿಸಿಟಿವಿ ಕ್ಯಾಮರಾಗಳ ಫುಟೇಜ್ ಪರಿಶೀಲನೆ ನಡೆಸಿದ್ದಾರೆ.

ಕೆ.ಆರ್.ಮಿಲ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸುತ್ತಿರುವ

## ಪಾದಚಾರಿ ಮೇಲ್ಸೇತುವೆ ಕಾಮಗಾರಿ ಶೀಘ್ರವೇ ಪೂರ್ಣ

**ಕಾಮಗಾರಿ ಪರಿಶೀಲಿಸಿ ಸಂಸದ ಯದುವೀರ್ ಒಡೆಯರ್ ಹೇಳಿಕೆ**



ಮೈಸೂರು ಹೊರವಲಯದ ಕೆಆರ್ ಮಿಲ್ಸ್ ಕಾಲೋನಿ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸುತ್ತಿರುವ ಪಾದಚಾರಿ ಮೇಲ್ಸೇತುವೆ ಕಾಮಗಾರಿಯನ್ನು ಸೋಮವಾರ ಸಂಸದ ಯದುವೀರ್ ಒಡೆಯರ್ ಪರಿಶೀಲಿಸಿದರು.

ಮೈಸೂರು, ಜೂ.2(ಪಿಎಂ)– ಮೈಸೂರಿನ ಹೊರವಲಯದ ಕೆ.ಆರ್. ಮಿಲ್ಸ್ ಕಾಲೋನಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸುತ್ತಿರುವ ಪಾದಚಾರಿ ಮೇಲ್ಸೇತುವೆ ಕಾಮಗಾರಿ ಅತೀ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಸೋಮವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಸಂಸದರು, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಇಲ್ಲಿ ಸಾರ್ವಜನಿಕರು ರಾಷ್ಟ್ರೀಯ ಹೆದ್ದಾರಿಯನ್ನು ದಾಟುವುದು ಕಷ್ಟವಾಗುತ್ತಿತ್ತು. ಈ ಬಗ್ಗೆ ಜನರು ಕುಂದುಕೊರತೆ ಹೇಳಿಕೊಂಡಾಗ ಕೂಡಲೇ ಇದನ್ನು ನಿರ್ಮಿಸಲು ಕುರಿತು ಕ್ರಮ ಕೈಗೊಳ್ಳಲಾಯಿತು ಎಂದು ಹೇಳಿದರು.

ಕಾಮಗಾರಿ ತ್ವರಿತಗತಿಯಲ್ಲಿ ಸಾಗುತ್ತಿದ್ದು, ಅತೀ ಶೀಘ್ರದಲ್ಲೇ ಇದನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಎಲ್ಲಾ ರೀತಿಯ ಕೆಲಸಗಳನ್ನು ಮಾಡಲಾಗುವುದು. ಅಭಿವೃದ್ಧಿಯ ಜೊತೆಗೆ ಜನೋಪಯೋಗಿ ಕೆಲಸಗಳಿಗೂ ಆದ್ಯತೆ ನೀಡಲಾಗುವುದು ಎಂದು ಅವರು ತಿಳಿಸಿದರು.

## ಹುಟ್ಟುಹಬ್ಬ ಆಚರಣೆ



ಮೈಸೂರು ವಕೀಲರ ಸಂಘದ ಮಾಜಿ ಉಪಾಧ್ಯಕ್ಷರು ಹಾಗೂ ಹಿರಿಯ ವಕೀಲರಾದ ಪುಟ್ಟಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು. ಈ ವೇಳೆ ಕೆಪಿಸಿಸಿ ಸಂಯೋಜಕ ಹಾಗೂ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಎಡಿಜಿಪಿ ತಿಮ್ಮಯ್ಯ, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್, ವಕೀಲರಾದ ಎ.ಆರ್. ಕಾಂತರಾಜು, ವಿಷ್ಣುವರ್ಧನ್, ಕೆ. ಗಂಗಾಧರ್, ಚರಣ್ ರಾಜ್, ಆನಂದ್ ಇನ್ನಿತರರು ಹಾಜರಿದ್ದರು.

## ಡಾ.ರಾಜ್‌ಕುಮಾರ್ 97ನೇ ಜನ್ಮದಿನ; ಪಾರ್ವತಮ್ಮ ರಾಜ್‌ಕುಮಾರ್ 8ನೇ ವರ್ಷದ ಪುಣ್ಯಸ್ಮರಣೆ

'ವಜ್ರೇಶ್ವರಿಯ ಮುತ್ತು, ಕನ್ನಡಿಗರ ಸ್ವತ್ತು' ಸುಗಮ ಸಂಗೀತ ಕಾರ್ಯಕ್ರಮ

ಮೈಸೂರು, ಜೂ.2(ಎಂಕೆ)– ಮೈಸೂರು ಕಲಾಮಂದಿರದಲ್ಲಿ ಕರ್ನಾಟಕ ರತ್ನ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮದಿನ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರ 8ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ 'ವಜ್ರೇಶ್ವರಿಯ ಮುತ್ತು, ಕನ್ನಡಿಗರ ಸ್ವತ್ತು' ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.



ಡಾ.ರಾಜ್‌ಕುಮಾರ್ 97ನೇ ಜನ್ಮದಿನ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ 8ನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ 'ವಜ್ರೇಶ್ವರಿಯ ಮುತ್ತು, ಕನ್ನಡಿಗರ ಸ್ವತ್ತು' ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

ಡಾ.ರಾಜ್‌ಕುಮಾರ್ ಅಭಿನಯದ 30ಕ್ಕೂ ಹೆಚ್ಚು ಜನಪ್ರಿಯ ಗೀತೆಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದ ಗಾಯಕರು ನೆರೆದಿದ್ದ ಕನ್ನಡಾಭಿಮಾನಿಗಳಿಗೆ ಸಂಗೀತ ರಸದೌತಣ ನೀಡಿದರೆ, ಕೀಬೋರ್ಡ್‌ನಲ್ಲಿ ಅಜಯ್ ಮತ್ತು ಶರತ್, ರಿದಂ ಪ್ಯಾಡ್‌ನಲ್ಲಿ ವಿನ್ಸೆಂಟ್, ತಬಲದಲ್ಲಿ ರೋಷನ್, ಕೊಳಲಿನಲ್ಲಿ ಪುನೀತ್ ಉತ್ತಮ ಸಾಥ್ ನೀಡಿದರು. ಇದೇ ವೇಳೆ ಖ್ಯಾತ ಕ್ರೀಡಾಪಟು ಅಂಚೆ ಇಲಾಖೆಯ ಪೋಸ್ಟ್ ವುಮೆನ್ ಎಂ.ವೀಣಾ ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಸಮಾಜ ಸೇವಕ ಕೆ. ರಘುರಾಂ, ಬ್ರಾಹ್ಮಣ ಮಹಾಸಭಾ ನಿರ್ದೇಶಕ ಡಿ.ಟಿ.ಪ್ರಕಾಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಮ್ಮನಹಳ್ಳಿ ಪಪಂ ಕಂದಾಯ ನಿರೀಕ್ಷಕ ಮಂಜುನಾಥ್, ಡಾ.ರಾಜ್‌ಕುಮಾರ್ ಸಂಘದ ಮಹದೇವಣ್ಣ, ಟ್ರಸ್ಟಿನ ಗೌರವಾಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಗುಂಡ್ಲುಪೇಟೆ ಸೆಸ್ಕ್ ಇಂಜಿನಿಯರ್ ಮಯೂರ್, ಆಕಾಶವಾಣಿಯ ಮಂಜುನಾಥ್ ಮತ್ತಿತರರಿದ್ದರು.

## ವೀಡಿಯೋಗ್ರಾಫರ್ ಮಧುಸೂಧನ್‌ಗೆ ನುಡಿನಮನ

ಮೈಸೂರು, ಜೂ.2(ಜಿಎ)–ಇತ್ತೀಚೆಗೆ ನಿಧನರಾದ ಹಿರಿಯ ವೀಡಿಯೋ ಗ್ರಾಫರ್ ಮಧುಸೂದನ್‌ಗೆ ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ನುಡಿ ನಮನ ಸಲ್ಲಿಸಲಾಯಿತು.



ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಇತ್ತೀಚೆಗೆ ಪತ್ರ ಕರ್ತರ ಬಳಗದಲ್ಲಿ ಅಕಾಲಿಕ ಮರಣಗಳು ಸಂಭವಿಸುತ್ತಿದೆ. ಹಾಗೇ ಪ್ರತಿ ಸಾವು ನಮಗೆ ಪಾಠ ಕಲಿಸುತ್ತದೆ. ಪತ್ರಕರ್ತರಿಗೆ ಯಾರೂ ಬೇಕಾದರೂ ಸಹಾಯ ಮಾಡುತ್ತಾರೆ ಎಂಬ ಭ್ರಮೆ ಇದೆ. ಆದರೆ, ಸಂಕಷ್ಟದಲ್ಲಿ ಯಾರೂ ಸಹಾಯ ಮಾಡುವುದಿಲ್ಲ. ಆದ್ದರಿಂದ ಪತ್ರಕರ್ತರು ಆರೋಗ್ಯ ಮತ್ತು ಕುಟುಂಬದ ಬಗ್ಗೆ ಗಮನ ಹರಿಸಿ ಎಂದು ಸಲಹೆ ನೀಡಿದರು.

ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ರಾಜ್ಯ ಸರ್ಕಾರ ಸಾಕಷ್ಟು ಗ್ಯಾರಂಟಿಗಳನ್ನು ನೀಡಿದೆ. ಆದರೆ, ಪತ್ರಕರ್ತರಿಗೆ ಯಾವುದೇ ಗ್ಯಾರಂಟಿ ಇಲ್ಲ. ಸೇವಾ ಅವಧಿ ಗುರುತಿಸಿ ಸರ್ಕಾರದಿಂದ ಮಾಸಾಶನ ನೀಡುವಂತೆ ಯೋಜನೆ ರೂಪಿಸಬೇಕು. ಮಧುಸೂದನ್ ಕುಟುಂಬದೊಟ್ಟಿಗೆ ಎಲ್ಲರೂ ಕೈಜೋಡಿಸಬೇಕು ಎಂದರು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ನಟ ಜಯಪ್ರಕಾಶ್ (ಜೆಪಿ) ಮಾತನಾಡಿ, ಕಾರ್ಯನಿರತ ಪತ್ರಕರ್ತರಿಗೆ ರಾಜ್ಯ ಸರ್ಕಾರ ಪಿಂಚಣಿ ಯೋಜನೆ ರೂಪಿಸಬೇಕಿದೆ. ಸಂಘದ ವತಿಯಿಂದ ಹಣ ಸಂಗ್ರಹಿಸಿ, ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನೆರವಿಗೆ ನಿಲ್ಲಬೇಕಿದೆ. ತುರ್ತು ಸಂದರ್ಭದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಪತ್ರಕರ್ತರಿಗೆ ಯಾವುದೇ ರೇಷನ್ ಕಾರ್ಡ್, ಯಶಸ್ವಿನಿ ಕಾರ್ಡ್ ಕೇಳದೇ ತಕ್ಷಣ ಚಿಕಿತ್ಸೆ ನೀಡುವಂತೆ ರಾಜ್ಯ ಸರ್ಕಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್ ಗೌಡ, ಸಮಾಜ ಸೇವಕ ರಘುರಾಂ ವಾಜಪೇಯಿ, ವಿಶ್ವಕರ್ಮ ಸಮುದಾಯದ ಮುಖಂಡ ಮೊಗ್ಗಣ್ಣಚಾರ್, ಗೋಲ್ಡ್ ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಇಂಡಿಗೋ ವಿಮಾನ ಮತ್ತೆ ತುರ್ತು ಭೂ ಸ್ಪರ್ಶ



ನವದೆಹಲಿ, ಜೂ.2– ಇತ್ತೀಚಿನ ದಿನಗಳಲ್ಲಿ ಇಂಡಿಗೋ ವಿಮಾನಗಳು ವ್ಯಾಪಕ ಸುದ್ದಿಗೆ ಗ್ರಾಸವಾಗುತ್ತಿದ್ದು ಇದೀಗ ಹದ್ದು ಢಿಕ್ಕಿಯಿಂದಾಗಿ ಮತ್ತೊಂದು ವಿಮಾನ ತುರ್ತು ಭೂಸ್ಪರ್ಶ ಮಾಡಿರುವ ಘಟನೆ ನಡೆದಿದೆ.

ಈ ಹಿಂದೆ ಆಲಿಕಲ್ಲುಗಳ ಹೊಡೆತದಿಂದಾಗಿ ಇಂಡಿಗೋ ಸಂಸ್ಥೆಗೆ ಸೇರಿದ್ದ ವಿಮಾನ ತುರ್ತು ಭೂಸ್ಪರ್ಶ ಮಾಡಿತ್ತು ಇದರ ಬೆನ್ನಲ್ಲೇ ನಿನ್ನೆ ರಾಯ್‌ಪುರದಿಂದ ದೆಹಲಿಗೆ ಹೋಗುತ್ತಿದ್ದ ಇಂಡಿಗೋ ವಿಮಾನವು ಧೂಳಿನ ಬಿರುಗಾಳಿಯಿಂದಾಗಿ ತೀವ್ರ ಪ್ರಕ್ಷುಬ್ಧತೆಯನ್ನು ಎದುರಿಸಿ ಲ್ಯಾಂಡಿಂಗ್ ವಿಳಂಬವಾಗಿತ್ತು. ಇದೀಗ ಮತ್ತೊಂದು ಇಂಡಿಗೋ ವಿಮಾನ ಹದ್ದು ಢಿಕ್ಕಿಯಿಂದಾಗಿ ತುರ್ತು ಭೂಸ್ಪರ್ಶ ಮಾಡಿದೆ. ಸೋಮವಾರ ರಾಂಚಿಯ ಬಿರ್ಸಾ ಮುಂಡಾ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನಕ್ಕೆ ಹದ್ದು ಡಿಕ್ಕಿಯಾದ ಪರಿಣಾಮ ಸುಮಾರು 175 ಪ್ರಯಾಣಿಕರಿದ್ದ ವಿಮಾನ ತುರ್ತು ಭೂಸ್ಪರ್ಶ ಮಾಡಿದೆ.

ಈ ಘಟನೆಯಲ್ಲಿ ಏರ್‌ಬಸ್ 320 ವಿಮಾನವು ಹಾನಿಗೊಳಗಾಗಿದ್ದು, ಅದೃಷ್ಟವಶಾತ್ ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತರಾಗಿದ್ದಾರೆ ಎಂದು ವಿಮಾನಯಾನ ಸಂಸ್ಥೆ ಮಾಹಿತಿ ನೀಡಿದೆ. ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿರುವ ರಾಂಚಿಯ ಬಿರ್ಸಾ ಮುಂಡಾ ವಿಮಾನ ನಿಲ್ದಾಣದ ನಿರ್ದೇಶಕ ಆರ್ ಆರ್ ಮೌರ್ಯ, ರಾಂಚಿ ಬಳಿ ಇಂಡಿಗೋ ವಿಮಾನಕ್ಕೆ ಮಧ್ಯಾಹ್ನ 1.14ರಲ್ಲಿ ಹದ್ದು ಡಿಕ್ಕಿ ಹೊಡೆದಿದೆ. ಇಲ್ಲಿಂದ ಸುಮಾರು 10 ರಿಂದ 12 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ 3,000 ರಿಂದ 4,000 ಅಡಿ ಎತ್ತರದಲ್ಲಿ ಈ ಘಟನೆ ಸಂಭವಿಸಿದೆ. ಇಂಡಿಗೋ ವಿಮಾನವು ಪಾಟ್ನಾದಿಂದ ರಾಂಚಿಗೆ ಬರುತ್ತಿತ್ತು. ಪೈಲಟ್ ಇಲ್ಲಿ ತುರ್ತು ಲ್ಯಾಂಡಿಂಗ್ ಮಾಡಬೇಕಾಯಿತು. ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಅಧಿಕಾರಿಗಳು ವಿಮಾನಕ್ಕಾಗಿರುವ ಹಾನಿ ಕುರಿತು ತನಿಖೆ ನಡೆಸುತ್ತಿದ್ದು, ಎಂಜಿನಿಯರ್‌ಗಳು ಹಾನಿಯನ್ನು ನಿರ್ಣಯಿಸುತ್ತಿದ್ದಾರೆ ಎಂದು ಅವರು ಹೇಳಿದರು. ಇನ್ನು ಘಟನೆ ಕುರಿತಂತೆ ಇಂಡಿಗೋ ವಿಮಾನಯಾನದ ಸಂಸ್ಥೆ ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

# ದೇಶ – ವಿದೇಶ

## ಅಮೆರಿಕದಲ್ಲಿ ಪ್ಯಾಲೆಸ್ತೇನ್ ಪರ ಘೋಷಣೆ ಕೂಗಿ ಭಯೋತ್ಪಾದಕ ದಾಳಿ

**ಬೌಲ್ಡರ್:** ಪ್ಯಾಲೆಸ್ತೇನ್ ಪರ ಘೋಷಣೆ ಕೂಗುತ್ತ ವ್ಯಕ್ತಿಯೊಬ್ಬ ಕೊಲೊರಾಡೋದ ಬೌಲ್ಡರ್‌ನಲ್ಲಿರುವ ಹೊರಾಂಗಣ ಮಾಲ್‌ನಲ್ಲಿ ಭಯೋತ್ಪಾದಕ ದಾಳಿ ನಡೆಸಿದ್ದಾನೆ ಎಂದು ಎಫ್‌ಬಿಐ ತಿಳಿಸಿದ್ದು, ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ.



ಗಾಜಾದಲ್ಲಿರುವ ಇಸ್ರೇಲಿ ಒತ್ತೆಯಾಳುಗಳ ಕುರಿತು ಚರ್ಚಿಸಲು ಇಸ್ರೇಲ್ ಮೂಲದ ನಾಗರಿಕರು ಸಭೆ ಸೇರಿದ್ದ ವೇಳೆ ಈ ಘಟನೆ ನಡೆದಿದೆ. 45 ವರ್ಷದ ಮೊಹಮ್ಮದ್ ಸಬ್ರಿ ಸೋಲಿಮಾನ್ ಎಂಬ ವ್ಯಕ್ತಿ 'ಫ್ರೀ ಪ್ಯಾಲೆಸ್ತೇನ್' ಎಂದು ಕೂಗುತ್ತಾ ಪೆಟ್ರೋಲ್ ಬಾಂಬ್ ದಾಳಿ ನಡೆಸಿದ್ದು, ಆತನನ್ನು ವಶಕ್ಕೆ ಪಡೆಯಲಾಗಿದೆ

ಘಟನೆಯಲ್ಲಿ ಆರೋಪಿ ಸೋಲಿಮಾನ್ ಕೂಡ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಯಾವ ಸ್ವರೂಪದ ಗಾಯದಿಂದ ಆತ ಬಳಲುತ್ತಿದ್ದಾನೆ ಎಂಬುದನ್ನು ತಿಳಿಸಿಲ್ಲ. ಬೌಲ್ಡರ್ ನಗರದ ಮಧ್ಯಭಾಗದಲ್ಲಿರುವ ಸ್ಟ್ರೀಟ್ ಪೆಡಸ್ಟ್ರೀಯನ್ ಮಾಲ್‌ನಲ್ಲಿ ಈ ದಾಳಿ ನಡೆದಿದೆ. ವಾಷಿಂಗ್ಟನ್‌ನಲ್ಲಿ ಇಬ್ಬರು ಇಸ್ರೇಲಿ ರಾಯಭಾರ ಕಚೇರಿ ಸಿಬ್ಬಂದಿಯ ಮೇಲೆ ದಾಳಿ ನಡೆಸಿದ ಎರಡು ವಾರಗಳ ಬಳಿಕ ಈ ಘಟನೆ ವರದಿಯಾಗಿದೆ. ಈ ದಾಳಿಯಲ್ಲಿ ಶಿಕಾಗೋ ವ್ಯಕ್ತಿ ಪಾಲೆಸ್ತೇನಿಗಾಗಿ, ಗಾಜಾಗಾಗಿ ಈ ಕೃತ್ಯ ಮಾಡಿದೆ ಎಂದು ಕೂಗುತ್ತಿರುವುದು ಕೇಳಿ ಬಂದಿದೆ.

## ಚಾಂಪಿಯನ್ಸ್ ಲೀಗ್ ಗೆಲುವಿನ ಬೆನ್ನಲ್ಲೇ ಫ್ರಾನ್ಸ್‌ನಲ್ಲಿ ಭುಗಿಲೆದ್ದ ಹಿಂಸಾಚಾರ

**ಪ್ಯಾರಿಸ್:** ಪ್ಯಾರಿಸ್ ಸೇಂಟ್–ಜರ್ಮೈನ್‌ನ ಐತಿಹಾಸಿಕ ಚಾಂಪಿಯನ್ಸ್ ಲೀಗ್ ಗೆಲುವಿನ ನಂತರ ಫ್ರಾನ್ಸ್‌ನಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ಇಬ್ಬರು ಸಾವನ್ನಪ್ಪಿ, ನೂರಾರು ಜನರು ಗಾಯಗೊಂಡಿದ್ದಾರೆ.



ಪ್ಯಾರಿಸ್ ಸೇಂಟ್–ಜರ್ಮೈನ್ (ಪಿಎಸ್‌ಜಿ)ಮತ್ತು ಇಂಟರ್ ಮಿಲನ್ ನಡುವಿನ ಚಾಂಪಿಯನ್ಸ್ ಲೀಗ್ ಫೈನಲ್ ಪಂದ್ಯ ಜರ್ಮನಿಯ ಮ್ಯೂನಿಚ್‌ನಲ್ಲಿ ನಡೆಯಿತು. ಈ ಪಂದ್ಯದಲ್ಲಿ ಪಿಎಸ್‌ಜಿ ತಂಡ 5–0 ಅಂತರದಿಂದ ಗೆದ್ದಿತು. ಇದು ಇದುವರೆಗಿನ ಅತಿದೊಡ್ಡ ಗೆಲುವು.

ಫ್ರಾನ್ಸ್‌ನ ಪ್ಯಾರಿಸ್‌ನ ಬೀದಿಗಳಲ್ಲಿ ಜನರು ಸಂಭ್ರಮಾಚರಣೆ ಮಾಡಿದರು. ನಂತರ ಹಿಂಸಾಚಾರ ಇದ್ದಕ್ಕಿದ್ದಂತೆ ಭುಗಿಲೆದ್ದಿತು. ಆ ಸಮಯದಲ್ಲಿ ಡ್ಯಾಕ್ಸ್ ನಗರದಲ್ಲಿ 17 ವರ್ಷದ ಬಾಲಕನನ್ನು ಇರಿದು ಕೊಲ್ಲಲಾಗಿದೆ ಎಂದು ರಾಷ್ಟ್ರೀಯ ಪೊಲೀಸ್ ಪಡೆ ತಿಳಿಸಿದೆ. ಅದೇ ರೀತಿ ಪ್ಯಾರಿಸ್‌ನಲ್ಲಿ ಆಚರಣೆಯ ಸಮಯದಲ್ಲಿ ಒಂದು ಕಾರು ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದು ಸ್ಕೂಟರ್ ಸವಾರಿ ಮಾಡುತ್ತಿದ್ದ ವ್ಯಕ್ತಿ ಸಾವನ್ನಪ್ಪಿದ್ದಾನೆ. ಹಿಂಸಾಚಾರದಲ್ಲಿ ಇಲ್ಲಿಯವರೆಗೂ 221 ಜನರು ಗಾಯಗೊಂಡಿದ್ದು, 264 ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ. 692 ಬೆಂಕಿ ಹಚ್ಚುವ ದಾಳಿಗಳು ನಡೆದಿವೆ. 560 ಜನರನ್ನು ಬಂಧಿಸಲಾಗಿದೆ. ಸಂಘರ್ಷದಲ್ಲಿ ಸಿಲುಕಿದ್ದ ಪೊಲೀಸ್ ಅಧಿಕಾರಿಯೊಬ್ಬರು ಪ್ರಜ್ಞಾಹೀನರಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಉಕ್ರೇನ್‌ನಿಂದ ರಷ್ಯಾದಲ್ಲಿ 40 ವಿಮಾನಗಳ ಧ್ವಂಸ

**ಕೈವ್:** ಉಕ್ರೇನ್‌ನ ಡ್ರೋನ್ ದಾಳಿಯು ರಷ್ಯಾದ ಭೂಪ್ರದೇಶದ ಆಳದಲ್ಲಿ 40 ಕ್ಕೂ ಹೆಚ್ಚು ವಿಮಾನಗಳನ್ನು ನಾಶಪಡಿಸಿದೆ ಎಂದು ಉಕ್ರೇನ್‌ನ ಭದ್ರತಾ ಸೇವೆ ತಿಳಿಸಿದೆ ಕಾರ್ಯಾಚರಣೆಯ ವಿವರಗಳನ್ನು ಬಹಿರಂಗಪಡಿಸಲು ಅನಾಮಧೇಯತೆಯ ಷರತ್ತಿನ ಮೇಲೆ ಅಸೋಸಿಯೇಟೆಡ್ ಪ್ರೆಸ್‌ನೊಂದಿಗೆ ಮಾತನಾಡಿದ ಮಿಲಿಟರಿ ಅಧಿಕಾರಿಯೊಬ್ಬರು, ದೂರಗಾಮಿ ದಾಳಿಯನ್ನು ಕಾರ್ಯಗತಗೊಳಿಸಲು ಒಂದೂವರೆ ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಳ್ಳ ಲಾಯಿತು. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ಇದನ್ನು ನಡೆಸಲಾಯಿತು ಎಂದರು.

ಸ್ಥಳೀಯ ಎಫ್‌ಎಸ್‌ಬಿ ಪ್ರಧಾನ ಕಚೇರಿಯ ಪಕ್ಕದಲ್ಲಿರುವ ಕಚೇರಿಯಿಂದ ಕಾರ್ಯಾಚರಣೆಯನ್ನು ಕಾರ್ಯಗತಗೊಳಿಸಲಾಗಿತ್ತು. ಕಾರ್ಯಾಚರಣೆಯಲ್ಲಿ 117 ಡ್ರೋನ್‌ಗಳನ್ನು ಬಳಸಲಾಗಿದೆ ಎಂದು ಝೆಲೆನ್ಸ್ಕಿ ಹೇಳಿದರು. ಎಫ್‌ಎಸ್‌ಬಿ ರಷ್ಯಾದ ಗುಪ್ತಚರ ಮತ್ತು ಭದ್ರತಾ ಸೇವೆಯಾಗಿದೆ. ರಷ್ಯಾದ ಮಾಧ್ಯಮಗಳು ಹಂಚಿಕೊಂಡ ದೃಶ್ಯಗಳಲ್ಲಿ ಡ್ರೋನ್‌ಗಳು ಕಂಟೇನರ್‌ಗಳ ಒಳಗಿನಿಂದ ಏರುತ್ತಿರುವುದನ್ನು ತೋರಿಸುತ್ತಿವೆ. ಇತರ ಫಲಕಗಳು ರಸ್ತೆಯಲ್ಲಿ ಬಿದ್ದಿವೆ. ಡ್ರೋನ್‌ಗಳನ್ನು ನಿಲ್ಲಿಸುವ ಪ್ರಯತ್ನದಲ್ಲಿ ಹಲವರು ಟ್ರಕ್ ಮೇಲೆ ಹತ್ತುತ್ತಿರುವುದನ್ನು ತೋರಿಸುವ ಕ್ಲಿಪ್ಪಿಂಗ್ ಓಡಾಡುತ್ತಿದೆ.

## ಜಮ್ಮು ರೈಲು ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಕರೆ

**ಜಮ್ಮು:** ಜಮ್ಮು ರೈಲು ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ ಕರೆ ಬಂದಿದೆ. ರೈಲ್ವೆ ಕಂಟ್ರೋಲ್ ರೂಂಗೆ ಕರೆ ಮಾಡಿರುವ ದುಷ್ಕರ್ಮಿಗಳು, ರೈಲು ನಿಲ್ದಾಣ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದಾರೆ.



ಭಾನುವಾರ ಸಂಜೆ ರೈಲ್ವೆ ಕಂಟ್ರೋಲ್ ರೂಂಗೆ ಅಪರಿಚಿತ ವ್ಯಕ್ತಿಗಳು ಬೆದರಿಕೆ ಕರೆ ಮಾಡಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೂಡಲೇ ರೈಲ್ವೆ ಪೊಲೀಸರಿಗೆ ಮಾಹಿತಿ ನೀಡಿದ ಅಧಿಕಾರಿಗಳು ಬಾಂಬ್ ನಿಷ್ಕ್ರಿಯ ತಂಡ, ಶ್ವಾನ ದಳದೊಂದಿದೆ ತೀವ್ರ ತಪಾಸಣೆ ನಡೆಸಿದರು. ಆದರೆ, ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಲಿಲ್ಲ ಎಂದು ಹೇಳಿದ್ದಾರೆ.

ಬೆದರಿಕೆ ಕರೆ ಹಿನ್ನೆಲೆಯಲ್ಲಿ ಭಾನುವಾರ ಮಧ್ಯರಾತ್ರಿಯಿಂದ ಇಂದು ಬೆಳಗ್ಗಿನವರೆಗೂ ಶೋಧ ಕಾರ್ಯಾಚರಣೆ ನಡೆಯಿತು. ಹಿರಿಯ ಪೊಲೀಸ್ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಲಾದ ಶೋಧ ಕಾರ್ಯಾಚರಣೆಯಲ್ಲಿ ಸ್ನಿಫರ್ ಡಾಗ್ಸ್ ಮತ್ತು ಮೆಟಲ್ ಡಿಟೆಕ್ಟರ್‌ಗಳನ್ನು ಸಹ ಬಳಸಲಾಯಿತು. ಯಾವುದೇ ವಸ್ತುಗಳು ಪತ್ತೆಯಾಗದ ಕಾರಣ ಇದೊಂದು ಹುಸಿ ಬಾಂಬ್ ಬೆದರಿಕೆ ಕರೆ ಎಂಬ ನಿರ್ಧಾರಕ್ಕೆ ಬರಲಾಯಿತು. ಇದೀಗ ಮುನ್ನೆಚ್ಚರಿಕಾ ಕ್ರಮವಾಗಿ ರೈಲ್ವೆ ನಿಲ್ದಾಣದಲ್ಲಿ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲಾಗಿದ್ದು, ಬೆದರಿಕೆ ಕರೆ ಮಾಡಿದ ವ್ಯಕ್ತಿಗಳಿಗಾಗಿ ಹುಡುಕಾಟ ಆರಂಭವಾಗಿದೆ ಎಂದು ತಿಳಿಸಿದ್ದಾರೆ.

## ಅಣ್ಣಾ ವಿವಿಯಲ್ಲಿ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿಗೆ ಜೀವಾವಧಿ ಶಿಕ್ಷೆ

**ಚೆನ್ನೈ:** ಅಣ್ಣಾ ವಿಶ್ವವಿದ್ಯಾಲಯದಲ್ಲಿ ನಡೆದ ಹೈಪ್ರೊಫೈಲ್ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಿರಿಯಾನಿ ಮಾರಾಟಗಾರ ಜ್ಞಾನಶೇಖರನ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಕಳೆದ ಡಿಸೆಂಬರ್‌ನಲ್ಲಿ 19 ವರ್ಷದ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಆತನಿಗೆ 90,000 ರೂ. ದಂಡ ವಿಧಿಸಲಾಗಿದೆ ಎಂದು ಚೆನ್ನೈನ ಮಹಿಳಾ ನ್ಯಾಯಾಲಯ ತಿಳಿಸಿದೆ.



ಅಪರಾಧಿ ಕನಿಷ್ಠ 30 ವರ್ಷಗಳ ಕಾಲ ಜೈಲಿನಲ್ಲಿರಬೇಕಾಗುತ್ತದೆ ಎಂದು ನ್ಯಾಯಾಧೀಶರಾದ ಎಂ. ರಾಜಲಕ್ಷ್ಮಿ ಹೇಳಿದರು. ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಬೆದರಿಕೆ ಮತ್ತು ಅಪಹರಣ ಸೇರಿದಂತೆ ಎಲ್ಲಾ 11 ಆರೋಪಗಳಲ್ಲಿ ಜ್ಞಾನಶೇಖರನ್ ತಪ್ಪಿತಸ್ಥನೆಂದು ನ್ಯಾಯಾಧೀಶರು ಕಳೆದ ವಾರ ಘೋಷಿಸಿದರು. ಪ್ರಕರಣದಲ್ಲಿ ಕನಿಷ್ಠ 29 ಸಾಕ್ಷಿಗಳು ಸಾಕ್ಷ್ಯ ನುಡಿದರು ಮತ್ತು ಪೊಲೀಸರು 100 ಪುಟಗಳ ಆರೋಪಪಟ್ಟಿ ಸಲ್ಲಿಸಿದರು.

ಡಿ.23 ರಂದು, ಜ್ಞಾನಶೇಖರನ್ ವಿಶ್ವವಿದ್ಯಾಲಯದ ಆವರಣಕ್ಕೆ ಪ್ರವೇಶಿಸಿ ಹದಿಹರೆಯದವಳ ಸ್ನೇಹಿತನ ಮೇಲೆ ಹಲ್ಲೆ ನಡೆಸಿ, ನಂತರ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಆಕೆಯನ್ನು ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ಅವನು ಈ ಕೃತ್ಯವನ್ನು ಚಿತ್ರೀಕರಿಸಿದ್ದ. ಅದೇ ದಿನ ಅವನನ್ನು ಬಂಧಿಸಲಾಗಿತ್ತು.

ಮೈಸೂರು ಮಿತ್ರ ಮಂಗಳವಾರ 3 ಜೂನ್ 2025

# ರಸ್ತೆ ಇಲ್ಲ, ವಿದ್ಯುತ್ ಇಲ್ಲ, ಸೇತುವೆ ಇಲ್ಲ ತೆರಾಲು ಗ್ರಾಮಸ್ಥರ ಬೇಡಿಕೆಗೆ ಸ್ಪಂದನೆ ಇಲ್ಲ

ಗೋಣಿಕೊಪ್ಪಲು, ಜೂ.2- ದಕ್ಷಿಣ ಕೊಡಗಿನ ಗಡಿಗ್ರಾಮ ಬಿರುನಾಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವಷ್ಟು ಸಮಸ್ಯೆಗಳಿಗೆ ಪರಿಹಾರ ಕಾಣದೆ ಜನರ ಅಸಮಾಧಾನಕ್ಕೆ ಆಸ್ಪದವಾಗಿದೆ.

ಬಿರುನಾಣಿ ಗ್ರಾಪಂ ವ್ಯಾಪ್ತಿಗೆ ಬಾಡಗರ ಕೇರಿ, ಪೊರಾಡು, ಪರಕಟಗೇರಿ, ಬಿರುನಾಣಿ ಹಾಗೂ ತೆರಾಲು ಗ್ರಾಮ ಒಳಪಡುತ್ತದೆ. ತೆರಾಲು ಗ್ರಾಮ ಸಮೀಪವೇ ಕಕ್ಕಟ್ಟು ಕೊಂಗಣ ಹೊಳೆ ಹರಿಯುತ್ತದೆ. ಬ್ರಹ್ಮಗಿರಿ ವನ್ಯಜೀವಿ ವಲಯದ ಗಡಿಯಲ್ಲಿಯೇ ಈ ಗ್ರಾಮವಿದ್ದು ಕಾಡಾನೆ, ಹುಲಿ ಉಪಟಳವೂ ನಿರಂತರ. ಈ ಗ್ರಾಮಗಳು ಪ್ರಗತಿ ಕಾಣದೆ ಗ್ರಾಮಸ್ಥರ ಗೋಳು ಅರಣ್ಯ ರೋಧನವಾಗಿದೆ. ಉತ್ತಮ ರಸ್ತೆ ಇಲ್ಲ, ಸಮರ್ಪಕ ವಿದ್ಯುತ್ ಸರಬರಾಜು ಇಲ್ಲ, ಗ್ರಾಮಕ್ಕೆ ಅಬ್ಬಿಮೂಲೆ, ಚೋರಂಗೆ ಮೊಟ್ಟೆ, ಅನ್ಯೋಟ್, ಬೊಮ್ಮಂಜಿ ಹಾಗೂ ಹಾಕಮನೆ ಎಂಬ ಕಾಲೋನಿಗಳಿದ್ದು, ಅಲ್ಲಿನ ಗ್ರಾಮಸ್ಥರು ಮೈಸೂರು ಮಿತ್ರನೊಂದಿಗೆ ತಮ್ಮ ಸಂಕಷ್ಟ ತೋಡಿಕೊಂಡಿದ್ದಾರೆ.

ಕೆಜಿ.ಬೋಪಯ್ಯ ಶಾಸಕರಾಗಿದ್ದಾಗ ಮಳೆ ಹಾನಿ ಪರಿಹಾರದಿಂದ ತೆರಾಲು- ಬೀರುಗ ಸಂಪರ್ಕ ರಸ್ತೆಗೆ ರೂ.10 ಲಕ್ಷ ಬಿಡುಗಡೆ ಮಾಡಿದ್ದರು. ಅದರಲ್ಲಿ ಕೇವಲ 300


ವಾಹನದಲ್ಲೂ ಹೋಗಲಾಗದ ತೆರಾಲು- ಬೀರುಗ ಸಂಪರ್ಕ ರಸ್ತೆ.

ಮೀಟರ್ ರಸ್ತೆ ಕಾಮಗಾರಿ ನಡೆದಿದ್ದು ಬಿಟ್ಟರೆ ಮತ್ತೆ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ. ಕಳಪೆ ಕಾಮಗಾರಿಯಿಂದಾಗಿ ಆ ರಸ್ತೆಯೂ ಕಿತ್ತು ಬಂದಿರುವುದಾಗಿ ಗ್ರಾಮಸ್ಥರು ಆರೋಪಿಸಿದ್ದಾರೆ.

5 ವರ್ಷದ ಹಿಂದೆ ತೆರಾಲು- ಬೀರುಗ ಸಂಪರ್ಕ ಸೇತುವೆ ಮತ್ತು 8 ಕಿ.ಮೀ ರಸ್ತೆಗೆ ಗ್ರಾಮ ಸಡಕ್ ಯೋಜನೆಯಲ್ಲಿ 8 ಕೋಟಿ ಅನುದಾನ ಬಿಡುಗಡೆಯಾಗಿತ್ತು. ಆದರೆ ಸ್ಥಳೀಯ ತೋಟ ಮಾಲೀಕರು ರಸ್ತೆಗೆ ಜಾಗ ಬಿಟ್ಟುಕೊಡದೆ, ಕೆಲ ಪರಿಸರವಾದಿಗಳೊಂದಿಗೆ ಕೈಜೋಡಿಸಿ ಕೇಂದ್ರದ ಹಸಿರು ನ್ಯಾಯ ಮಂಡಲಿಗೆ ತಪ್ಪು ಸಂದೇಶ ರವಾನಿಸಿದ ಹಿನ್ನೆಲೆ ಉದ್ದೇಶಿತ ಗ್ರಾಮ ಸಡಕ್ ರಸ್ತೆ ಅನುದಾನ ವಾಪಾಸ್ಸಾಗಿರುವುದಾಗಿ ಮಾಜಿ ಯೋಧ, ಹಾಗೂ ಗ್ರಾ.ಪಂ.ಸದಸ್ಯ ಬೊಟ್ಟಂಗಡ ಗಿರೀಶ್ ಪೆಮ್ಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ. ಶಾಸಕ ಪೊನ್ನಣ್ಣ ಖುದ್ದು ಭೇಟಿ ನೀಡಿದ್ದಲ್ಲಿ ರಸ್ತೆ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.

**ವಿದ್ಯುತ್ ಕಂಟಕ:** ಇತ್ತೀಚೆಗೆ ಮಳೆ-ಗಾಳಿಗೆ ಭಾರೀ ಗಾತ್ರದ ಮರ ವಿದ್ಯುತ್ ತಂತಿಯ ಮೇಲೆ ಹಲವು ಕಡೆ ಉರುಳಿ ಬಿದ್ದಿದ್ದು ಸಂಪರ್ಕ ಕಡಿತಗೊಂಡಿದೆ ಸುಮಾರು 600ಕ್ಕೂ ಹೆಚ್ಚು ಜನಸಂಖ್ಯೆ ಇರುವ ತೆರಾಲು ಗ್ರಾಮದಲ್ಲಿ ಜೇನು ಕುರುಬರ ಕಾಲೋನಿ, ಪರಿಶಿಷ್ಟ ಜಾತಿ ಜನಾಂಗದ ಕಾಲೋನಿಯೂ ಇದ್ದು ಶ್ರೀಮಂಗಲ ವಿದ್ಯುತ್ ಇಲಾಖೆ ಉಪಕೇಂದ್ರದ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ತುಂಡಾಗಿ ಬಿದ್ದಿರುವ 11 ಕೆ.ವಿ.ವಿದ್ಯುತ್ ಲೇನ್ ದುರಸ್ತಿ ಕಾರ್ಯ ಇನ್ನೂ ನಡೆದಿಲ್ಲ ಈ ಕೆಲಸಕ್ಕೆ ಇಬ್ಬರು ಕಾರ್ಮಿಕರನ್ನು ನಿಯೋಜಿಸಿದ್ದರೂ ಓರ್ವ ಬೆಳಿಗ್ಗೆಯಿಂದಲೇ ಮದ್ಯಪಾನ ಮಾಡಿದ್ದರೆ, ಮತ್ತೋರ್ವನಿಂದ ಸೂಕ್ತ ಸ್ಪಂದನೆ ಇಲ್ಲ. ಸಂಬಂಧಿಸಿದ ಶ್ರೀಮಂಗಲ ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರಲ್ಲಿ ದೂರು ನೀಡಿದಾಗ್ಯೂ ಅಸಹಾಯಕತೆ ವ್ಯಕ್ತಪಡಿಸುತ್ತಾರೆ ಎನ್ನಲಾಗಿದೆ.

ಇದೇ ಸಂದರ್ಭ ಗ್ರಾಮಸ್ಥರಾದ ದಿಲೀಪ್, ರಮೇಶ್, ನವೀನ್, ಚೈತ್ರಾ, ಮೋಟಯ್ಯ, ತಿಲಕ, ನಂದ ಮುಂತಾದವರು ಜನಪ್ರತಿನಿಧಿಗಳು ಇಲ್ಲಿನ ಸಮಸ್ಯೆಗೆ ಕೂಡಲೇ ಸ್ಪಂದಿಸಬೇಕು ಹಾಗೂ ಶಾಸಕರು ಮತ್ತು ಅಧಿಕಾರಿಗಳನ್ನು ಕರೆತರುವ ಕೆಲಸ ಮಾಡಬೇಕೆಂದು ಒತ್ತಾಯಿಸಿದ್ದಾರೆ.

# ನೌಕಾಪಡೆಯ ಸಬ್ ಲೆಫ್ಟಿನೆಂಟ್ ಆಗಿ ಕಾಡ್ಯಮಾಡ ರಿಯಾ ಅಚ್ಚಯ್ಯ

ಪೊನ್ನಂಪೇಟೆ, ಜೂ.2-ಭಾರತೀಯ ನೌಕಾಪಡೆಯ ಸಬ್ ಲೆಫ್ಟಿನೆಂಟ್ ಆಗಿ ಕೊಡಗಿನ ಕಾಡ್ಯಮಾಡ ರಿಯಾ ಅಚ್ಚಯ್ಯ ನಿಯೋಜನೆಗೊಂಡಿದ್ದಾರೆ. ಮೇ ತಿಂಗಳಾಂತ್ಯದಲ್ಲಿ ಭಾರತೀಯ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಯಾಗಿರುವ ಅವರು, ಇದೇ 14 ರಂದು ಐಎನ್ಎಸ್ ಸುಜಾತಾದಲ್ಲಿ ತಮ್ಮ ಆನ್‌ಬೋರ್ಡ್ ತರಬೇತಿಗಾಗಿ ಕೇರಳದ ಕೊಚ್ಚಿಯಲ್ಲಿ ವರದಿ ಮಾಡಿಕೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ.

ಮೈಸೂರು ವಿಜಯನಗರದ ವಿದ್ಯಾವರ್ಧಕ ಕಾಲೇಜ್ ಆಫ್ ಎಂಜಿನಿಯರಿಂಗ್‌ನಿಂದ ಮಾಹಿತಿ ವಿಜ್ಞಾನದಲ್ಲಿ ಎಂಜಿನಿಯರಿಂಗ್‌ನ್ನು ಡಿಸ್ಟಿಂಕ್ಷನ್‌ನಲ್ಲಿ ಪೂರ್ಣಗೊಳಿಸಿದ ರಿಯಾ ಅಚ್ಚಯ್ಯ, ಚಿಕ್ಕಂದಿನಿಂದಲೇ ರಕ್ಷಣಾ ಪಡೆಗೆ ಸೇರ್ಪಡೆಯಾಗಬೇಕೆಂಬ ಆಸಕ್ತಿ ಹೊಂದಿದ್ದರು. ತಮ್ಮ ನಿರಂತರ ಪರಿಶ್ರಮದ ಮೂಲಕ ಭಾರತೀಯ ನೌಕಾಪಡೆಗೆ ಇದೀಗ ಆಯ್ಕೆಯಾಗಿದ್ದಾರೆ. ರಿಯಾ ಅಚ್ಚಯ್ಯ ಅವರು ಮೈಸೂರಿನ ವಿಜಯನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ಹಳೆಯ ವಿದ್ಯಾರ್ಥಿನಿಯಾಗಿದ್ದು, ಹಿಂದೆ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕಾಗಿ 2 ಕಂಚು ಗೆದ್ದ ಅಂತರ ರಾಷ್ಟ್ರೀಯ ಸ್ಕೇಟರ್ ಕೂಡ ಆಗಿದ್ದಾರೆ.ಮೂಲತಃ ಗೋಣಿಕೊಪ್ಪಲಿನ ಅತ್ತೂರಿನವರಾದ, ಇವರು ಇದೀಗ ಮೈಸೂರಿನಲ್ಲಿ ನೆಲೆಸಿರುವ ಕಾಡ್ಯಮಾಡ ಅರುಣ್ ಅಚ್ಚಯ್ಯ ಮತ್ತು ಪ್ರಿಯಾ ದಂಪತಿಯ ಪುತ್ರಿಯಾಗಿದ್ದಾರೆ.


ಅರುಣ್ ಅಚ್ಚಯ್ಯ ಮತ್ತು ಪ್ರಿಯಾ ರೊಂದಿಗೆ ರಿಯಾ ಅಚ್ಚಯ್ಯ

# ಗಾಳಿ ಸಹಿತ ಮಳೆಗೆ 13 ಕಿಮೀ ವಿದ್ಯುತ್ ತಂತಿ ಹಾನಿ

**ಮಡಿಕೇರಿ:** ಜಿಲ್ಲೆಯಲ್ಲಿ ಸುರಿದ ಗಾಳಿ ಸಹಿತ ಮಳೆಗೆ ಇದುವರೆಗೆ ಒಟ್ಟು 1442 ವಿದ್ಯುತ್ ಕಂಬಗಳು, 11 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಒಟ್ಟು 13 ಕಿ.ಮೀ ವಿದ್ಯುತ್ ತಂತಿಗಳಿಗೆ ಹಾನಿಯಾಗಿದೆ. ಮಳೆಯ ನಡುವೆಯೇ ಈಗಾಗಲೇ 1091 ವಿದ್ಯುತ್ ಕಂಬಗಳು ಹಾಗೂ 9 ಪರಿವರ್ತಕಗಳನ್ನು ದುರಸ್ತಿಗೊಳಿಸಿ ಬದಲಾಯಿಸಲಾಗಿದೆ

ಪ್ರತಿದಿನ ಸರಾಸರಿ 100 ಕಂಬಗಳ ಬದಲಾವಣೆಯ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ವಿದ್ಯುತ್ ಜಾಲದ ದುರಸ್ತಿ ಕಾರ್ಯವನ್ನು ಚುರುಕಗೊಳಿಸಿ ಪುನಃ ಸ್ಥಾಪಿಸಲು 231 ಸಿಬ್ಬಂದಿ, ಇತರೆ ವಿಭಾಗಗಳಿಂದ 52 ಸಿಬ್ಬಂದಿ, ಹೊರ ಗುತ್ತಿಗೆಯಿಂದ 75 ಸಂಖ್ಯೆ ಸಿಬ್ಬಂದಿಗಳನ್ನು ನೇಮಿಸಲಾಗಿದೆ. 124 ವಿದ್ಯುತ್ ಗುತ್ತಿಗೆದಾರ ಸಿಬ್ಬಂದಿಗಳು ವಿವಿಧ ಸಲಕರಣೆಗಳೊಂದಿಗೆ ನಿರಂತರವಾಗಿ ಸಮರೋಪಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಚೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಮಾಹಿತಿ ನೀಡಿದ್ದಾರೆ.


ಜಿಲ್ಲೆಯಲ್ಲಿ ಸುರಿದ ಮಳೆಗೆ 1442 ವಿದ್ಯುತ್ ಕಂಬಗಳು ನೆಲಕ್ಕುರುಳಿದೆ.

# ಬಸ್-ಆಟೋರಿಕ್ಷಾ ಡಿಕ್ಕಿ ರಿಕ್ಷಾ ಚಾಲಕನಿಗೆ ಗಾಯ



**ಸುಂಟಿಕೊಪ್ಪ:** ಆಟೋರಿಕ್ಷಾ ಮತ್ತು ಪ್ರವಾಸಿಗರ ಖಾಸಗಿ ಬಸ್ ಮುಖಾಮುಖಿ ಡಿಕ್ಕಿಯಾಗಿ ರಿಕ್ಷಾ ಚಾಲಕ ಗಾಯಗೊಂಡಿರುವ ಘಟನೆ ಇಲ್ಲಿನ 7ನೇ ಹೊಸಕೋಟೆ ಸರಕಾರಿ ಶಾಲಾ ಮುಂಭಾಗದಲ್ಲಿ ಸಂಭವಿಸಿದೆ.

ವಿರಾಜಪೇಟೆ ಮೂಲದ ಖಾಸಗಿ ಪ್ರವಾಸಿ ಬಸ್ ಕುಶಾಲನಗರ ಕಡೆಯಿಂದ ಮಡಿಕೇರಿ ಕಡೆಗೆ ಬರುತ್ತಿದ್ದಾಗ ಸುಂಟಿಕೊಪ್ಪದಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಆಟೋಗೆ ಪರಸ್ಪರ ಡಿಕ್ಕಿ ಹೊಡೆದಿವೆ. ಪ್ರಸ್ತುತ ಕೊಪ್ಪದಲ್ಲಿ ನೆಲೆಸಿರುವ ಆಟೋ ಚಾಲಕ ಜೀವನ್ ಎಂಬಾತ ಗಾಯಗೊಂಡು ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿದ್ದಾನೆ. ಈ ಅವಘಡದಿಂದಾಗಿ ಆಟೋ ರಸ್ತೆಯಲ್ಲಿ ಮಗುಚಿಕೊಂಡಿದೆ. ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಾಫಿ ಧಾರಣೆ ಕುಸಿತ : ಕಂಗಾಲಾದ ಬೆಳೆಗಾರರು

ಮಡಿಕೇರಿ, ಜೂ.2-ಅಂತಾರಾಷ್ಟ್ರೀಯ ಕಾಫಿ ಮಾರುಕಟ್ಟೆಯಲ್ಲಿ ಕಾಫಿ ಧಾರಣೆಯು ಕುಸಿತ ಕಂಡಿದ್ದು, ಬೆಳೆಗಾರ ಸಮೂಹ ತೀವ್ರ ಆತಂಕಕ್ಕೆ ಸಿಲುಕಿದೆ. ಆರು ತಿಂಗಳ ಕನಿಷ್ಠ ದರವನ್ನು ರೋಬಸ್ಟಾ ಕಾಫಿ ಕಂಡಿದ್ದರೆ, ಅರೇಬಿಕಾ ಕಾಫಿ ಕಳೆದ ಏಳು ವಾರಗಳ ಅತ್ಯಂತ ಕಡಿಮೆ ದರವನ್ನು ದಾಖಲಿಸಿ ಬೆಳೆಗಾರರನ್ನು ಕಂಗಾಲು ಮಾಡಿದೆ.



ಪ್ರಸಕ್ತ ಸಾಲಿನ ಆರಂಭದಿಂದಲೇ ರೋಬಸ್ಟಾ ಕಾಫಿ ಧಾರಣೆ ಏರುಮುಖವಾಗಿ 50 ಕೆ.ಜಿ.ಯ ಚೀಲಕ್ಕೆ 14 ಸಾವಿರ ರೂ.ಗಳ ದಾಖಲೆ ಸೃಷ್ಟಿಸಿತ್ತು. ಕೆಲ ವಾರಗಳಿಂದ ಅದರ ಧಾರಣೆ 10 ರಿಂದ 11 ಸಾವಿರದ ನಡುವೆ ತೂಗುಯ್ಯಾಲೆ ಆಡುತ್ತಿದೆ. ಇದು ಮತ್ತಷ್ಟು ಕುಸಿಯುವ ಆತಂಕವಿದೆ ಅರೇಬಿಕಾ ಕಾಫಿಯ ಧಾರಣೆ ಆರಂಭದಲ್ಲಿ ಪ್ರತಿ ಚೀಲಕ್ಕೆ 16,500 ರೂ.ಗಳಿಂದ 17,250ರವರೆಗೆ ಇದ್ದಿದ್ದು, ಈಗ 15,500 ರೂ.ಗಳಿಂದ 17 ಸಾವಿರಕ್ಕೆ ಕುಸಿದಿದೆ.

**ಅಡಕತ್ತರಿಯಲ್ಲಿ ಬೆಳೆಗಾರ :** ರಾಷ್ಟ್ರದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ.30ಕ್ಕೂ ಹೆಚ್ಚಿನ ಕಾಫಿ ಉತ್ಪಾದನೆಯಾಗುವ ಕೊಡಗಿನಲ್ಲಿ ರೋಬಸ್ಟಾ ಕಾಫಿ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಸಣ್ಣ ಬೆಳೆಗಾರರೆ ಅಧಿಕವಾಗಿರುವ ಜಿಲ್ಲೆಯಲ್ಲಿ ಸರ್ವ ಕಾಲಿಕ ಧಾರಣೆಯಿಂದ ಬೆಳೆಗಾರರು ಉತ್ತೇಜಿತರಾಗಿದ್ದರು. ಈ ಬಾರಿಯ ಧಾರಣೆ 14 ಸಾವಿರ ಗಡಿಯನ್ನು ಮುಟ್ಟಿದ ಹಿನ್ನೆಲೆಯಲ್ಲಿ ಮತ್ತಷ್ಟು ದರ ಏರಿಕೆಯ ನಿರೀಕ್ಷೆಯೊಂದಿಗೆ ಬೆಳೆದ ಕಾಫಿಯ ಬಹುತೇಕ ಭಾಗವನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಇದೀಗ ಧಾರಣೆ ಕುಸಿತ ಬೆಳೆಗಾರರನ್ನು ಆಘಾತಕ್ಕೀಡು ಮಾಡಿದೆ. ಒಂದೆಡೆ ಕಾಫಿ ಧಾರಣೆ ಮತ್ತಷ್ಟು ಕುಸಿದು ಹೋಗುವ ಆತಂಕವಿದ್ದರೆ ಇನ್ನೊಂದೆಡೆ ಧಾರಣೆ ಒಂದಷ್ಟು ಚೇತರಿಸುವ ಸಣ್ಣ ನಿರೀಕ್ಷೆಯೂ ಇರುವುದರಿಂದ ಬೆಳೆಗಾರ ಪ್ರಸ್ತುತ ಅಡಕತ್ತರಿಯಲ್ಲಿ ಸಿಲುಕಿದ್ದಾನೆ.

## ಬ್ರಾಂಡ್‌ನಲ್ಲಿ ಕೊಡಗು ಕಾಫಿಗೆ ಹಿನ್ನಡೆ

'ಕೊಡಗು' ಎನ್ನುವುದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 'ಶೇಡ್ ಕಾಫಿ' ಎಂದೇ ಪ್ರಸಿದ್ಧ. ವಿಶಿಷ್ಟವಾದ, ಸ್ವಾದಭರಿತ ಕಾಫಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿಶ್ಚಿತ 'ಬ್ರಾಂಡ್' ಆಗಿ ಪರಿವರ್ತಿಸುವ ಪ್ರಯತ್ನಗಳು ಪೂರ್ಣ ಪ್ರಮಾಣದಲ್ಲಿ ಯಶಸ್ಸನ್ನು ಕಂಡಿಲ್ಲ. ಕೊಡಗಿನ ರೋಬಸ್ಟಾ ಕಾಫಿ ತನ್ನ ಸ್ವಾದದಿಂದ ವಿಶ್ವದ ವಿವಿಧ ರಾಷ್ಟ್ರಗಳ ಕಾಫಿಗಿಂತ ಪ್ರತ್ಯೇಕವಾಗಿ ಗುರುತಿಸಲ್ಪಡುತ್ತದೆ. ಇಂತಹ ಕಾಫಿಗೆ ತನ್ನದೇ ಆದ ಬ್ರಾಂಡ್ ಸೃಷ್ಟಿಯಾದಲ್ಲಿ 'ಕೊಡಗಿನ ಕಾಫಿ' ಎನ್ನುವುದಕ್ಕೆ ಸದಾ ಉತ್ತಮ ಧಾರಣೆ ದೊರಕುವ ಎಲ್ಲಾ ಅವಕಾಶಗಳಿವೆ. ಆದರೆ ಇದನ್ನು ಮಾಡುವವರಾರು ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

# ನ್ಯಾಯಾಧೀಶೆಯಾಗಿ ಚೈತ್ರ ಅಧಿಕಾರ ಸ್ವೀಕಾರ


ನೂತನ ನ್ಯಾಯಾಧೀಶರಾಗಿ ಎಲ್. ಚೈತ್ರ ಅಧಿಕಾರ ವಹಿಸಿಕೊಂಡರು.

**ಕುಶಾಲನಗರ:** ತಾಲೂಕು ನ್ಯಾಯಾಲಯದ ನೂತನ ದ್ವಿತೀಯ ಮಹಿಳಾ ನ್ಯಾಯಾಧೀಶರಾಗಿ ಎಲ್. ಚೈತ್ರ ಇಂದು ಅಧಿಕಾರ ವಹಿಸಿಕೊಂಡರು. ವಕೀಲರ ಸಂಘದ ಪರವಾಗಿ ಅಧ್ಯಕ್ಷ ನಾಗೇಂದ್ರ ಬಾಬು ನೂತನ ನ್ಯಾಯಾಧೀಶರಿಗೆ ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಕೂಡಿಗೆ ಮೋಹನ್, ಉಪಾಧ್ಯಕ್ಷ ಕೆ.ಎಸ್ ವೆಂಕಟರಮಣ ರಾವ್, ಸದಸ್ಯರು, ಅಭಿಯೋಜಕರು, ನ್ಯಾಯಾಲಯದ ಸಿಬ್ಬಂದಿಗಳು, ಆರಕ್ಷಕರು ಪಾಲ್ಗೊಂಡಿದ್ದರು.

# ಶೋಭಾ ಯಶವಂತ್ ನಿಧನ

**ಸೋಮವಾರಪೇಟೆ:** ಮಹಿಳಾ ಸಮಾಜದ ಉಪಾಧ್ಯಕ್ಷೆಯಾಗಿದ್ದು, ಹಲವಾರು ಸಂಘ-ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದ ಶೋಭಾ ಯಶವಂತ್ (57) ಸೋಮವಾರ ನಿಧನರಾದರು.



ಮೃತರು ಪತಿ ಹಾಗೂ ಇಬ್ಬರು ಪುತ್ರರ ಸಹಿತ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ನಾಳೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬವರ್ಗ ತಿಳಿಸಿದೆ.

## ನ್ಯಾಯಾಧೀಶೆ ಬಿ.ಎಸ್. ಭಾರತಿ ಅವರಿಗೆ ಬೀಳ್ಕೊಡುಗೆ


ಚಾ.ನಗರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ ಧಾರವಾಡಕ್ಕೆ ವರ್ಗಾವಣೆಗೊಂಡ ಹಿನ್ನಲೆಯಲ್ಲಿ ವಕೀಲ ಸ್ನೇಹಿ ವತಿಯಿಂದ ವಕೀಲ ಉಮ್ಮತ್ತೂರು ಇಂದುಶೇಖರ್ ಬೀಳ್ಕೊಡುಗೆ ನೀಡಿದರು. ವಕೀಲರಾದ ಎ.ಎಸ್.ಸಿದ್ದರಾಜು, ಜಿ.ಸಂತೋಷ್ ಕುಮಾರ್, ಎನ್.ಕೆ.ವಿರೂಪಾಕ್ಷ ಸ್ವಾಮಿ, ಶಿವಪ್ರಸನ್ನ, ಎನ್.ವಿನಾಯಕ, ಎ.ಎಸ್. ನವೀನ್ ಕುಮಾರ್ ಎಸ್.ರಾಜೇಶ್ವರಿ, ಎಂ.ಎಸ್. ಮೋಹನ್ ಜಗದೀಶ್, ಮಲ್ಲು, ಜಿ.ಗಿರೀಶ್, ಮಹದೇವ ಪ್ರಸಾದ್, ರಾಜೇಂದ್ರ, ಉಪಸ್ಥಿತರಿದ್ದರು.

# ಜನೌಷಧಿ ಕೇಂದ್ರ ಮುಚ್ಚದಂತೆ ಆಗ್ರಹಿಸಿ ಪ್ರತಿಭಟನೆ


ಜನೌಷಧಿ ಕೇಂದ್ರ ಮುಚ್ಚುವ ರಾಜ್ಯದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಜೂ.2-ಜನೌಷಧಿ ಕೇಂದ್ರ ಮುಚ್ಚುವ ರಾಜ್ಯ ಸರಕಾರ ಮುಂದಾಗಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆಯಿಂದ ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಜನೌಷಧಿ ಕೇಂದ್ರದೆದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಜನರಿಗೆ ಉಪಯೋಗವಾಗಿರುವ ಜನೌಷಧಿ ಕೇಂದ್ರಗಳನ್ನು ಲಾಬಿಗೆ ಮಣಿದು ಮುಚ್ಚುವ ಹಂತಕ್ಕೆ ಸರ್ಕಾರ ಬಂದಿದೆ. ಸರ್ಕಾರ ಜನೌಷಧಿ ಕೇಂದ್ರಗಳನ್ನು ಉಳಿಸಿಕೊಳ್ಳದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದ ರಾಜ್ ಡಾ.ಪರಮೇಶ್ವರಪ್ಪ, ಪಣ್ಯದಹುಂಡಿ ರಾಜು, ರಾಚಪ್ಪ ಅರುಣ್ ಕುಮಾರ್ ಗೌಡ, ರೈತ ಮುಖಂಡ ನಾಗರಾಜು, ಸುಬ್ಬಯ್ಯ, ತಾಂಡವಮೂರ್ತಿ, ವೀರಭದ್ರ, ಮುತ್ತಿಗೆ ಗೋವಿಂದರಾಜ, ಶಿವು, ದೊರೆ, ಸ್ವಾಮಿ, ಲಿಂಗರಾಜು, ಚೇತನ್ ಗೌಡ ಮತ್ತಿತರರು ಭಾಗವಹಿಸಿದ್ದರು.

# ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

**ಚಾಮರಾಜನಗರ:** ನೇಣು ಬಿಗಿದು ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದ ಬಳಿಯ ಮನೆಯೊಂದರಲ್ಲಿ ನಡೆದಿದೆ.

ನಗರದ ಜಿಯೋ ಟೆಲಿಕಾಂ ಸಂಸ್ಥೆಯಲ್ಲಿ ನೌಕರನಾಗಿದ್ದ ವಿನಯ್(36) ಆತ್ಮಹತ್ಯೆ ಮಾಡಿಕೊಂಡವರು. ಈತ ಬಾಡಿಗೆ ಮನೆಯಲ್ಲಿ ವಾಸವಿದ್ದನು. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಫ್ಯಾನಿಗೆ ಪಂಚೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೋಗಿಲೂರು ಗ್ರಾಮದ ವಿನಯ್ ನಗರದಲ್ಲಿ 7-8 ವರ್ಷಗಳಿಂದ ವಾಸವಿದ್ದು, ನಗರದ ಜಿಯೋ ಟೆಲಿಕಾಂ ಸಂಸ್ಥೆಯಲ್ಲಿ ನೌಕರನಾಗಿದ್ದರು. ಶನಿವಾರ ತನ್ನ ಸ್ನೇಹಿತರು, ಸಹೋದ್ಯೋಗಿಗಳನ್ನು ಸೇರಿಸಿಕೊಂಡು 'ಸಾರಿ' ಎಂಬ ವಾಟ್ಸಾಪ್ ರಚಿಸಿ ಜೀವನದಲ್ಲಿ ಬೇಸರವಾಗಿದೆ. ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಮೆಸೇಜ್ ಮಾಡಿದ್ದಾರೆ. ಅಂಥ ಕೆಲಸ ಮಾಡಿಕೊಳ್ಳಬೇಡ ಎಂದು ಸ್ನೇಹಿತರು ಮನವಿ ಮಾಡಿದರೂ ನೇಣು ಹಾಕಿಕೊಂಡಿದ್ದಾರೆ.

ಮೆಸೇಜ್ ನೋಡಿದ ಸ್ನೇಹಿತರು ಮನೆಗೆ ಬಂದು ಬಾಗಿಲು ಬಡಿದರೂ ಪ್ರಯೋಜನವಾಗಲಿಲ್ಲ. ನಂತರ ಬಾಗಿಲು ಒಡೆದು ನೋಡಿದಾಗ ಫ್ಯಾನಿಗೆ ನೇಣು ಹಾಕಿಕೊಂಡಿದ್ದು ಕಂಡುಬಂದಿದೆ. ತಕ್ಷಣ ನೇಣು ಬಿಚ್ಚಿ ದೇಹವನ್ನು ಕೆಳಗೆ ಇಳಿಸಲಾಯಿತು. ಅಷ್ಟೊತ್ತಿಗೆ ವಿನಯ್ ಮೃತಪಟ್ಟಿದ್ದರು. ವಿಷಯ ತಿಳಿದು ಸ್ಥಳಕ್ಕೆ ಇನ್‌ಸ್ಪೆಕ್ಟರ್ ಆನಂದ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

# ಕೋವಿಡ್ ತಡೆಗೆ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿ

## ಜಿಲ್ಲಾಧಿಕಾರಿ ಸಲಹೆ


ಕೋವಿಡ್ ತಡೆಗೆ ಮುಂಜಾಗ್ರತಾ ಕ್ರಮಗಳ ಸಂಬಂಧ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಧಿಕಾರಿಗಳ ಸಭೆ ನಡೆಸಿದರು

ಚಾಮರಾಜನಗರ, ಜೂ.2 – ಕೋವಿಡ್-19 ಪ್ರಕರಣಗಳ ಬಗ್ಗೆ ಜಾಗರೂಕರಾಗಿರಬೇಕು. ಯಾವುದೇ ಆತಂಕ ಪಡದೇ ಜ್ವರ, ಕೆಮ್ಮು, ಎದೆ ನೋವು ಅಥವಾ ಉಸಿರಾಟದ ತೊಂದರೆ ಕಂಡು ಬಂದಲ್ಲಿ ತಕ್ಷಣವೇ ವೈದ್ಯಕೀಯ ಸಲಹೆ ಪಡೆಯುವಂತೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಲಹೆ ಮಾಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಕೋವಿಡ್-19, ಮಲೇರಿಯಾ, ಡೆಂಗ್ಯೂ, ಚಿಕುನ್ ಗೂನ್ಯ, ಇನ್ನಿತರ ನಿಯಂತ್ರಣ ಹಾಗೂ ಮುಂಜಾಗ್ರತಾ ಕ್ರಮಗಳ ಬಗ್ಗೆ ನಡೆದ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಕೋವಿಡ್ 19 ಪ್ರಕರಣಗಳ ತಡೆ, ಪತ್ತೆಹಚ್ಚುವಿಕೆ ಹಾಗೂ ಆರೈಕೆಗೆ ನಿರಂತರ ಮೇಲ್ವಿಚಾರಣೆ ಮತ್ತು ನಿರ್ವಹಣೆಯನ್ನು ಮುಂದುವರೆಸಲಾಗಿದೆ. ಸಾರ್ವಜನಿಕರು ಜನದಟ್ಟಣೆಯ ಸ್ಥಳಗಳಲ್ಲಿ ಮಾಸ್ಕ್ ಧರಿಸಿ ದೈಹಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಉತ್ತಮ ನೈರ್ಮಲ್ಯವನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆಯಂತೆ ಎಲ್ಲಾ ಅನುದಾನಿತ, ಅನುದಾನ ರಹಿತ ಶಾಲೆಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿವಿಧ ಇಲಾಖೆಗಳಿಂದ ನಿರ್ವಹಣೆಯಾಗುವ ಹಾಸ್ಟೆಲ್‌ಗಳು, ಆಶ್ರಮ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ ಜಾಗೃತಿ ಮೂಡಿಸಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ, ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ರಾಮಚಂದ್ರರಾಜೇಅರಸ್, ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಇನ್ನಿತರ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಶಿಥಿಲ ಅಂಗನವಾಡಿ ಕೇಂದ್ರಗಳ ತುರ್ತು ರಿಪೇರಿಗೆ ಕ್ರಮ

ಗುಂಡ್ಲುಪೇಟೆ,(ಸೋಮ್.ಜಿ)- ಶಿಥಿಲವಾಗುತ್ತಿರುವ ಅಂಗನವಾಡಿ ಕೇಂದ್ರಗಳನ್ನು ತುರ್ತಾಗಿ ರಿಪೇರಿ ಮಾಡಲು ಸದ್ಯದಲ್ಲೇ ಕ್ರಮಕೈಗೊಳ್ಳಲಾಗುವುದು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ಅರೇಪುರ ಗ್ರಾಮದಲ್ಲಿ ನಿರ್ಮಿಸಿರುವ ನೂತನ ಅಂಗನವಾಡಿ ಕೇಂದ್ರದಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳಿಗೆ ನೊಂದಣಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಹಿನ್ನೆಲೆಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲವಾಗುವಂತೆ ಉಚಿತವಾಗಿ ಮಕ್ಕಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಎಲ್ಲಾ ರೀತಿಯ ನೆರವನ್ನು ನೀಡುತ್ತಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸ್ಮಾರ್ಟ್ ಸ್ಕೂಲ್ ಆರಂಭಿಸಲಾಗುವುದು ಎಂದರು.


ಅರೇಪುರ ಗ್ರಾಮದ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಮತ್ತು ಗಣ್ಯರು ಪುಸ್ತಕಗಳನ್ನು ವಿತರಣೆ ಮಾಡಿದರು.

ಮುಂದಿನ ದಿನಗಳಲ್ಲಿ ಅಂಗನವಾಡಿ ಕಟ್ಟಡಗಳ ರಿಪೇರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಕ್ಷೇತ್ರದ 145 ಅಂಗನವಾಡಿ ಕೇಂದ್ರಗಳಿಗೆ ಶೀಘ್ರ ಟಿವಿ ನೀಡಲಾಗುತ್ತಿದೆ ಎಂದ ಅವರು, ಇದೇ ಕಾರ್ಯಕ್ರಮದಲ್ಲಿ ಮಕ್ಕಳ ಕಲಿಕೆಗೆ ಅಗತ್ಯವಾದ ಪುಸ್ತಕಗಳನ್ನು ಗಣ್ಯರು ವಿತರಣೆ ಮಾಡಿದರು.

ಚಿಕ್ಕಾಟಿ ಗಾಪಂ ಅಧ್ಯಕ್ಷ ಮಹದೇವ ಕುಮಾರ್, ಮಾಜಿ ಅಧ್ಯಕ್ಷೆ ಚೈತ್ರಾ ಶಿಶು ಅಭಿವೃದ್ಧಿ ಅಧಿಕಾರಿ ಹೇಮಾವತಿ, ಮುಖಂಡರಾದ ವೆಂಕಟನಾಯ್ಕ, ಗೌಡರ ಶಂಕರಪ್ಪ, ಮಲ್ಲಿಕಾರ್ಜುನ, ನಂದೀಶ್ ಹಲವರು ಇದ್ದರು.

# ಜನೌಷಧಿ ಕೇಂದ್ರ : ಸರ್ಕಾರದ ಕ್ರಮ ಖಂಡಿಸಿ ಬಿಜೆಪಿ ಪ್ರತಿಭಟನೆ


ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಬಿಜೆಪಿ ಕಾರ್ಯಕರ್ತರು ಜನೌಷಧಿ ಕೇಂದ್ರ ಮುಚ್ಚುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಪ್ರತಿಭಟಿಸಿದರು.

ಯಳಂದೂರು, ಜೂ. 2 (ವಿ.ನಾಗರಾಜು)- ಕೇಂದ್ರ ಸರ್ಕಾರದ ಜನೌಷಧಿ ಕೇಂದ್ರಗಳನ್ನು ರಾಜ್ಯ ಸರ್ಕಾರ ಮುಚ್ಚಲು ಆದೇಶಿಸಿರುವ ಕ್ರಮವನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕಡಿಮೆ ದರದಲ್ಲಿ ಬಡರೋಗಿಗಳಿಗೆ ಅಗತ್ಯ ಔಷಧಿಗಳು ಲಭಿಸಲಿ ಎಂಬ ಮಹತ್ತರ ಉದ್ದೇಶದಿಂದ ಕೇಂದ್ರ ಸರ್ಕಾರವು ಪ್ರತಿ ಸರ್ಕಾರಿ ಆಸ್ಪತ್ರೆ ಆವರಣಗಳಲ್ಲಿ ಜನೌಷಧಿ ಕೇಂದ್ರಗಳನ್ನು ತೆರೆದಿತ್ತು. ಆದರೆ ರಾಜ್ಯ ಸರ್ಕಾರವು ಇದನ್ನು ಮುಚ್ಚಲು ನಿರ್ಧರಿಸಿರುವ ಕ್ರಮ ಬಡವರ ಮೇಲೆ ಬರೆ ಎಳೆದಂತಿದೆ. ಎಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಅನಿಲ್, ಕಾರ್ಯದರ್ಶಿ ಮಹೇಶ್ ಕೆಂಪರಾಜು, ಜಿಲ್ಲಾ ಕಾರ್ಯದರ್ಶಿ ಪಿ.ಮಹೇಶ್, ವೈ.ಡಿ.ಸೂರ್ಯನಾರಾಯಣ, ಕಿಟ್ಟಿ, ಪಿಸಿಎಆರ್‌ಡಿ ಬ್ಯಾಂಕ್‌ನ ಉಪಾಧ್ಯಕ್ಷ ಭೀಮಪ್ಪ, ದೊರೆಸ್ವಾಮಿ, ಮಾಂಬಳ್ಳಿ ರಾಮು, ರುದ್ರೇಶ್, ಸೊಪ್ಪಿನಕೇರಿ ರಘು, ಗ್ರಾಪಂ ಸದಸ್ಯ ಮಹೇಶ್ ಸನಾತ್, ಚಿಕ್ಕಣ್ಣ, ಗಿರೀಶ್ ಇತರರು ಇದ್ದರು.

# ಫೋಟೋ ಶೂಟ್ 25 ಸಾವಿರ ರೂ.ದಂಡ




**ಗುಂಡ್ಲುಪೇಟೆ:** ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತಾರಣ್ಯ ಪ್ರದೇಶದೊಳಗೆ ಅಕ್ರಮವಾಗಿ ಪ್ರವೇಶಿಸಿ ಫೋಟೋ ಶೂಟ್ ಮಾಡಿಕೊಳ್ಳುತ್ತಿದ್ದ ಜೋಡಿಗೆ ಅರಣ್ಯ ಇಲಾಖೆ ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ.

ಬೆಂಗಳೂರು ಮೂಲದ ಘೋಷ್ ಮತ್ತು ಪಲ್ಲವಿ ಎಂಬುವರು ಬಂಡೀಪುರ ಅರಣ್ಯಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ದಂಡ ಕಟ್ಟಿರುವ ಜೋಡಿಯಾಗಿದ್ದಾರೆ. ಬಂಡೀಪುರದ ಖಾಸಗಿ ರೆಸಾರ್ಟ್‌ನಲ್ಲಿ ಉಳಿದಿದ್ದ ಈ ಜೋಡಿ ನಿನ್ನೆ ಸಂಜೆ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯದೊಳಗೆ ತಮ್ಮ ಕಾರಿನಲ್ಲಿ ಅಕ್ರಮವಾಗಿ ಪ್ರವೇಶಿಸಿ ಪರಿಸರ ಸೂಕ್ಷ್ಮ ಪ್ರದೇಶದ ಸೊಳ್ಳಿ ಕಟ್ಟೆ ಪ್ರದೇಶದಲ್ಲಿ ಫೋಟೋಗಳನ್ನು ತೆಗೆದುಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿ ವಿಚಾರಣೆ ನಡೆಸಿ ಅಧಿಕಾರಿಗಳ ಮುಂದೆ ಹಾಜರುಪಡಿಸಿದರು.

ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದ ನಂತರ ಉಪ ವಿಭಾಗದ ಎಸಿಎಫ್ ಎನ್.ಪಿ. ನವೀನ್‌ಕುಮಾರ್ 25 ಸಾವಿರ ರೂಪಾಯಿ ದಂಡ ವಿಧಿಸಿದರು. ಮೊಬೈಲಿನಲ್ಲಿ ತೆಗೆದಿದ್ದ ಎಲ್ಲಾ ಫೋಟೋಗಳನ್ನು ಡಿಲೀಟ್ ಮಾಡಿ ಮುಚ್ಚಳಿಕೆ ಪತ್ರ ಬರೆಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಜಯಪುರ ಬಳಿ ಪತ್ತೆಯಾದ ಅರೆಬೆಂದ ವ್ಯಕ್ತಿ ದೇಹದ ರಹಸ್ಯ ಬಯಲು

# ಬೋಗಾದಿ ಬಳಿಯ ಲಾಡ್ಜ್‌ನ ಮ್ಯಾನೇಜರ್ ಜೂಜುಕೋರರಿಂದ ಹತ್ಯೆ

### ● ಗಿರವಿ ಇಡಲು ತಂದಿದ್ದ ಸರ ಕದ್ದ ಶಂಕೆ ● ಚಾಮರಾಜನಗರ ಬಳಿಯ ಹಳ್ಳಿಗೆ ಹೋಗಿ ಕರೆತಂದು ಹತ್ಯೆ; ದೇಹ ದಹನ

ಮೈಸೂರು, ಜೂ.2–ವ್ಯಕ್ತಿಯೋರ್ವ ನನ್ನು ಹತ್ಯೆಗೈದು ಶವವನ್ನು ಸುಟ್ಟು ಹಾಕಿದ್ದ ಪ್ರಕರಣವನ್ನು ಭೇದಿಸುವಲ್ಲಿ ಮೈಸೂರು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಚಾಮರಾಜನಗರ ತಾಲೂಕು ಬ್ಯಾಡರ ಪುರ ಗ್ರಾಮದವನಾಗಿದ್ದು, ಮೈಸೂರಿನ ಬೋಗಾದಿಯಲ್ಲಿರುವ ಲಾಡ್ಜ್ ಒಂದರ ಮ್ಯಾನೇಜರ್ ಆಗಿದ್ದ ಮೋಹನ್ ಕುಮಾರ್(31) ಹತ್ಯೆಗೀಡಾದವರು. ಈ ಪ್ರಕರಣದಲ್ಲಿ ಬೋಗಾದಿಯ ಪ್ರಜ್ವಲ್, ಚಂದು, ಕಬೀರ್ ಕಾಳಯ್ಯ, ದರ್ಶನ್ ಎಂಬುವವರನ್ನು ಮೈಸೂರು ತಾಲೂಕು ಜಯಪುರ ಠಾಣೆ ಪೊಲೀಸರು ಬಂಧಿಸಿದ್ದು, ಪ್ರಮುಖ ಆರೋಪಿ ಶ್ರೀನಿವಾಸ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಶ್ರೀನಿವಾಸ್ ಚಿನ್ನದ ಸರವನ್ನು ಮೋಹನ್ ಕುಮಾರ್ ಕಳವು ಮಾಡಿದ್ದ ಎಂಬ ಕಾರಣಕ್ಕಾಗಿ ಆತನನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ವಿವರ:** ಏಪ್ರಿಲ್ 18ರಂದು ಮೈಸೂರು ತಾಲೂಕು ಜಯಪುರ ಠಾಣೆಯ ವ್ಯಾಪ್ತಿಯ ಗುಮಚನಹಳ್ಳಿ ಬಳಿ ಸುಟ್ಟು ಹೋದ ಸ್ಥಿತಿಯಲ್ಲಿ ವ್ಯಕ್ತಿಯೋರ್ವನ ದೇಹ ಪತ್ತೆಯಾಗಿತ್ತು. ಜಯಪುರ ಠಾಣೆ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು.

ಅದೇ ವೇಳೆ ಚಾಮರಾಜನಗರ ತಾಲೂಕು ಬ್ಯಾಡರಪುರ ಗ್ರಾಮದ ಮೋಹನ್ ಕುಮಾರ್ ನನ್ನು ಏ.17ರಂದು ಬೆಳಗ್ಗೆ ಆತನ ಸ್ನೇಹಿತರು ಕರೆದೊಯ್ದಿದ್ದು, ಮತ್ತೆ ವಾಪಸ್ ಬಂದಿಲ್ಲ ಎಂದು ಚಾಮರಾಜನಗರ ಗ್ರಾಮಾಂತರ ಠಾಣೆಯಲ್ಲಿ ಆತನ ಮನೆಯವರು ಏ.18 ರಂದು ನಾಪತ್ತೆ ಪ್ರಕರಣ ದಾಖಲಿಸಿದ್ದರು.


ಮರು ದಿನ ಜಯಪುರ ಠಾಣಾ ವ್ಯಾಪ್ತಿ ಯಲ್ಲಿ ಅಪರಿಚಿತ ವ್ಯಕ್ತಿ ಕೊಲೆಯಾಗಿದೆ ಎಂಬ ಮಾಹಿತಿ ತಿಳಿದು ಚಾಮರಾಜನಗರ ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ತಂಡ, ಮೈಸೂರಿಗೆ ಬಂದು ಶವಾಗಾರದಲ್ಲಿದ್ದ ದೇಹವನ್ನು ನೋಡಿದರಾದರೂ ಸಂಪೂರ್ಣವಾಗಿ ಸುಟ್ಟು ಹೋಗಿದ್ದರಿಂದ ಗುರುತು ಪತ್ತೆ ಯಾಗಿರಲಿಲ್ಲ. ಪ್ರಕರಣದ ಆರೋಪಿಗಳ ಪತ್ತೆಗಾಗಿ ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಮೈಸೂರು ಗ್ರಾಮಾಂತರ ವಿಭಾಗದ ಡಿವೈಎಸ್ಪಿ ಕರೀಂ ರಾವುತರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದ್ದರು.

**ಫೋನ್ ಕರೆ ನೀಡಿದ ಸುಳಿವು:** ಮತ್ತೊಂದೆಡೆ ಮೋಹನ್ ಕುಮಾರ್ ನಾಪತ್ತೆ ಪ್ರಕರಣ ವನ್ನು ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದ ವೇಳೆ ಏಪ್ರಿಲ್ 17ರ ಮಧ್ಯರಾತ್ರಿ ಮೋಹನ್ ಕುಮಾರ್‌ನ ಅಕ್ಕನಿಗೆ ಒಂದು ಕಾಲ್ ಬಂದಿತ್ತು. ಈ ಬಗ್ಗೆ ವಿಚಾರಿಸಿ ದಾಗ ಮೋಹನ್ ಕುಮಾರ್ ಅಕ್ಕ ಯಾವುದೋ ಮಿಸ್ಡ್‌ಕಾಲ್ ಬಂದಿತ್ತು ಅಷ್ಟೇ ಎಂದು ಹೇಳುತ್ತಾರೆ.

ಆಕೆಯ ಮಾಹಿತಿಯನ್ನು ಚಾಮರಾಜ ನಗರ ಸರ್ಕಲ್ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್, ಮೈಸೂರು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಬಳಿ ಹಂಚಿಕೊಂಡಿದ್ದಾರೆ.

ಶಿವನಂಜ ಶೆಟ್ಟರು, ಆಕೆಯ ಮೊಬೈಲ್‌ಗೆ ಬಂದಂತಹ ಮಿಸ್ಡ್‌ಕಾಲ್ ಪರಿಶೀಲನೆ ನಡೆಸಿದಾಗ, ಮೈಸೂರು ಬೋಗಾದಿಯ ಚಂದು ಎಂಬಾತನ ಕರೆ ಅದು. ಇದು ಮಿಸ್ಡ್ ಕಾಲ್ ಆಗಿರದೆ ಕೆಲ ನಿಮಿಷ ಸಂಭಾಷಣೆಯೂ ನಡೆದಿದೆ ಎಂಬುದು ತಿಳಿದು ಬಂತು.

ಈ ವಿಚಾರ ಡಿವೈಎಸ್ಪಿ ಕರೀಂ ರಾವುತರ್ ಅವರಿಗೆ ತಿಳಿಸಲಾಗಿ, ನಂತರ ಮೋಹನ್‌ಕುಮಾರ್‌ನ ಮನೆಯವರನ್ನು ವಿಚಾರಣೆಗೊಳಪಡಿಸಿದಾಗ ಏಪ್ರಿಲ್ 17ರ ಬೆಳಗ್ಗೆ ಆತನನ್ನು ಮೈಸೂರಿನ ಸ್ನೇಹಿತರು ಕರೆದೊಯ್ದರು. ಆತ ಬೋಗಾದಿಯ ಲಾಡ್ಜ್ ನಲ್ಲಿ ಕೆಲಸ ಮಾಡುತ್ತಿದ್ದ. ನಾಪತ್ತೆಯಾಗುವುದಕ್ಕೆ ಕೆಲ ದಿನಗಳಿಂದ ಆತ ಕೆಲಸಕ್ಕೆ



ಹತ್ಯೆಗೀಡಾದ ಮೋಹನ್‌ಕುಮಾರ್

ಹೋಗಿಲ್ಲ ಎಂಬುದು ತಿಳಿಯಿತು. ಆತನ ಅಕ್ಕನ ಮೊಬೈಲ್‌ಗೆ ಮಧ್ಯರಾತ್ರಿ ಕರೆ ಮಾಡಿದ್ದ ಬೋಗಾದಿಯ ಚಂದುವನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ ವೇಳೆ ಹತ್ಯೆ ಪ್ರಕರಣ ಬಯಲಾಗಿ, ಇನ್ನು ನಾಲ್ವರನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಪ್ರಮುಖ ಆರೋಪಿ ಶ್ರೀನಿವಾಸ್‌ಗಾಗಿ ಹುಡುಕಾಟ ನಡೆದಿದೆ.

**ಆಗಿದ್ದಾದರೂ ಏನು?:** ಮೋಹನ್ ಕುಮಾರ್ ಕೆಲಸ ಮಾಡುತ್ತಿದ್ದ ಬೋಗಾದಿಯ ಲಾಡ್ಜ್‌ನಲ್ಲಿ ರೂಂ ಪಡೆದು ಶ್ರೀನಿವಾಸ್ ಹಾಗೂ ಆತನ ಸ್ನೇಹಿತರು ಸದಾ ಜೂಜಾಡುತ್ತಿದ್ದರು. ಒಂದು ದಿನ ಶ್ರೀನಿವಾಸ್ ಗಿರವಿ ಇಡುವುದಕ್ಕಾಗಿ ಆತನ ಸ್ನೇಹಿತನ 60ಗ್ರಾಂ ತೂಕದ ಚಿನ್ನದ ಸರವನ್ನು ತಂದಿದ್ದಾನೆ. ಆದರೆ ಅಂದು ಪೌರ್ಣಮಿಯಾಗಿದ್ದರಿಂದ ಸರವನ್ನು ಗಿರವಿ ಇಡಲು ಸಾಧ್ಯವಾಗದೆ ತನ್ನ ಬಳಿಯೇ ಇಟ್ಟುಕೊಂಡಿದ್ದ. ಮರುದಿನ ನೋಡಿದರೆ ಚಿನ್ನದ ಸರವೇ ನಾಪತ್ತೆ. ಆಗ ಶ್ರೀನಿವಾಸ್ ಸ್ನೇಹಿತರೊಡಗೂಡಿ ಕೊಲೆಗೀಡಾದ ಮೋಹನ್ ಕುಮಾರ್ ಸಹ ಹುಡುಕಾಡಿದ್ದಾನೆ. ಆದರೆ ಸರವಂತೂ ಸಿಕ್ಕಿಲ್ಲ. ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ನೋಡಿದಾಗ ಶ್ರೀನಿವಾಸ್ ಇದ್ದ ರೂಂಗೆ ಮೋಹನ್‌ಕುಮಾರ್ ಹೋಗಿ ಬಂದಿರುವುದು ಪತ್ತೆಯಾಗಿತ್ತು.

ಹೀಗಾಗಿ ನೀನೇ ಸರ ಕದ್ದಿದ್ದೀಯಾ ಕೊಟ್ಟುಬಿಡು ಎಂದು ಮೋಹನ್ ಕುಮಾರ್ ನನ್ನು ಶ್ರೀನಿವಾಸ್ ಹಾಗೂ ಸ್ನೇಹಿತರು ಪೀಡಿಸತೊಡಗಿದ್ದಾರೆ. ಆತ ಸರ ಕದ್ದಿಲ್ಲ ಎಂದು ನಿರಾಕರಿಸಿದ. ಇವರ ಹಿಂಸೆ ತಡೆಯಲಾಗದೆ ಕೊನೆಗೆ ಲಾಡ್ಜ್‌ಗೆ ಬರದೆ ತನ್ನೂರು ಬ್ಯಾಡರಪುರದಲ್ಲೇ ಉಳಿದಿದ್ದಾನೆ.

ಏಪ್ರಿಲ್ 17ರಂದು ಬೆಳಗ್ಗೆ 7.30ರ ಸುಮಾರಿಗೆ ಬ್ಯಾಡರಪುರಕ್ಕೆ ಕಾರಿನಲ್ಲಿ ಹೋದ ಈ ಆರೋಪಿಗಳು ಆತನನ್ನು ಕರೆದಿದ್ದಾರೆ. ಮನೆಯವರಿಗೆ ಸ್ನೇಹಿತರೊಂದಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಕಾರು ಹತ್ತಿದ ಮೋಹನ್ ಕುಮಾರ್‌ನನ್ನು, ಶ್ರೀನಿವಾಸ್ ಸಂಗಡಿಗರು ಮನಸ್ಸೋ ಇಚ್ಛೆ ಹಲ್ಲೆ ನಡೆಸಿದ್ದು, ಆತ ಕಾರಿನಲ್ಲೇ ಮೃತಪಟ್ಟಿದ್ದಾನೆ. ರಾತ್ರಿವರೆಗೂ ಮೈಸೂರಿನ ಹಲವೆಡೆ ಶವದೊಂದಿಗೆ ಸುತ್ತಾಡಿದ ಆರೋಪಿಗಳು ಪೆಟ್ರೋಲ್ ಬಂಕ್ ಒಂದರಲ್ಲಿ ಕ್ಯಾನ್ ವೊಂದರಲ್ಲಿ 5 ಲೀಟರ್ ಪೆಟ್ರೋಲ್ ಹಾಕಿಸಿಕೊಂಡು ರಾತ್ರಿ ಮೈಸೂರು ತಾಲೂಕು ಜಯಪುರ ಠಾಣೆಯ ವ್ಯಾಪ್ತಿಯ ಗುಮಚಹಳ್ಳಿ ಗ್ರಾಮದ ಬಳಿ ಶವವನ್ನು ಎಸೆದು, ಗುರುತು ಸಿಗಬಾರದೆಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ ಎಂಬುದು ಪೊಲೀಸರ ತನಿಖೆಯಿಂದ ಹೊರಬಂದಿದೆ.

### ಮೈಸೂರು ನಗರ, ಹೊರವಲಯದಲ್ಲಿ ವ್ಯಾಪಕವಾಗಿದೆ ಜೂಜಾಟ ದಂಧೆ!

ಮೈಸೂರು, ಜೂ.2– ಈ ಹಿಂದೆ ಮೈಸೂರು ನಗರದ ಕೆಲವು ವಸತಿ ಗೃಹಗಳಲ್ಲಿ ವೇಶ್ಯಾವಾಟಿಕೆ ಹಾಗೂ ಜೂಜಾಟ ಎಗ್ಗಿಲ್ಲದೆ ನಡೆಯುತ್ತಿತ್ತು. ನಗರ ಪೊಲೀಸರು ಹಾಗೂ ಸಿಸಿಬಿ ಪೊಲೀಸರು ಪದೇ ಪದೇ ದಾಳಿ ನಡೆಸುತ್ತಿದ್ದರಿಂದ ಇದೀಗ ನಗರದಲ್ಲಿ ಈ ದಂಧೆಗಳು ಕೊಂಚ ಕಡಿಮೆಯಾಗಿದ್ದು, ಮೈಸೂರು ಹೊರವಲಯದಲ್ಲಿ ಎಗ್ಗಿಲ್ಲದೆ ದಂಧೆಗಳು ನಡೆಯುತ್ತಿವೆ.

ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಹೊರವಲಯದ ಹಲವಾರು ಲಾಡ್ಜ್‌ಗಳು, ತೋಟದ ಮನೆಗಳು, ಸರ್ವಿಸ್ ಅಪಾರ್ಟ್‌ಮೆಂಟ್‌ಗಳು ಜೂಜುಕೋರರ ಅಡ್ಡೆಗಳಾಗಿ ಪರಿವರ್ತನೆಯಾಗಿವೆ. ಜೊತೆಗೆ ವೇಶ್ಯಾವಾಟಿಕೆ ಹಾಗೂ ಕ್ರಿಕೆಟ್ ಬೆಟ್ಟಿಂಗ್ ತಾಣಗಳಾಗಿಯೂ ಮಾರ್ಪಟ್ಟಿವೆ. ಹೊರವಲಯದ ಲಾಡ್ಜ್‌ಗಳಿಗೆ ಈ ದಂಧೆಕೋರರೇ ಬಹುತೇಕ ಗ್ರಾಹಕರಾಗಿದ್ದು ಅವರಿಂದ ಹೆಚ್ಚಿನ ಬಾಡಿಗೆಯೂ ದೊರೆಯುತ್ತಿದೆ ಎಂದು ಬಲ್ಲವರು ಹೇಳುತ್ತಾರೆ. ಪೊಲೀಸರಿಗೆ ಮಾಹಿತಿ ದೊರೆತಾಗ ದಾಳಿ ನಡೆಸುತ್ತಾರೆ. ಆ ನಂತರ ಯಥಾ ಪ್ರಕಾರ ದಂಧೆ ನಡೆಯುತ್ತಲೇ ಇರುತ್ತದೆ. ತೋಟದ ಮನೆಗಳು ಹಾಗೂ ಸರ್ವಿಸ್ ಅಪಾರ್ಟ್‌ಮೆಂಟ್‌ಗಳಲ್ಲಿ ನಡೆಯುವ ದಂಧೆ ಬಗ್ಗೆ ಪೊಲೀಸರಿಗೆ ಮಾಹಿತಿ ದೊರೆಯುವುದೇ ಅಪರೂಪ. ಅದರಲ್ಲೂ ತೋಟದ ಮನೆಗಳಿಗೆ ಪೊಲೀಸರು ದಾಳಿ ನಡೆಸಲು ಹೋದಾಗ ಅವರ ವಾಹನಗಳು ಬರುವುದನ್ನು ದೂರದಿಂದಲೇ ಗಮನಿಸುವ ದಂಧೆಕೋರರು ತೋಟದೊಳಗೆ ನುಸುಳಿಕೊಂಡು ತಪ್ಪಿಸಿಕೊಳ್ಳುತ್ತಾರೆ. ದಾಳಿ ನಡೆಸುವ ಪೊಲೀಸರು ತಮಗೆ ತಪ್ಪು ಮಾಹಿತಿ ಬಂದಿದೆ ಎಂದುಕೊಂಡು ವಾಪಸ್ಸಾಗುತ್ತಾರೆ ಎಂದು ಈ ದಂಧೆಯ ಬಗ್ಗೆ ತಿಳುವಳಿಕೆ ಇರುವವರು ಹೇಳುತ್ತಾರೆ.

# ಕಾವ್ಯದಲ್ಲಿ ಅತಿಪ್ರಾಸದಿಂದ ಭಾವ ಭಂಗ

### ● ಹಿರಿಯ ವಿದ್ವಾಂಸ ಡಾ.ಸಿಪಿಕೆ ಅಭಿಮತ ● ಅಂತರಂಗ ಕವನ ಸಂಕಲನ ಬಿಡುಗಡೆ

ಮೈಸೂರು, ಜೂ.2(ಪಿಎಂ)– ಕಾವ್ಯಕ್ಕೆ ಪ್ರಾಸ ಬಹಳ ಮುಖ್ಯವಾದರೂ ಅದು ತ್ರಾಸದಾಯಕವಾಗಿ ಸೇರ್ಪಡೆಗೊಳ್ಳದೇ ಸಹಜವಾಗಿ ಮೂಡಿಬಂದಿರಬೇಕು. ಇಲ್ಲವಾದರೆ ಅತಿಪ್ರಾಸದಿಂದ ಭಾವ ಭಂಗ ಉಂಟಾಗುತ್ತದೆ ಎಂದು ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಅಭಿಪ್ರಾಯಪಟ್ಟರು.



ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಶನಿವಾರ 'ಅಂತರಂಗ' ಕವನ ಸಂಕಲನವನ್ನು ಹಿರಿಯ ವಿದ್ವಾಂಸ ಡಾ.ಸಿಪಿಕೆ ಬಿಡುಗಡೆಗೊಳಿಸಿದರು.

ಮೈಸೂರಿನ ವಿಜಯನಗರ ಒಂದನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕಸಾಪ, ಹಿಮಾಲಯ ಪ್ರತಿಷ್ಠಾನ ಹಾಗೂ ರೋಟರಿ ಮೈಸೂರ್ ಸ್ಟಾರ್ಸ್ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ಕವಯತ್ರಿ ರೊ.ನಾಗಮ್ಮ ಅವರ 'ಅಂತರಂಗ' ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕಾವ್ಯಕ್ಕೆ ಪ್ರಾಸ ಮುಖ್ಯವಾದರೂ ಅದನ್ನು ತ್ರಾಸದಾಯಕವಾಗಿ ಸೇರಿಸುವುದು ಅತಿರೇಕವಾಗುತ್ತದೆ. ಇಂದು ಬಿಡುಗಡೆಗೊಂಡ ಸಂಕಲನದಲ್ಲಿ 60 ಕವನಗಳು ಇದ್ದು, ಇಲ್ಲಿನ ಪದ್ಯಗಳೆಲ್ಲಾ ಪ್ರಾಸ ಪ್ರಧಾನವಾಗಿವೆ. ಕಾವ್ಯಕ್ಕೆ ಪ್ರಾಸ ಬಹಳ ಮುಖ್ಯ ಆದರೆ ಪ್ರಾಸವನ್ನು ತ್ರಾಸದಿಂದ ಸೇರಿಸದೇ ಸಹಜವಾಗಿ ಬರಬೇಕು. ಹಿಂದೆಲ್ಲಾ ಪದ್ಯದಲ್ಲಿ ಪ್ರಾಸ ಇರುತ್ತಿತ್ತು. ಈಗ ಗದ್ಯದಲ್ಲೂ ಪ್ರಾಸ ಬಳಕೆಯಾಗುತ್ತಿದೆ. ಇದಕ್ಕೆ ಸೂಕ್ತ ಉದಾಹರಣೆಯೆಂದರೆ ಪತ್ರಿಕೆಗಳಲ್ಲಿ ವರದಿಯಾಗುವ ಸುದ್ದಿಗಳಾಗಿವೆ. ಸುದ್ದಿಗಳನ್ನು ಪ್ರಾಸಬದ್ಧವಾಗಿ ಪ್ರಕಟಿಸುವುದೂ ಇದೆ. ಇದು ಪ್ರಾಸದ ಮಹತ್ವವನ್ನು ಸೂಚಿಸುತ್ತದೆ ಎಂದು ವಿವರಿಸಿದರು.

'ಪ್ರಾಸಕ್ಕೆ ದಾಸರಾಗಿ ಭಾವಕ್ಕೆ ಸಾವು ತಂದರು' ಎಂದು ಕನ್ನಡ ಪ್ರಾಚೀನ ಕವಿಗಳು ಟೀಕಿಸಿದ್ದಾರೆ. ಪ್ರಾಸ ಅನಗತ್ಯವಾಗಿ ಸೇರ್ಪಡೆಗೊಂಡರೆ ಇಲ್ಲಿ ಹೇಳಿದಂತೆಯೇ ಆಗುತ್ತದೆ. ನಾಗಮ್ಮನವರ ಕವಿತೆಗಳಲ್ಲಿಯೂ ಹೀಗೆ ಆಗಿದೆ. ನಾಗಮ್ಮನವರು ಇಲ್ಲಿನ ಪದ್ಯಗಳಲ್ಲಿ ತಮ್ಮ ಸುತ್ತಲ ಸಮಾಜ ಸನ್ನಿವೇಶಗಳನ್ನು ಅನಾವರಣಗೊಳಿಸಿದ್ದಾರೆ. ಇಲ್ಲಿನ ಕವನಗಳಲ್ಲಿ ಉಪದೇಶ ಹೆಚ್ಚಾಗಿ ಕಾಣಿಸಿಕೊಂಡಿದ್ದು, ಕಾವ್ಯಗಳಲ್ಲಿ ಉಪದೇಶ ಕಡಿಮೆಯಾಗಿ ಸಂದೇಶ ಹೆಚ್ಚಾಗಬೇಕು. ಅದು ಮುಖ್ಯ. ಜೊತೆಗೆ ಇಲಿನ ಎಲ್ಲಾ ಕವನಗಳು ಸರಳವಾಗಿರುವುದು ಸೂಕ್ತವಾಗಿದೆ. ಸರಳ ಶಬ್ದಕ್ಕೆ ನೈಜ ಅರ್ಥವೆಂದರೆ ನೇರವಾಗಿ ಹೇಳುವುದು ಎಂಬುದಾಗಿದೆ ಎಂದರು.

ಒಟ್ಟಾರೆ ಇದೊಂದು ಒಳ್ಳೆಯ ಕವನ ಸಂಕಲನ. ನಮ್ಮ ಪ್ರಾಚೀನ ಕವಿ ನೇಮಿಚಂದ್ರನು ಕಾವ್ಯವನ್ನು ಭುವನದ ಭಾಗ್ಯ ಎಂದು ಕರೆದಿದ್ದಾನೆ. ಕಾವ್ಯವನ್ನು ನಾನು ಮನೆ ಮನೆ ದೀಪ ಎಂದು ಕರೆಯ ಬಯಸುತ್ತೇನೆ. ಇಂತಹ ದೀಪಗಳನ್ನು ನಾಗಮ್ಮನವರು ಹಚ್ಚಿಟ್ಟಿದ್ದಾರೆ. ಸ್ವಾರಸ್ಯವೆಂದರೆ 'ಮನೆ' ಎನ್ನುವುದನ್ನು ಉತ್ತರ ಕರ್ನಾಟಕದಲ್ಲಿ 'ಮನಿ' ಎಂದು ಉಚ್ಚರಿಸುತ್ತಾರೆ. ಈ ಕಾಲದಲ್ಲಿ ಮನಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇದು ದುರ್ದೈವ ಎಂದು ವಿಷಾದಿಸಿದರು.

ಕಾವ್ಯವನ್ನು ಕುವೆಂಪು ಅವರು ವೀಣೆಗೆ ಹೋಲಿಸಿದ್ದರೆ, ಬೇಂದ್ರೆಯವರು ಮೃದಂಗಕ್ಕೆ ಹೋಲಿಸಿದ್ದಾರೆ. ಕವಿತೆ ಎನ್ನುವುದನ್ನು ನಾನು 'ಅಂತರಂಗ ತರಂಗ' ಎಂದು ಕರೆಯಬಯಸುತ್ತೇನೆ. ಕಾವ್ಯ ಹೃದಯಗೀತೆಯೂ ಹೌದು. ಎದೆಯ ದನಿ ಎಂತಲೂ ಕರೆಯಬಹುದು ಎಂದರು.

ಕೃತಿ ಕುರಿತು ಸಂಸ್ಕೃತ ವಿದುಷಿ ಡಾ.ಕೆ. ಲೀಲಾಪ್ರಕಾಶ್ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಮ.ನ.ಲತಾ ಮೋಹನ್, ನಿವೃತ್ತ ಸರ್ಕಾರಿ ನೌಕರರ ಸಂಘದ ಗೌರವಾ ಧ್ಯಕ್ಷ ಓಬಯ್ಯ, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಎಂ.ವಿ.ಪ್ರಭುಸ್ವಾಮಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಮುಖಂಡ ಎಂ.ವಿ.ನಾಗೇಂದ್ರಬಾಬು ಮತ್ತಿತರರಿದ್ದರು.

# ರೈತರ ಕೃಷಿ ಚಟುವಟಿಕೆಗೆ ಅಗತ್ಯ ಅನುಕೂಲ ಕಲ್ಪಿಸಿ ಕೊಡಿ

### ಅಧಿಕಾರಿಗಳಿಗೆ ಸಂಸದ ಸುನೀಲ್ ಬೋಸ್ ಸೂಚನೆ

ಮೈಸೂರು, ಜೂ.2(ಎಂಕೆ)– ಮಳೆಗಾಲದಲ್ಲಿ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮವಹಿಸುವುದರ ಜೊತೆಗೆ ಜನರ ಕುಂದು–ಕೊರತೆಗಳನ್ನು ನಿವಾರಿಸುವಂತೆ ಚಾಮರಾಜ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿಯಲ್ಲಿ ಸೋಮವಾರ ಸಂಜೆ ಜನಸಂಪರ್ಕ ಸಭೆ ನಡೆಸಿದ ಅವರು, ಕ್ಷೇತ್ರದಲ್ಲಿರುವ ಕುಂದು–ಕೊರತೆಗಳನ್ನು ಆಲಿಸಿದರು. ಕಾವೇರಿ ನದಿಯಿಂದ ಬೇಸಾಯಕ್ಕೆ ನೀರು ಹರಿಸುವಂತೆ ಮುಡುಕುತೊರೆ ಭಾಗದ ರೈತರು ನೀಡುವ ಮನವಿಯನ್ನು ಪ್ರಸ್ತಾಪಿಸಿ, ರೈತರ ಅನುಕೂಲತೆಗೆ ಅನುಗುಣವಾಗಿ ನೀರು ಹರಿಸುವ ವ್ಯವಸ್ಥೆ ಮಾಡುವಂತೆ ತಿಳಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ತಮ್ಮ ಕಚೇರಿಯಲ್ಲಿ ಸೋಮವಾರ ಸಂಜೆ ಸಂಸದ ಸುನೀಲ್ ಬೋಸ್ ಜನಸಂಪರ್ಕ ಸಭೆ ನಡೆಸಿದರು.

ರೈತರು ನಮ್ಮನ್ನು ಗೆಲ್ಲಿಸಿರುವುದೇ ಕೆಲಸ ಮಾಡಲೀ ಅಂತ. ಅವರ ಕೆಲಸ ಮಾಡದೇ ಇನ್ಯಾರ ಕೆಲಸ ಮಾಡಬೇಕು. ಹಾಗಾಗಿ ಮೊದಲು ರೈತರ ಸಮಸ್ಯೆ ಬಗೆಹರಿಸಿ, ಮುಡುಕುತೊರೆ ಭಾಗದ ರಾಗಿ, ಹುರುಳಿಕಾಳು, ಅಲಸಂದೆ ಬೆಳೆಗೆ ನೀರಿನ ಅಗತ್ಯವಿದ್ದು ಕಾಲುವೆ ಮೂಲಕ ನೀರು ಹರಿಸುವ ವ್ಯವಸ್ಥೆ ಮಾಡುವಂತೆ ತಿಳಿಸಿದರು. ಹಾಗೆಯೇ ಕ್ಷೇತ್ರದಿಂದ ಆಗಮಿಸಿದ್ದ ನೂರಾರು ಮಂದಿಯ ಮನವಿ ಆಲಿಸಿದರಲ್ಲದೆ ಸ್ಪಂದಿಸುವ ಭರವಸೆ ನೀಡಿದರು.

## ಇಂದು ಮೈಮುಲ್‌ನಿಂದ ವಿಶ್ವ ಹಾಲು ದಿನಾಚರಣೆ; ಮೆರವಣಿಗೆಯಲ್ಲಿ ಸಾಕಾನೆ ಭಾಗಿ

ಮೈಸೂರು, ಜೂ.2– ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ(ಮೈಮುಲ್) ದಿಂದ ಮೊಟ್ಟ ಮೊದಲ ಬಾರಿಗೆ ಆನೆಯ ಮೆರವಣಿಗೆ ಮೂಲಕ 'ವಿಶ್ವ ಹಾಲು ದಿನ'ವನ್ನು ಸಂಭ್ರಮಿಸಲಾಗುತ್ತಿದೆ.

'ಹೈನೋದ್ಯಮದ ಸಂಭ್ರಮವನ್ನು ಸಂಭ್ರಮಿಸೋಣ' ಧ್ಯೇಯದೊಂದಿಗೆ ನಡೆಯಲಿರುವ ಮೆರವಣಿಗೆಯಲ್ಲಿ ಸಿದ್ದೇಶ್ವರ ಸ್ವಾಮಿ ಮಠದ ಸಾಕು ಆನೆ ಹೆಜ್ಜೆ ಹಾಕಲಿದೆ. ಈ ವೇಳೆ ಹಾಲು ಹಾಗೂ ಹಾಲಿನ ಉತ್ಪನ್ನಗಳ ಮಹತ್ವದ ಜೊತೆಗೆ ಬಳಕೆಯಿಂದಾಗುವ ಅನೂಕೂಲಗಳ ಬಗ್ಗೆ ಪ್ರಚಾರ ಮಾಡಲಾಗುತ್ತದೆ.

ಆಲನಹಳ್ಳಿ ಕೇಂದ್ರ ಘಟಕದ ಬಳಿ ಮಂಗಳವಾರ ಬೆಳಗ್ಗೆ 9ಕ್ಕೆ ಮೈಮುಲ್ ಅಧ್ಯಕ್ಷ ಚೆಲುವರಾಜು ಇದಕ್ಕೆ ಚಾಲನೆ ನೀಡಲಿದ್ದು, ಮೈಮುಲ್‌ನ ಎಲ್ಲಾ ಸದಸ್ಯರು, ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ಭಾಗವಹಿಸಲಿದ್ದಾರೆ.

ಮೆರವಣಿಗೆಯು ನೂತನ ಜಿಲ್ಲಾಧಿಕಾರಿಗಳ ಕಚೇರಿ ಮಾರ್ಗವಾಗಿ ಸಾಗಿ ಸಿದ್ಧಾರ್ಥನಗರದ ಹಳೇ ಡೇರಿ ಸಮೀಪದ ಶಿಕ್ಷಕರ ಭವನದ ಬಳಿ ಮುಕ್ತಾಯಗೊಳ್ಳಲಿದೆ. ಬಳಿಕ ಬೆಳಿಗ್ಗೆ 10.30ಕ್ಕೆ ಶಿಕ್ಷಕರ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ವಿವಿಧ ಹಾಲಿನ ಉತ್ಪನ್ನಗಳಿಗೆ ರಿಯಾಯಿತಿಯನ್ನು ಘೋಷಣೆ ಮಾಡಲಾಗುವುದು ಎಂದು ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್ ತಿಳಿಸಿದ್ದಾರೆ.

## ಗಾಂಜಾ ಮಾರಾಟ; ಆರೋಪಿ ಬಂಧನ

ಮೈಸೂರು, ಜೂ.2– ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮೈಸೂರಿನ ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗೌಸಿಯಾನಗರ ನಿವಾಸಿ ಜಿಯಾವುಲ್ಲಾ(27) ಬಂಧಿತನಾಗಿದ್ದು, ಈತನ ಬಳಿ ಇದ್ದ 144 ಗ್ರಾಂ ಗಾಂಜಾ ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ರಾಜೀವ್‌ನಗರ 1ನೇ ಹಂತದ ವಾಟರ್ ಟ್ಯಾಂಕ್ ಪಕ್ಕದ 3ನೇ ಕ್ರಾಸ್‌ನಲ್ಲಿ ವ್ಯಕ್ತಿಯೊಬ್ಬ ಸ್ಕೂಟಿಯಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಉದಯಗಿರಿ ಠಾಣೆ ಸಬ್‌ಇನ್ಸ್‌ಪೆಕ್ಟರ್ ಸಿ.ಎನ್.ಸುನೀಲ್, ಸಿಬ್ಬಂದಿ ಶಿವಪ್ರಸಾದ್, ಚಿನ್ನಪ್ಪ ಕಲ್ಲೋಳಿ, ಶಂಕರ ತಿಬಂಡಿವಡ್ಡರ ಹಾಗೂ ಬಸವರಾಜು ತಂಡ ದಾಳಿ ನಡೆಸಿ ವಶಕ್ಕೆ ಪಡೆದಿದೆ.

ಗಾಂಜಾ ಮಾರಾಟಕ್ಕೆ ಬಳಸಿದ್ದ ಯಮಹಾ ಎರಾಕ್ಸ್ ಸ್ಕೂಟಿ ವಾಹನದಲ್ಲಿ ನಂಬರ್ ಪ್ಲೇಟ್ ಇಲ್ಲದ ಕಾರಣ, ಆ ವಾಹನದ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುತ್ತಿದೆ ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಜೂ. 8 ರಂದು ನಟನ ರಂಗಶಾಲೆ ಮಕ್ಕಳ ಸಂದರ್ಶನ

ಮೈಸೂರು, ಜೂ. 2– ಮಂಡ್ಯ ರಮೇಶ್ ನೇತೃತ್ವದ ನಟನ ರಂಗಶಾಲೆಯು ಕಳೆದ ಅನೇಕ ವರ್ಷಗಳಿಂದ ರಂಗಭೂಮಿಯಲ್ಲಿ ನಿರಂತರ ಕ್ರಿಯಾಶೀಲವಾಗಿದ್ದು ರಂಗಭೂಮಿಯ ಅಧ್ಯಯನ, ಪ್ರಾತ್ಯಕ್ಷಿಕೆ, ಪ್ರಯೋಗ, ಪ್ರದರ್ಶನಗಳ ಮೂಲಕ ಶ್ರೇಷ್ಠತೆಯನ್ನು ಸಾಧಿಸುವುದರತ್ತ ಸತತವಾಗಿ ಪ್ರಯತ್ನಶೀಲವಾಗಿದೆ.

ತನ್ನ ಚಟುವಟಿಕೆಯ ಭಾಗವಾಗಿ 08ರಿಂದ 14ವರ್ಷದ ಮಕ್ಕಳ ಮನೋವಿಕಾಸ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತೆ ಅಭಿನಯ ಮತ್ತು ರಂಗ ತರಬೇತಿ ನೀಡುವ ನಿಟ್ಟಿನಲ್ಲಿ ಪ್ರತಿ ಶನಿವಾರ ಮಧ್ಯಾಹ್ನ 03ರಿಂದ 05ರ ವರೆಗೆ ಮತ್ತು ಭಾನುವಾರ ಬೆಳಿಗ್ಗೆ 10 ರಿಂದ 12ರವರೆಗೆ ತರಗತಿಯನ್ನು ನಡೆಸುತ್ತಿದ್ದು, 2025–26ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮತ್ತು ಮಕ್ಕಳ ಸಂದರ್ಶನ ಇದೇ ಜೂನ್ 08ರಂದು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 7259537777, 9480468327 ಸಂಪರ್ಕಿಸಿ.

## ಸಾರ್ವಜನಿಕ ಸ್ಥಳದಲ್ಲಿ ಗಲಾಟೆ; ಮೂವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜೂ.2– ಕ್ಷುಲ್ಲಕ ಕಾರಣಕ್ಕೆ ಸಾರ್ವಜನಿಕ ಸ್ಥಳದಲ್ಲಿ ಗಲಾಟೆ ನಡೆಸಿದ ಆರೋಪದಡಿ ಮೂವರು ಯುವಕರ ವಿರುದ್ಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾನುವಾರ ಸಂಜೆ 7 ಗಂಟೆ ಸಮಯದಲ್ಲಿ ರಾಜ್‌ಕುಮಾರ್ ರಸ್ತೆ ಕೆಇಬಿ ಜಂಕ್ಷನ್ ಬಳಿ ಮೂವರು ಯುವಕರು ಗಲಾಟೆ ಮಾಡಿ, ಸಾರ್ವಜನಿಕರ ಶಾಂತಿಗೆ ಭಂಗವುಂಟು ಮಾಡುತ್ತಿರುವ ಬಗ್ಗೆ ಮಾಹಿತಿ ತಿಳಿದ ಕೂಡಲೇ ಗಸ್ತಿನಲ್ಲಿದ್ದ ಅಪರಾಧ ವಿಭಾಗದ ಸಿಬ್ಬಂದಿ ಚಂದ್ರಶೇಖರ್ ಹಾಗೂ ಸುಹೀಲ್ ಸ್ಥಳಕ್ಕೆ ತೆರಳಿ, ಪರಸ್ಪರ ಗಲಾಟೆ ಮಾಡುತ್ತಿದ್ದವರನ್ನು ಹಿಡಿದು, ವಿಚಾರಿಸಿದಾಗ ಅವರು ಗೌಸಿಯಾ ನಗರದ ಅಬ್ದುಲ್ ಮುಷಾಹೀದ್(21), ಬರ್ಹಾನ್ ಷರೀಫ್(23) ಹಾಗೂ ಸೈಯದ್ (24) ಎಂದು ಗೊತ್ತಾಗಿದೆ. ರಸ್ತೆಯಲ್ಲಿ ಗಲಾಟೆ ಮಾಡಿಕೊಂಡು ಸಾರ್ವಜನಿಕರ ಶಾಂತಿಗೆ ಭಂಗವುಂಟು ಮಾಡಿದ ಆರೋಪದಡಿ ಅವರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

## ರಾಜ್ಯದಲ್ಲಿ 'ಥಗ್ ಲೈಫ್' ಚಿತ್ರದ ಸುಗಮ ಪ್ರದರ್ಶನಕ್ಕೆ ಹೈಕೋರ್ಟ್ ಮೊರೆ ಹೋದ ಕಮಲ್‌ಹಾಸನ್



ಬೆಂಗಳೂರು, ಜೂ.2– ತಮಿಳಿನಿಂದ ಕನ್ನಡ ಭಾಷೆ ಹುಟ್ಟಿದೆ ಎಂದು ಹೇಳಿ ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿರುವ ನಟ ಕಮಲ್‌ಹಾಸನ್ ಅವರ 'ಥಗ್ ಲೈಫ್' ಚಿತ್ರಕ್ಕೆ ರಾಜ್ಯದಲ್ಲಿ ಭಾರಿ ವಿರೋಧ ವ್ಯಕ್ತವಾಗುತ್ತಿದೆ. ಅಲ್ಲದೆ ಕಮಲ್ ಹಾಸನ್ ಅವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸದಿದ್ದರೆ ರಾಜ್ಯದಲ್ಲಿ ಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡುವುದಿಲ್ಲ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಇತ್ತೀಚೆಗೆ ಘೋಷಿಸಿದೆ.

ಇದರ ಬೆನ್ನಲ್ಲೇ ಚಿತ್ರದ ಸಹ–ನಿರ್ಮಾಪಕರಾದ ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್, ರಾಜ್ಯದಲ್ಲಿ ಯಾವುದೇ ಅಡೆತಡೆಯಿಲ್ಲದೆ ಚಿತ್ರವನ್ನು ಪ್ರದರ್ಶಿಸಲು ಅವಕಾಶ ನೀಡುವಂತೆ ನಿರ್ದೇಶನ ಕೋರಿ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್ ಸಂಸ್ಥೆಯ ಸಿಇಒ ವಿ.ನಾರಾಯಣನ್ ಅವರ ಮೂಲಕ ಕಮಲ್ ಹಾಸನ್ ಈ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯು ಇನ್ನಷ್ಟೇ ವಿಚಾರಣೆಗೆ ನ್ಯಾಯಪೀಠದ ಮುಂದೆ ನಿಗದಿಯಾಗಬೇಕಾಗಿದೆ. ತಮ್ಮ ನಿರ್ಮಾಣದ ಸಿನಿಮಾ ಥಗ್ ಲೈಫ್ ಇದೇ ಜೂ.5ಕ್ಕೆ ರಾಜ್ಯದಲ್ಲಿ ಬಿಡುಗಡೆ ಆಗಲಿದೆ. ಕರ್ನಾಟಕ ರಾಜ್ಯದ ಎಲ್ಲಾ ಭಾಷೆಗಳಲ್ಲಿ ಪ್ರದರ್ಶನವಾಗಲಿದ್ದು, ಅದಕ್ಕೆ ಯಾವುದೇ ರೀತಿಯಲ್ಲಿಯೂ ತಡೆಯುವ ಮತ್ತು ನಿರ್ಬಂಧಿಸು ವಂತಹ ಕ್ರಮಗಳನ್ನು ನೇರವಾಗಿ ಇಲ್ಲವೇ ಪರೋಕ್ಷವಾಗಿ ತೆಗೆದುಕೊಳ್ಳದಂತೆ ಆದೇಶ ಹೊರಡಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ

ಸಿನಿಮಾ ಪ್ರದರ್ಶನವನ್ನು ತಡೆಯದಂತೆ ಸರ್ಕಾರ, ಪೊಲೀಸ್ ಇಲಾಖೆ ಹಾಗೂ ಚಲನಚಿತ್ರ ವಾಣಿಜ್ಯ ಮಂಡಳಿಗೆ ನಿರ್ದೇಶನ ನೀಡಬೇಕು. ಸಿನಿಮಾ ಪ್ರದರ್ಶನಕ್ಕೆ ಸೂಕ್ತ ಭದ್ರತೆ ಒದಗಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ನಗರ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಬೇಕು. ಚಿತ್ರ ನಿರ್ಮಾಪಕರು, ನಿರ್ದೇಶಕರು ಮತ್ತು ಚಿತ್ರ ತಂಡಕ್ಕೆ ತೊಂದರೆಯಾಗದಂತೆ ಅಗತ್ಯ ಭದ್ರತೆ ನೀಡಬೇಕು ಮನವಿ ಮಾಡಿದ್ದಾರೆ.

## ರಾಜ್ಯದಲ್ಲಿ ಸೋಮವಾರ 87 ಮಂದಿಗೆ ಕೊರೊನಾ ಪಾಸಿಟಿವ್

ಬೆಂಗಳೂರು, ಜೂ.2– ಕಳೆದ 24 ಗಂಟೆಯಲ್ಲಿ 87 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 529ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಕೊರೊನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ರಾಜ್ಯದಲ್ಲಿ ಇಂದು ಒಟ್ಟು 504 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆ ಪೈಕಿ 87 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಒಟ್ಟು 311 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 297 ಮಂದಿ ಮನೆ ಆರೈಕೆಯಲ್ಲಿದ್ದಾರೆ ಮತ್ತು 14 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

# ಪ್ರಹ್ಲಾದ್ ಜೋಷಿ ಸೇರಿದಂತೆ ಇತರೆ ಕೇಂದ್ರ ಸಚಿವರು, ವಿಪಕ್ಷ ನಾಯಕ ಅಶೋಕ್, ಪ್ರಮುಖ ನಾಯಕರಿಲ್ಲದ ಬಿಜೆಪಿ ಹೊಸ ಕೋರ್ ಕಮಿಟಿ ರಚನೆಗೆ ಪಟ್ಟಿ ರೆಡಿ

▸ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರರ ನಿಲುವಿನಿಂದ ಬಿಜೆಪಿಯಲ್ಲಿ ಭಿನ್ನಾಭಿಪ್ರಾಯ ಉಲ್ಬಣ

▸ ಪಕ್ಷದ ವರಿಷ್ಠರಿಗೆ ಯತ್ನಾಳ್ ವಿವಾದದ ಬಳಿಕ ಮತ್ತೊಂದು ತಲೆ ನೋವು

ಬೆಂಗಳೂರು, ಜೂ. 2(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರುಗಳನ್ನು ಹೊರಗಿಟ್ಟು ಬಿಜೆಪಿಯ ಹೊಸ ಕೋರ್ ಕಮಿಟಿ ರಚನೆಗೆ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಂದಾಗಿದ್ದಾರೆ.

ಅಲ್ಲದೆ, ಹಿಂದುಳಿದ ವರ್ಗದ ಯಾವುದೇ ನಾಯಕರಿಗೆ ಪಕ್ಷದ ಉನ್ನತ ಮಟ್ಟದ ಈ ಸಮಿತಿಯಲ್ಲಿ ಅವಕಾಶ ನೀಡಿಲ್ಲ. ಪಟ್ಟಿಯಿಂದ ನಮ್ಮನ್ನು ಕೈಬಿಡಲಾಗಿದೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಅಶೋಕ್, ಕಳೆದ ವಾರ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಸೇರಿದಂತೆ ಪ್ರಮುಖ ಸಭೆಗಳಿಂದ ದೂರ ಉಳಿದಿದ್ದಾರೆ.

ವಿಜಯೇಂದ್ರ ಮತ್ತು ಅಶೋಕ್ ನಡುವಿನ ಆಂತರಿಕ ಭಿನ್ನಾಭಿಪ್ರಾಯ ಮತ್ತಷ್ಟು ಉಲ್ಬಣಗೊಂಡಿದೆ. ರಾಜ್ಯಾಧ್ಯಕ್ಷರು ಹೇಳುವುದನ್ನು ಅಶೋಕ್ ಪಾಲಿಸುತ್ತಿಲ್ಲ, ಪ್ರತಿಪಕ್ಷ ನಾಯಕರು ಹೇಳುವುದನ್ನು ವಿಜಯೇಂದ್ರ ಪಾಲನೆ ಮಾಡದೆ, ವಿರುದ್ಧ ದಿಕ್ಕಿನಲ್ಲಿ ಉಭಯ ನಾಯಕರು ನಡೆಯುತ್ತಿರುವುದು ಪಕ್ಷದ ವರಿಷ್ಠರು ಮತ್ತು ರಾಜ್ಯ ನಾಯಕರಿಗೆ ತಲೆ ನೋವಾಗಿದೆ.



ವಿಜಯೇಂದ್ರ



ಅಶೋಕ್



ಪ್ರಹ್ಲಾದ್ ಜೋಷಿ

ಪಕ್ಷ ಅಧಿಕಾರದಲ್ಲಿದ್ದರೆ, ಮುಖ್ಯಮಂತ್ರಿ, ಇಲ್ಲವೇ ಪ್ರತಿಪಕ್ಷವಾಗಿದ್ದರೆ ಶಾಸಕಾಂಗ ಪಕ್ಷದ ನಾಯಕರನ್ನು ಕೋರ್ ಕಮಿಟಿಯಿಂದ ಹೊರಗಿಡಲು ಸಾಧ್ಯವಿಲ್ಲ.

ಆದರೂ, ಅಶೋಕ್ ಅಲ್ಲದೆ, ಹಿಂದುಳಿದ ವರ್ಗದವರಿಗೂ ಅವಕಾಶ ನೀಡದೆ, ಕೋರ್ ಕಮಿಟಿ ಪುನರ್ ರಚಿಸಿ ವರಿಷ್ಠರ ಅನುಮತಿಗೆ ಕಳುಹಿಸಿರುವುದು ರಾಜ್ಯ ಬಿಜೆಪಿಯಲ್ಲಿ ಭಾರಿ ಗೊಂದಲಕ್ಕೆ ಕಾರಣವಾಗಿದೆ.

ವಿಧಾನಸಭೆ ಒಳಗೆ ಹಾಗೂ ಹೊರಗೆ ವಿಜಯೇಂದ್ರ ಮತ್ತು ಅಶೋಕ್ ತಮ್ಮ ತಮ್ಮ ಅನಿಸಿಕೆಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದಾರೆ. ಅಶೋಕ್, ಬಸವರಾಜ ಬೊಮ್ಮಾಯಿ, ಡಾ.ಕೆ.ಸುಧಾಕರ್ ಸೇರಿದಂತೆ ಕೆಲವು ಹಿರಿಯ ಮುಖಂಡರು ವಿಜಯೇಂದ್ರ ವಿರುದ್ಧ ಇದ್ದರೂ ಕಡೆಗಣಿಸಿ ಪಕ್ಷ ದ ಪದಾಧಿಕಾರಿ ಹಾಗೂ ಜಿಲ್ಲಾಧ್ಯಕ್ಷರ ನೇಮಕಾತಿಯಲ್ಲಿ ತಮ್ಮವರದೇ ಮೇಲುಗೈ ಮಾಡಿಕೊಂಡಿದ್ದಾರೆ.

ಕೋರ್ ಕಮಿಟಿಯಲ್ಲಿ ಒಕ್ಕಲಿಗ ಹಾಗೂ ಲಿಂಗಾಯತರಿಗೆ ಹೆಚ್ಚು ಪ್ರಾತಿನಿಧ್ಯ ನೀಡಿದ್ದು, ಪರಿಶಿಷ್ಟರಲ್ಲಿ ಎಡಗೈ ಮತ್ತು ಬಲಗೈಗೆ ತಲಾ ಒಂದು ಸ್ಥಾನ ಹಾಗೂ ಅಲ್ಪಸಂಖ್ಯಾತರೊಬ್ಬರಿಗೆ ಸ್ಥಾನ ನೀಡಲಾಗಿದೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಿ.ವಿ.ಸದಾನಂದಗೌಡ, ವಿಧಾನ ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಜಯೇಂದ್ರ ಸಿದ್ಧಪಡಿಸಿರುವ ಕೋರ್ ಕಮಿಟಿಯಲ್ಲಿದ್ದಾರೆ.

ಪ್ರಹ್ಲಾದ್ ಜೋಷಿ ಸೇರಿದಂತೆ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ.ಸೋಮಣ್ಣ ಅವರಿಗೂ ಅವಕಾಶ ನೀಡಿಲ್ಲ. ಮಾಜಿ ಸಚಿವ ಅರವಿಂದ್ ಲಿಂಬಾವಳಿ ಅವರನ್ನು ಕೈಬಿಟ್ಟು ತಮ್ಮ ಆಪ್ತ, ಮಾಜಿ ಶಾಸಕ ನಂದೀಶ್ ರೆಡ್ಡಿಗೆ ಅವಕಾಶ ನೀಡಲಾಗಿದೆ.

ಅಗರ್ವಾಲ್ ಇತ್ತೀಚೆಗೆ ಕರ್ನಾಟಕಕ್ಕೆ ಭೇಟಿ ನೀಡಿದ್ದ ವೇಳೆ ಸರಣಿ ಸಭೆ ಹಾಗೂ ಕೋರ್ ಕಮಿಟಿ ಸಭೆ ನಂತರ ವಿಜಯೇಂದ್ರ, ಉನ್ನತ ಸಮಿತಿ ಪುನರ್ ರಚನೆಯನ್ನು ಅವರ ಗಮನಕ್ಕೆ ತಂದು ಪಟ್ಟಿ ಸಿದ್ಧಪಡಿಸಿದ್ದಾರೆ.

ಅಶೋಕ್ ಸೇರಿದಂತೆ ಕೆಲವರ ಹೆಸರು ಕೈಬಿಟ್ಟಿರುವುದನ್ನು ಗಮನಿಸಿದ ಅಗರ್ವಾಲ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ಹಾಗೂ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರೊಂದಿಗೆ ಚರ್ಚಿಸಿ ಪಟ್ಟಿ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಜಿಲ್ಲಾಧ್ಯಕ್ಷರ ನೇಮಕಾತಿ ಮಾದರಿಯಲ್ಲೇ ಕೋರ್ ಕಮಿಟಿ ರಚಿಸಿದ್ದು, ಇದಕ್ಕೆ ವರಿಷ್ಠರು ಯಾವ ತೀರ್ಮಾನ ಕೈಗೊಳ್ಳುವರೆಂಬುದನ್ನು ಕಾದು ನೋಡಬೇಕಿದೆ.

ಮೈಸೂರು ಮಿತ್ರ



# ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪೌರ ಸೇವಾ ನೌಕರರ ಧರಣಿ

ನಂಜನಗೂಡು, ಜೂ.2– ಸರ್ಕಾರ ರಾಜ್ಯ ಪೌರ ಸೇವಾ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘದಿಂದ ನಗರ ಸಭಾ ಆವರಣದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಯಿತು.

ರಾಜ್ಯ ಪೌರ ಸೇವಾ ನೌಕರರು ಕೆಲಸ ಸ್ಥಗಿತಗೊಳಿಸಿ, ನಗರಸಭಾ ಕಚೇರಿಗೆ ಬೀಗ ಜಡಿದು ಅನಿರ್ದಿಷ್ಟಾವಧಿ ಪ್ರತಿಭಟನೆಯಲ್ಲಿ ಪಾಲ್ಗೊಂಡರಲ್ಲದೆ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ರಾಜ್ಯ ಪೌರ ಸೇವಾ ನೌಕರರ ಸೇವಾ ಸಂಘದ ಜಿಲ್ಲಾ ಕಾರ್ಯದರ್ಶಿ ನಾರಾಯಣ್ ರಾವ್ ಮಾತನಾಡಿ, ರಾಜ್ಯ ಸರ್ಕಾರಿ ನೌಕರರಿಗೆ ನೀಡುವ ಪ್ರತಿಯೊಂದು ಸವಲತ್ತುಗಳನ್ನು ಪೌರ ಸೇವಾ ನೌಕರರಿಗೆ ಪ್ರತ್ಯೇಕ ಆದೇಶವಿಲ್ಲದೆ ವಿಸ್ತರಿಸಬೇಕು. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಮತ್ತು ಕ್ಷೇಮಾಭಿವೃದ್ಧಿ ನಿಯಮದಡಿ ಕಾರ್ಯ ನಿರ್ವಹಿಸುವ ನೌಕರರನ್ನು ಸಕ್ರಮಾತಿಗೊಳಿಸಬೇಕು. ನಗರಸಭೆಯ ಶೇ.100ರಷ್ಟು ಪೌರಕಾರ್ಮಿಕರನ್ನು ವಿಶೇಷ ನೇಮಕಾತಿ ಅಡಿ ನೇಮಕ ಮಾಡಿಕೊಳ್ಳಬೇಕು. 2022ರಲ್ಲಿ ವಿಶೇಷ ನೇಮಕಾತಿ ಅಡಿ ಆಯ್ಕೆಯಾದ ಪೌರಕಾರ್ಮಿಕರಿಗೆ ಮತ್ತು ಲೋಡರ್ಸ್‌ಗಳಿಗೆ ಎಸ್‌ಎಫ್‌ಸಿ ವೇತನ ನಿಧಿಯಿಂದ ವೇತನ ಪಾವತಿಸಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರನ್ನು ವಿಶೇಷ ನೇಮಕಾತಿ ಅಡಿ ಪರಿಗಣಿಸಬೇಕು. ಪೌರ ಸೇವಾ ನೌಕರರಿಗೆ ಜ್ಯೋತಿ ಸಂಜೀವಿನಿ, ನಗದು ರಹಿತ ಚಿಕಿತ್ಸಾ ಸೌಲಭ್ಯ ಕಲ್ಪಿಸಬೇಕು. ಐಟಿ ಸಿಬ್ಬಂದಿ, ಅಕೌಂಟ್ ಕನ್ಸಲ್ಟೆಂಟ್, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕ, ಸ್ಯಾನಿಟರಿ ಸೂಪರ್‌ವೈಸರ್ ಇತರೆ ವೃಂದದ ನೌಕರರನ್ನು ಪೌರ ಸೇವಾ ನೌಕರರೆಂದು ಪರಿಗಣಿಸಿ ವಿಲೀನಗೊಳಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರೂ ಸರ್ಕಾರ ಬೇಡಿಕೆಗಳನ್ನು ಈಡೇರಿಸದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಸರ್ಕಾರದ ಧೋರಣೆ ಖಂಡಿಸಿ ರಾಜ್ಯಾದ್ಯಂತ ಪೌರ ಸೇವಾ ನೌಕರರ ಸೇವಾ ಸಂಘದಿಂದ ಅನಿದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ. ಇಂದಿ ನಿಂದ ಮನೆ ಮನೆ ಕಸ ಸಂಗ್ರಹಣೆ ಸೇರಿದಂತೆ ನಗರಸಭೆಯ ಯಾವುದೇ ಕೆಲಸಗಳನ್ನು ಮಾಡದೆ ಅನಿದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ. ನಮ್ಮ ಬೇಡಿಕೆಗಳು ಈಡೇರಿರುವವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯುವ ಮಾತೇ ಇಲ್ಲ, ಸರ್ಕಾರ ಎಚ್ಚೆತ್ತುಕೊಂಡು ಈ ಕೂಡಲೇ ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಬೇಡಿಕೆಗ ಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಚೆಲುವರಾಜು, ನಗರಸಭಾ ಅಧಿಕಾರಿಗಳಾದ ಮೈತ್ರಾದೇವಿ, ನಂದಿನಿ, ರೇಖಾ, ಪ್ರೀತಮ್, ರಾಘವೇಂದ್ರ, ಮಹೇಶ್, ಪಾತಲಿಂಗಪ್ಪ, ಎನ್.ಮಾದಯ್ಯ, ಗಜೇಂದ್ರ, ಮುತ್ತುರಾಜ್, ಮಹದೇವಸ್ವಾಮಿ ಸೇರಿದಂತೆ ನಗರಸಭಾಧಿಕಾರಿಗಳು, ಪೌರ ಕಾರ್ಮಿಕರು, ನೀರು ಗಂಟಿಗಳು, ವಾಹನ ಚಾಲಕರು ಪಾಲ್ಗೊಂಡಿದ್ದರು.


ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

## ಬನ್ನೂರಲ್ಲೂ ಪ್ರತಿಭಟನೆ


ಬನ್ನೂರಲ್ಲಿ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಬನ್ನೂರು: ವಿವಿಧ' ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪಟ್ಟಣದ ಪುರಸಭೆ ಆವರಣದಲ್ಲಿ ಸೋಮವಾರ ಪೌರಕಾರ್ಮಿಕರು ಮತ್ತು ಹೊರ ಗುತ್ತಿಗೆ ನೌಕರರು ಪ್ರತಿಭಟನೆ ನಡೆಸಿದರು.

ಹೊರಗುತ್ತಿಗೆ ಅಡಿ ಕಾರ್ಯ ನಿರ್ವಹಿಸುತ್ತಿರುವ ವಾಹನ ಚಾಲಕರು, ಪೌರ ಕಾರ್ಮಿಕರು ಸೇರಿದಂತೆ ಇತರರು ಕೆಲಸ ಸ್ಥಗಿತ ಗೊಳಿಸಿ ಪುರಸಭೆ ಆವರಣದಲ್ಲಿ ಕುಳಿತು ಪ್ರತಿಭಟನೆ ನಡೆಸಿದರು. ಈ ವೇಳೆ ಎಲ್ಲಾ ಕಾರ್ಮಿಕ ವರ್ಗದವರು ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

# ಕಾರ್ಮಿಕ ಒಕ್ಕೂಟಕ್ಕೆ ಪದಾಧಿಕಾರಿಗಳ ಆಯ್ಕೆ


ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕ ಒಕ್ಕೂಟದ ತಾಲೂಕು ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಜೂ.2– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ತಾಲೂಕು ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕ ಒಕ್ಕೂಟದ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದ ತಾಲೂಕು ಅಧ್ಯಕ್ಷರಾಗಿ ಎಡತೊರೆ ಗಣೇಶ್, ಉಪಾಧ್ಯಕ್ಷರಾಗಿ ಬಸವರಾಜು ತೆಲಗುಮಸ್ಳಿ, ಕಾರ್ಯದರ್ಶಿಯಾಗಿ ಕೊತ್ತೇಗಾಲ ಮಂಜುನಾಥ್, ಖಜಾಂಚಿ ಪ್ರಭು, ಅಂತರಸಂತೆ ಹೋಬಳಿ ಘಟಕದ ಅಧ್ಯಕ್ಷ ಗೋಪಾಲ್, ಉಪಾಧ್ಯಕ್ಷೆ ದೇವಮ್ಮ ಸಿ., ಕಾರ್ಯದರ್ಶಿ ಪುಟ್ಟಸ್ವಾಮಿ, ಖಜಾಂಚಿ ನಿಂಗರಾಜ್, ಹಂಪಾಪುರ ಹೋಬಳಿ ಘಟಕದ ಅಧ್ಯಕ್ಷರಾಗಿ ಕೆ.ನರಸಿಂಹ, ಉಪಾಧ್ಯಕ್ಷೆ ಪ್ರಭ, ಕಾರ್ಯದರ್ಶಿ ದೇವಣ್ಣ ಖಜಾಂಚಿ ಸೋಮಣ್ಣ, ಕಸಬಾ ಹೋಬಳಿ ಅಧ್ಯಕ್ಷ ಗಣೇಶ್, ಉಪಾಧ್ಯಕ್ಷೆ ಜಯಮ್ಮ, ಕಾರ್ಯದರ್ಶಿ ಹನುಮಯ್ಯ, ಖಜಾಂಚಿ ಗುಜ್ಜಯ್ಯ, ಸರಗೂರು ಹೋಬಳಿ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷೆ ಶಿವಮ್ಮ, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಮಹದೇವಮ್ಮ, ಕಂದಲಿಕೆ ಹೋಬಳಿ ಅಧ್ಯಕ್ಷ ಬಸವರಾಜ್, ಉಪಾಧ್ಯಕ್ಷ ನಾಗಯ್ಯ, ಕಾರ್ಯದರ್ಶಿ ಸವಿತಾ, ಖಜಾಂಚಿಯಾಗಿ ನಿಂಗರಾಜ್ ಆಯ್ಕೆಯಾದರು.

ರಾಜ್ಯಾಧ್ಯಕ್ಷ ಮಹದೇವ ಮತ್ತು ಮಾಜಿ ಅಧ್ಯಕ್ಷರಾದ ಶಿವಣ್ಣ, ಮಲ್ಲಿಗಮ್ಮ ಆಯ್ಕೆ ಪ್ರಕ್ರಿಯೆ ನಡೆಸಿದರು.

ಜೀವಿಕ ರಾಜ್ಯ ಸಂಘಟನಾ ಸಂಚಾಲಕ ಉಮೇಶ್ ಮಾತನಾಡಿದರು. ಜೀವಿಕ ಜಿಲ್ಲಾ ಸಂಚಾಲಕ ಬಸವರಾಜು, ತಾಲೂಕು ಸಂಚಾಲಕ ಚಂದ್ರಶೇಖರ ಮೂರ್ತಿ, ಶಿವರಾಜ್, ನಟರಾಜ್, ಶ್ರೀನಿವಾಸ್, ಮಹದೇವ, ಶಿವಣ್ಣ, ಮಲ್ಲಿಗಮ್ಮ, ಗೋಪಾಲ್, ಮಂಜುನಾಥ್, ಲಕ್ಷ್ಮಮ್ಮ, ಜಯಮ್ಮ, ನಂಜುಂಡಯ್ಯ, ಸೋಮೇಶ್ ಇತರರಿದ್ದರು.

# ಹುಣಸೂರಿನಲ್ಲಿ ಹಾಡಿ ಸ್ಥಾಪಿಸಲು ಮನವಿ

ಹುಣಸೂರು, ಜೂ.2– ನಗರದಲ್ಲಿ ಹಾಡಿ ಸ್ಥಾಪನೆಗೆ ನಗರಸಭೆ ಕ್ರಮ ವಹಿಸಬೇಕು ಎಂದು ಆದಿವಾಸಿ ಮುಖಂಡರು ನಗರಸಭಾಧ್ಯಕ್ಷ ಗಣೇಶ್ ಕುಮಾರ ಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ನಗರದ ಡೀಡ್ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಸಂಸ್ಥೆ ನಿರ್ದೇಶಕ ಡಾ.ಎಸ್.ಶ್ರೀಕಾಂತ್, 4 ದಶಕಗಳ ಹಿಂದೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ ಹೊರದೂಡಲ್ಪಟ್ಟ ಆದಿವಾಸಿಗಳು ಇಂದಿಗೂ ಅತಂತ್ರ ಸ್ಥಿತಿಯಲ್ಲೇ ಬದುಕುತ್ತಿದ್ದಾರೆ. ಕಾಡಿನಿಂದ ಆಳುವ ಸರ್ಕಾರಗಳನ್ನು ನಂಬಿ ಹೊರ ಬಂದಿರುವ ಆದಿವಾಸಿಗಳ ಬದುಕಿಗೆ ನಾಗರಿಕ ಸಮಾಜ ಆಸರೆಯಾಗಬೇಕಿದೆ. ನಗರ ವ್ಯಾಪ್ತಿ ಹಾಡಿಗಳ ನಿರ್ಮಾಣದ ಮೂಲಕ ಗಿರಿಜನರ ಬದುಕನ್ನು ಮುಖ್ಯವಾಹಿನಿಗೆ ತರುವ ಕಾರ್ಯದೊಂದಿಗೆ ಆದಿವಾಸಿಗಳ ಸಮೃದ್ಧ ಸಂಸ್ಕೃತಿ, ಪರಂಪರೆ ಪರಿಚಯ ನಾಗರಿಕ ಸಮಾಜಕ್ಕೂ ಆಗಬೇಕಿದೆ. ಈ ನಿಟ್ಟಿನಲ್ಲಿ ನಗರದಲ್ಲಿ ಹಾಡಿ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಆದಿವಾಸಿಗಳ ಈ ಬೇಡಿಕೆ ನ್ಯಾಯಯುತ ಮತ್ತು ಸಂವಿಧಾನದ ಆಶಯಕ್ಕೆ ತಕ್ಕದಾಗಿದೆ. ಹಾಡಿ ನಿರ್ಮಾಣ ಕುರಿತು ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದ ಯದುವೀರ್‌ರೊಂದಿಗೆ ಸಮಾಲೋಚನೆ ನಡೆಸಿ ಕ್ರಮ ವಹಿಸುತ್ತೇನೆ ಎಂದರು.

ಇದೇ ವೇಳೆ ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಗಿಡಮೂಲಿಕೆ ಔಷಧ ಮಾಗ್ರಮ್ಮ, ನೆರಳೇಕಟ್ಟೆ ಕೆಂಪಮ್ಮ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಪ್ರಾಂಶುಪಾಲ ಪ್ರೊ.ಹೆಚ್.ಆರ್.ಸಿದ್ದೇಗೌಡ, ನಗರಸಭಾ ಸದಸ್ಯ ದೇವರಾಜು, ಆದಿವಾಸಿ ಪಾರ್ಲಿಮೆಂಟ್ ಅಧ್ಯಕ್ಷ ಹರ್ಷ, ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಜಯಪ್ಪ, ವಿಠಲ್, ಶಿವಣ್ಣ, ಹೆತ್ತಪ್ಪ, ಪ್ರಕಾಶ್, ಶಾರದ ವಿವಿಧ ಹಾಡಿಗಳ ಮುಖಂಡರು ಪಾಲ್ಗೊಂಡಿದ್ದರು.


ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

# ಕರೋಹಟ್ಟಿ ಗ್ರಾಮ ಪಂಚಾಯಿತಿಗೆ ಪುಟ್ಟಬಸಮ್ಮ ಅಧ್ಯಕ್ಷೆ

ತಿ.ನರಸೀಪುರ, ಜೂ.2– ತಾಲೂಕಿನ ಕರೋಹಟ್ಟಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಯರಗನಹಳ್ಳಿ ಗ್ರಾಮದ ಪುಟ್ಟಬಸಮ್ಮ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ಮಂಜುಳಾ ಅವರ ರಾಜೀನಾಮೆಯಿಂದ ತೆರವಾದ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಪುಟ್ಟಬಸಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಸ್.ಮಂಜುನಾಥ್ ಪ್ರಕಟಿಸಿದರು.

ಚುನಾವಣಾ ಸಭೆಗೆ ಉಪಾಧ್ಯಕ್ಷ ರೇವಣ್ಣ, ನಿಕಟಪೂರ್ವ ಅಧ್ಯಕ್ಷೆ ಮಂಜುಳ, ಸದಸ್ಯ ಕೆ.ಬಿ.ಜಗದೀಶ್, ಯರಗನಹಳ್ಳಿ ಸುರೇಶ, ಕೆ.ಎನ್.ನಾಗರಾಜು, ಎಸ್.ಎಲ್.ಜಯಶ್ರೀ, ನಂದಿನಿ, ಮಮತ, ನಾಗರಾಜು, ಪ್ರಭು, ಸುಶೀಲಮ್ಮ ಮಂಜು ಹಾಜರಾಗಿ ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಉಳಿದಂತೆ ಸದಸ್ಯರಾದ ಸವಿತಾ, ದಿವ್ಯ, ಪುಟ್ಟಸ್ವಾಮಿ, ಸಿದ್ದಮ್ಮ, ಪ್ರಕಾಶ್, ಗೋವಿಂದ ಗೈರಾಗಿದ್ದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ನಮ್ಮ ಗ್ರಾಮದ ಪಂಚಾಯ್ತಿಯು ಆದರ್ಶ ಗ್ರಾಪಂಗೆ ಆಯ್ಕೆಯಾಗಿದೆ. ಇದಕ್ಕೆ ಸದಸ್ಯರು ಕಾರಣ. ಮೊದಲಿನಿಂದಲೂ ಗ್ರಾಪಂನಲ್ಲಿ ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಲಾಗುತ್ತಿದೆ. ಗ್ರಾಮಕ್ಕೆ ತಕ್ಕಂತೆ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ ನೀಡಿ ಸಮಾನತೆ ಕಾಪಾಡಲಾಗಿದ್ದು, ಕೊನೆ ಅವಧಿ ಅಧ್ಯಕ್ಷ ಸ್ಥಾನವನ್ನು ಯರಗನಹಳ್ಳಿ ಗ್ರಾಮಕ್ಕೆ ನೀಡಲಾಗಿದ್ದು, ಅಧ್ಯಕ್ಷರು ಇತರೆ ಸದಸ್ಯರೊಡಗೂಡಿ ಗ್ರಾಪಂಗೆ ಮೂಲ ಸೌಕರ್ಯ ಕಲ್ಪಿಸುವ ಜೊತೆಗೆ ಹೆಚ್ಚಿನ ಅಭಿವೃದ್ಧಿಗೆ ಕ್ರಿಯಾಶೀಲವಾಗಿ ಕೆಲಸ ಮಾಡಬೇಕಿದೆ. ಸದಸ್ಯರೆಲ್ಲರೂ ನೂತನ ಸದಸ್ಯರಿಗೆ ಸಹಕಾರ ನೀಡ ಬೇಕೆಂದು ಮನವಿ ಮಾಡಿದರು.

ಈ ವೇಳೆ ಕರೋಹಟ್ಟಿ ಪ್ರಭುಸ್ವಾಮಿ, ಕೇತಹಳ್ಳಿ ಪ್ರಭುಸ್ವಾಮಿ, ಡಿಎಸ್‌ಎಸ್ ಮುಖಂಡ ಸೋಮಣ್ಣ, ಪರಮೇಶ್ವರಪ್ಪ, ಯಜಮಾನ್ ಬಸವರಾಜು, ನಾಗರಾಜು, ರಾಮಯ್ಯ, ಯರಗನಹಳ್ಳಿ ಗುರುಮಲ್ಲ, ನೀಲಯ್ಯ, ಮಾದೇಶ, ನಾಗಯ್ಯ, ಮಹದೇವಯ್ಯ, ಕೆಂಡಗಣ್ಣಸ್ವಾಮಿ, ಪುರುಷೋತ್ತಮ, ಸೋಮೇಶ್, ಶಿವಣ್ಣ, ಕರಿಮಹದೇವಯ್ಯ, ಪಂಚಾಯ್ತಿ ಗಣಕ ವಿಭಾಗದ ಶೈಲ ಸೇರಿದಂತೆ ಇತರರಿದ್ದರು.


ಕರೋಹಟ್ಟಿ ಗ್ರಾಪಂ ಅಧ್ಯಕ್ಷೆಯಾಗಿ ಪುಟ್ಟಬಸಮ್ಮ ಅವಿರೋಧವಾಗಿ ಆಯ್ಕೆಯಾದರು.

# ಮಕ್ಕಳಿಗೆ ಶಿಕ್ಷಣದ ಜೊತೆ ಸಂಸ್ಕಾರದ ಅರಿವು ಅಗತ್ಯ

## ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು

ನಂಜನಗೂಡು, ಜೂ.2– ಮಕ್ಕಳು ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯಲಿ ಎಂಬುದಷ್ಟೇ ಪೋಷಕರ ಆದ್ಯತೆಯಾಗದೇ ಸಂಸ್ಕಾರದ ಅರಿವು ಮೂಡಿಸುವ ಕಡೆಗೂ ಪೋಷಕರು ಜವಾಬ್ದಾರಿ ತೋರ ಬೇಕಿದೆ. ಆಗಮಾತ್ರ ಮಕ್ಕಳು ಸಾರ್ಥಕ ಬದುಕು ರೂಪಿಸಿಕೊಳ್ಳಲು ನೆರವಾಗುತ್ತದೆ ಎಂದು ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಯೋಗ ಮಹಾಮನೆಯಲ್ಲಿ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ನಂಜನಗೂಡು ಯೋಗ ಫೌಂಡೇಶನ್ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳು ಪರೀಕ್ಷೆಯಲ್ಲಿ ಎಷ್ಟು ಅಂಕ ಪಡೆಯುತ್ತಾರೆ ಎಂಬುದರ ಕಡೆಗೆ ಪೋಷಕರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಅದು ತಪ್ಪೂ ಅಲ್ಲ. ಅಂಕ ಗಳಿಕೆಗಷ್ಟೇ ಮಕ್ಕಳನ್ನು ಸೀಮಿತಗೊಳಿಸದೆ ಒಳ್ಳೆಯ ಸನ್ನಡತೆ ಕಲಿಸುವ ನಿಟ್ಟಿನಲ್ಲಿ ಸಂಸ್ಕಾರ, ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆಯೂ ಮಕ್ಕಳಿಗೆ ಅರಿವು ಮೂಡಿಸಬೇಕಿದೆ. ಇದೆಲ್ಲವೂ ಶಾಲೆಗಳಿಂದ ಹೆಚ್ಚು ನಿರೀಕ್ಷೆ ಮಾಡಲು ಆಗಲ್ಲ. ಹಾಗಾಗಿ ಪೋಷಕರೆ ಈ ಬಗ್ಗೆ ಕಾಳಜಿ ತೋರಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ನೆರವಾಗಬೇಕು. ಆಗಷ್ಟೇ ಮಕ್ಕಳು ಒಳ್ಳೆಯ ಜೀವನ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಎಲ್ಲಾ ರಂಗಗಳಲ್ಲೂ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳಿರುತ್ತವೆ. ಸಾಮಾನ್ಯವಾಗಿ ನಮ್ಮ ಮನಸ್ಸು ಋಣಾತ್ಮಕ ಅಂಶಗಳ ಕಡೆಗೆ ಹೆಚ್ಚು ಗಮನ ಸೆಳೆಯುತ್ತಿರುತ್ತದೆ. ಋಣಾತ್ಮಕ ಅಂಶಗಳ ಕಡೆಗೆ ಹೆಚ್ಚು ಕೇಂದ್ರಿಕರಿಸಿಕೊಂಡರೆ ಮಕ್ಕಳು ನಿರ್ದಿಷ್ಟ ಗುರಿ ಮುಟ್ಟಲು ಸಾಧ್ಯವಾಗುವುದಿಲ್ಲ. ನಮಗೆ ಅವಶ್ಯವಿರುವ ಧನಾತ್ಮಕ ವಿಷಯಗಳ ಕಡೆಗೆ ಹೆಚ್ಚು ಕೇಂದ್ರೀಕರಿಸಿಕೊಂಡು ಸಾಗಿದರೆ ಗುರಿ ತಲುಪಬಹುದಾಗಿದೆ ಎಂದು ಕಿವಿಮಾತು ಹೇಳಿದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ ಮಾತನಾಡಿ, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪ್ರತಿ ಮಗುವಿನ ಶೈಕ್ಷಣಿಕ ಜೀವನದಲ್ಲಿ ಎದುರಾಗುವ ಪ್ರಮುಖ ಘಟ್ಟ, ಇಂತಹ ಸಂದರ್ಭದಲ್ಲಿ ಮಕ್ಕಳ ಪರಿಶ್ರಮವನ್ನು ಗುರುತಿಸಿ ಪ್ರೋತ್ಸಾಹಿಸುವ ಜೊತೆಗೆ ಅವರ ಜೀವನವನ್ನು ಸರಿದಾರಿಯಲ್ಲಿ ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಪ್ರೇರೇಪಿಸುವ ಉದ್ದೇಶ ನಮ್ಮದಾಗಿದೆ. ಈ ಕಾರಣಕ್ಕಾಗಿಯೇ ಪ್ರತಿ ವರ್ಷ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಿಕೊಂಡು ಬರಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಯೋಗ ಬಂಧುಗಳ ಮಕ್ಕಳನ್ನು ಗೌರವಿಸಲಾಯಿತು. ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ, ಕಾರ್ಯದರ್ಶಿ ಎನ್.ಆರ್.ಗಣೇಶ್ ಮೂರ್ತಿ, ಯೋಗ ಫೌಂಡೇಶನ್ ಅಧ್ಯಕ್ಷಪ್ರಕಾಶ್ ಉಪಸ್ಥಿತರಿದ್ದರು.


ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಸನ್ಮಾನಿಸಿದರು

# ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಲೋಕಾರ್ಪಣೆ

ತಿ.ನರಸೀಪುರ, ಜೂ.2– ತಾಲೂಕಿನ ದೊಡ್ಡೆಬಾಗಿಲು ಮೋಳೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

ಸರಗೂರು ಮಠದ ರಾಜು ಸ್ವಾಮಿ ಹಾಗೂ ಸಿದ್ದಪ್ಪಸ್ವಾಮಿ ಐಯ್ಯನವರು ಗ್ರಾಮಸ್ಥರ ಸಮ್ಮುಖದಲ್ಲಿ 2.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮಹದೇಶ್ವರಸ್ವಾಮಿ ದೇವಾಲಯ ಉದ್ಘಾಟಿಸಿದರು.

ದೇವಾಲಯ ಉದ್ಘಾಟನೆ ಹಿನ್ನೆಲೆಯಲ್ಲಿ ಶನಿವಾರದಿಂದಲೇ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ ಹಮ್ಮಿಕೊಳ್ಳಲಾಗಿತ್ತು. ಶನಿವಾರ ಅಂಕುರಾರ್ಪಣೆ, ರಕ್ಷಾ ಬಂಧನ, ಯಾಗ ಶಾಲಾ ಪ್ರವೇಶ, ಅನುಜ್ಞೆ, ಮೃತ್ತಿಕಾ ಸಂಗ್ರಹಣೆ, ಭಾನುವಾರ ಬೆಳಗ್ಗೆ ನಿತ್ಯ ಹೋಮ, ಧಾನ್ಯಾಧಿವಾಸ, ವಾದಾಧಿವಾಸ, ಸಂಜೆ ನಿತ್ಯ ಹೋಮ, ಜಲಾಶಿವಾಸ, ಶಯಾಧಿವಾಸ ಕಾರ್ಯಕ್ರಮಗಳು ನಡೆದವು. ಸೋಮವಾರ ಬೆಳಗ್ಗೆ ನಿತ್ಯ ಹೋಮ, ಅಭಿಷೇಕ, ಪ್ರಧಾನ ಹೋಮ, ಪ್ರತಿಷ್ಠಾವಿಧಿ, ಕುಂಭಾಭಿಷೇಕ, ಮಂಗಳಾರತಿ ಹಾಗೂ ತೀರ್ಥ ಪ್ರಸಾದ ಕಾರ್ಯಕ್ರಮ ಜರುಗಿದವು. ದೇವಸ್ಥಾನವನ್ನು ವಿವಿಧ ಹೂ, ಧಾನ್ಯ ಹಾಗೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು. ಸಾವಿರಾರು ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನ ಉದ್ಘಾಟನೆ ಅಂಗವಾಗಿ ಇಡೀ ಗ್ರಾಮ ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿತ್ತು. ದೊಡ್ಡೆಬಾಗಿಲು ಮೋಳೆ ಸೇರಿದಂತೆ ಆಸುಪಾಸಿನ ಹಳ್ಳಿಯ ಭಕ್ತರು ತಂಡೋಪತಂಡವಾಗಿ ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು.

ತಾಪಂ ಮಾಜಿ ಉಪಾಧ್ಯಕ್ಷ ಗಿರೀಶ್ ಮಾತನಾಡಿ, ದೊಡ್ಡೇಬಾಗಿಲು ಮೋಳೆ ಗ್ರಾಮಸ್ಥರು ಹಾಗೂ ಭಕ್ತರ ದೇಣಿಗೆಯಿಂದ ಉಪ್ಪಾರ ಸಮಾಜ ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ನಿರ್ಮಿಸಿದೆ. ಸರಗೂರು ಮಠದ ಐಯ್ಯನವರಾದ ಶ್ರೀರಾಜುಸ್ವಾಮಿ, ರಂಗಸ್ವಾಮಿ, ಶ್ರೀಮಹದೇವ ಸ್ವಾಮಿ, ಶ್ರೀಸಿದ್ದಪ್ಪ ಸ್ವಾಮಿಯವರು ಕಾರ್ಯಕ್ರಮಕ್ಕೆ ಆಗಮಿಸಿ ಆಶೀರ್ವಚನ ನೀಡಿದ್ದಾರೆ. ಹಾಗಾಗಿ ದೇವಸ್ಥಾನದ ನಿರ್ಮಾಣಕ್ಕೆ ದೇಣಿಗೆ ನೀಡಿದ ಸಮಾಜದ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಗ್ರಾಮದ ಯಜಮಾನರಾದ ರಮೇಶ್, ನಾಗರಾಜು, ಮಹೇಶ್, ಸಿದ್ದಶೆಟ್ಟಿ, ಮಹದೇವಶೆಟ್ಟಿ, ಡಿ.ಪಿ. ನಾಗರಾಜು, ರಾಜೇಶ್, ಚಂದ್ರಶೇಖರ್, ದೊಡ್ಡಮಾದಶೆಟ್ಟಿ, ಕೆಂಚಶೆಟ್ಟಿ, ಜವರಶೆಟ್ಟಿ ಇತರರಿದ್ದರು.


ದೊಡ್ಡೇಬಾಗಿಲು ಮೋಳೆ ಗ್ರಾಮದಲ್ಲಿ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಉದ್ಘಾಟಿಸಲಾಯಿತು.



## ಸನ್ಮಾನ

ತಿ.ನರಸೀಪುರ ತಾಲೂಕಿನ ವಾಟಾಳು ಗ್ರಾಮದ ಶ್ರೀಸೂರ್ಯ ಸಿಂಹಾಸನ ಮಠದಲ್ಲಿ ಸೋಮವಾರ ಜಾಗತಿಕ ಸಾಧಕರ ಮಂಡಳಿ ವತಿಯಿಂದ ದೆಹಲಿಯಲ್ಲಿ ಸಮಾಜ ಸೇವೆಗೆ ಗೌರವ ಡಾಕ್ಟರೇಟ್ ಪಡೆದ ಬಿ. ಮನ್ಸೂರ್ ಆಲಿ ಅವರನ್ನು ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು. ಶಿವಕುಮಾರ ಸ್ವಾಮೀಜಿ, ಕುಮಾರ, ಅಕ್ಬರ್ ಪಾಷ ಇದ್ದರು.

# ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಉಚಿತ ಪ್ರವೇಶಾವಕಾಶ

ಮೈಸೂರು, ಜೂ.2– ಮೈಸೂರು ತಾಲೂಕು ಜಯಪುರ ಗ್ರಾಮದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ 2025–26ನೇ ಸಾಲಿನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿ, ಪ.ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿ ಗಳಿಗೆ ಉಚಿತ ಪ್ರವೇಶಾತಿ ಲಭ್ಯವಿದೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನಲ್ಲಿ ಸುಸಜ್ಜಿತ ಕಟ್ಟಡ, ಡೈನಿಂಗ್ ಹಾಲ್, ಉತ್ತಮ ಶೌಚಾಲಯ, ಕುಡಿಯುವ ನೀರು, ಸ್ನಾನಕ್ಕೆ ಬಿಸಿ ನೀರು, ಉತ್ತಮ ಕೊಠಡಿಗಳು, ಪೌಷ್ಠಿಕಾಂಶಯುಕ್ತ ಉಪಹಾರ, ಊಟ, ಕಾಫಿ, ಟೀ, ಬಾದಾಮಿ ಹಾಲು, ವಾರಕ್ಕೆ ಮೂರು ದಿನ ಮೊಟ್ಟೆ, ಬಾಳೆಹಣ್ಣು, ವಾರಕ್ಕೊಮ್ಮೆ ಚಿಕನ್ ಊಟ ಸೇರಿದಂತೆ ಇನ್ನಿತರ ಸೌಲಭ್ಯ ಲಭ್ಯವಿದೆ. ವಿದ್ಯಾರ್ಥಿ ನಿಲಯಕ್ಕೆ ಸೇರಬಯಸುವ ವಿದ್ಯಾರ್ಥಿಗಳು 2ಪಾಸ್‌ಪೋರ್ಟ್ ಸೈಜ್ ಫೋಟೋ, ಆಧಾರ್ ಕಾರ್ಡ್, ತಂದೆ–ತಾಯಿ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಬಿಪಿಎಲ್ ಕಾರ್ಡ್, ಹಿಂದಿನ ತರಗತಿ ಅಂಕಪಟ್ಟಿಯನ್ನು ಅರ್ಜಿ ನಮೂನೆ ಜೊತೆ ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗಾಗಿ 9880820787, 9901171881ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಕೆ.ಆರ್.ನಗರದಲ್ಲಿ ನಮ್ಮ ಕ್ಲಿನಿಕ್ ಉದ್ಘಾಟನೆ

ಕೆ.ಆರ್.ನಗರ, ಜೂ.2– ದೇಶ ಮತ್ತು ರಾಜ್ಯಗಳು ಅಭಿವೃದ್ಧಿ ಪಥದತ್ತ ಸಾಗಲು ಶಿಕ್ಷಣದ ಜೊತೆಗೆ ಜನರ ಆರೋಗ್ಯ ಸ್ಥಿತಿಯೂ ಪ್ರಮುಖ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ 7ನೇ ವಾರ್ಡ್‌ನಲ್ಲಿ ಸೋಮವಾರದಿಂದ ಕಾರ್ಯಾರಂಭ ಮಾಡಿದ ನಮ್ಮ ಕ್ಲಿನಿಕ್ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಸೂಕ್ಷ್ಮ ವಿಚಾರಗಳನ್ನು ಅರಿತಿರುವ ರಾಜ್ಯ ಸರ್ಕಾರ ಆ ದಿಸೆಯಲ್ಲಿ ಕಟಿಬದ್ಧವಾಗಿ ಕೆಲಸ ಮಾಡುತ್ತಿದೆ ಎಂದರು.


ಸಾರ್ವಜನಿಕರಿಗೆ ಅನುಕೂಲವಾಗಲಿ ಎಂಬ ಸದುದ್ದೇಶದಿಂದ ನಮ್ಮ ಕ್ಲಿನಿಕ್ ಆರಂಭಿಸಿದ್ದು, ಈ ಹಿಂದೆ ಈಶ್ವರ ನಗರದಲ್ಲಿ ಕ್ಲಿನಿಕ್ ತೆರೆಯಲಾಗಿತ್ತು. ಈಗ ಇಲ್ಲಿಯೂ ಕಾರ್ಯಾರಂಭ ಮಾಡಿದ್ದು, ಈ ಬಾಗದ ವಾರ್ಡ್‌ಗಳ ಜನತೆ ಸದುಪಯೋಗ ಮಾಡಿಕೊಳ್ಳಬೇಕೆಂದರು.

ನಮ್ಮ ಕ್ಲಿನಿಕ್‌ಗಳಲ್ಲಿ ಪ್ರಮುಖವಾಗಿ 12 ಸೇವೆಗಳು ದೊರೆಯಲಿದ್ದು, ಇದರಿಂದ ದೂರದ ಆಸ್ಪತ್ರೆಗಳಿಗೆ ತೆರಳುವುದು ತಪ್ಪಿ ಸಮಯ ಉಳಿಯುವುದರೊಂದಿಗೆ ತ್ವರಿತ ಚಿಕಿತ್ಸೆ ಸಿಗಲಿದೆ. ಮುಂದಿನ ದಿನಗಳಲ್ಲಿ ಕ್ಲಿನಿಕ್ ಆವರಣದಲ್ಲಿ ವಾರಕ್ಕೆ 2 ಬಾರಿ ಯೋಗಾಸನ ಶಿಬಿರ ನಡೆಸಲಿದ್ದು, ಇಲ್ಲಿಗೆ ಅಗತ್ಯವಿರುವ ಇತರ ಸವಲತ್ತುಗಳನ್ನು ಒದಗಿಸುವ ಭರವಸೆ ನೀಡಿದರು.

ಆಂಜನೇಯ ಬಡಾವಣೆಗೆ ಹೊಂದಿಕೊಂಡಿರುವ ಕಂತೇನಹಳ್ಳಿ ಕೆರೆ ಅಭಿವೃದ್ಧಿಗೆ 4 ಕೋಟಿ ಅನುದಾನ ನೀಡಿದ್ದು, ಅದನ್ನು ಕಲ್ಯಾಣಿಯಾಗಿ ಮಾರ್ಪಡಿಸಿ ಅಲ್ಲಿನ ಏರಿ ಮೇಲೆ ಸುಂದರ ಉದ್ಯಾನ ನಿರ್ಮಿಸುವುದಾಗಿ ಪ್ರಕಟಿಸಿದರು.

ಈ ಎಲ್ಲಾ ಅಭಿವೃದ್ಧಿ ಕೆಲಸಗಳ ಜೊತೆಗೆ ಪಟ್ಟಣದ ಹೃದಯ ಭಾಗದಲ್ಲಿರುವ ಪುರಸಭೆ ಬಯಲು ರಂಗ ಮಂದಿರದ ಸುತ್ತ ತಡೆಗೋಡೆ ನಿರ್ಮಿಸಿ ಅಲ್ಲಿನ ಒಂದು ಭಾಗದಲ್ಲಿ ಪುಟ್ಟ ಉದ್ಯಾನ ನಿರ್ಮಾಣ ಮಾಡಿ ಆ ಸ್ಥಳದಲ್ಲಿ ಡಾ. ರಾಜಕುಮಾರ್, ಪಾರ್ವತಮ್ಮ ರಾಜಕುಮಾರ್ ಮತ್ತು ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಅವರ ಪ್ರತಿಮೆ ನಿರ್ಮಿಸುವುದಾಗಿ ನುಡಿದರು.


ಪುರಸಭೆ ಉಪಾಧ್ಯಕ್ಷೆ ವಸಂತಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಶಂಕರ್, ಸದಸ್ಯರಾದ ಸಂತೋಷ್‌ಗೌಡ, ಕೆ.ಜಿ. ಸುಬ್ರಹ್ಮಣ್ಯ, ಪ್ರಕಾಶ್, ನಟರಾಜು, ಶಂಕರ ಸ್ವಾಮಿ, ಕೆ.ಎಲ್. ಜಗದೀಶ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಎಂ.ಎಸ್. ಮಹದೇವ್, ಉದಯಶಂಕರ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಹೆಚ್.ಹೆಚ್. ನಾಗೇಂದ್ರ, ಎಂ.ನಾಗರತ್ನ ರೇವಣ್ಣ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ. ರಮೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಕೆಂಚಿಮಂಜು, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಆಂಜನೇಯ ಬಡಾವಣೆ ಡೈರಿ ಅಧ್ಯಕ್ಷ ಎಸ್.ಮಹದೇವ್, ತಾಲೂಕು ಆರೋಗ್ಯಾ ಧಿಕಾರಿ ಡಾ.ಡಿ.ನಟರಾಜು, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಬಿ.ಜೆ.ನವೀನ್ ಕುಮಾರ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಸಿರಾಜ್ ಅಹಮದ್, ನಮ್ಮ ಕ್ಲಿನಿಕ್ ವೈದ್ಯ ಡಾ.ನೇತ್ರೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಕೆ.ವಿ.ರಮೇಶ್, ಎಸ್.ಎಂ.ಗಂಗಾಧರ್ ಮತ್ತಿತರರಿದ್ದರು.


ಕೆ.ಆರ್.ನಗರದಲ್ಲಿ ನಮ್ಮ ಕ್ಲಿನಿಕ್ ಅನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

> ನಮ್ಮ ಕ್ಲಿನಿಕ್ ಆರಂಭಿಸಿರುವುದರ ಜೊತೆಗೆ ಮೂಲ ಸವಲತ್ತು ಕಲ್ಪಿಸಲು ಹಾಗೂ ವಾರ್ಡ್, ಉದ್ಯಾನವನದ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ. ಇಲ್ಲಿಗೆ ಬರುವ ಸಾರ್ವಜನಿಕರೊಂದಿಗೆ ವೈದ್ಯರು ಹಾಗೂ ಸಿಬ್ಬಂದಿ ಸೌಜನ್ಯದಿಂದ ವರ್ತಿಸಿ ಉತ್ತಮ ಚಿಕಿತ್ಸೆ ನೀಡಬೇಕು. ಯಾವುದೇ ಸಹಕಾರ ಮತ್ತು ಸಹಾಯ ಅಗತ್ಯವಿದ್ದರೂ ಒದಗಿಸಲಾಗುವುದು. – ಡಿ.ಶಿವುನಾಯಕ್, ಪುರಸಭಾಧ್ಯಕ್ಷ.

# ಅಂತಾರಾಷ್ಟ್ರೀಯ ಯುವ ಶೃಂಗ ಸಭೆಗೆ ಆಯ್ಕೆ

ಹುಣಸೂರು, ಜೂ.2– ಮಂಗಳೂರು ವಿವಿಯಲ್ಲಿ ನಡೆಯುವ 2025ನೇ ಅಂತಾರಾಷ್ಟ್ರೀಯ ಯುವ ಶೃಂಗ ಸಭೆಯಲ್ಲಿ ಎನ್‌ಎಸ್‌ಎಸ್ ಸ್ವಯಂ ಸೇವಕ ಪ್ರತಿನಿಧಿಯಾಗಿ ತಾಲೂಕಿನ ರತ್ನಪುರಿಯ ವಿಎಸ್‌ಎಸ್‌ಎನ್ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿಎ ವಿದ್ಯಾರ್ಥಿನಿ ಆರ್.ಎಂ.ಲಿಖಿತಾಂಬ ಮೈಸೂರು ವಿವಿಯನ್ನು ಪ್ರತಿನಿಧಿಸಲಿದ್ದಾರೆ.



ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಮಂಗಳೂರಿನ ಯೆನೆಪೋಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಜೂ.5 ಮತ್ತು 6ರಂದು ನಡೆಯುವ ಅಂತಾರಾಷ್ಟ್ರೀಯ ಯುವ ಶೃಂಗಸಭೆಯಲ್ಲಿ ಪ್ರಪಂಚ ದಾದ್ಯಂತ ಯುವ ನಾಯಕರು, ವೃತ್ತಿ ಪರರು ಮತ್ತು ತಜ್ಞರನ್ನು ಒಟ್ಟುಗೂಡಿಸಿ ಯುವಜನರು ಹೇಗೆ ಹೊಸತನವನ್ನು ಕಂಡು ಕೊಳ್ಳಬಹುದು, ಸಕಾರಾತ್ಮಕ ಬದಲಾವಣೆಗೆ ಪ್ರೇರಣೆ ನೀಡಬಹುದು ಹಾಗೂ ಸಮಾಜದ ಮೇಲೆ ಗಮನಾರ್ಹ ಉತ್ತಮ ಪರಿಣಾಮ ಬೀರುವ ವಿಷಯಗಳ ಕುರಿತ ವಿಚಾರ ವಿನಿಯಮಯ ಮಾಡಿಕೊಳ್ಳುವ ಗುರಿಯನ್ನು ಹೊಂದಿರುವ ಸಮಕಾಲಿನ ಸವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಬಗೆಗಿನ ಈ ಸಭೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿ ಆರ್.ಎಂ.ಲಿಖಿತಾಂಬ ಭಾಗವಹಿಸುತ್ತಿರುವುದು ಕಾಲೇಜಿನ ಹೆಮ್ಮೆ ಎಂದು ಕಾಲೇಜಿನ ಪ್ರಾಂಶುಪಾಲ ಶಿವಕುಮಾರ್ ತಿಳಿಸಿದ್ದಾರೆ.

## ಹೆಚ್.ಎಸ್.ನಳಿನಿ ನಿಧನ



ನಂಜನಗೂಡು, ಜೂ.2– ನಗರದ ಅಂಗಡಿ ಬೀದಿ ನಿವಾಸಿ, ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮಾಜಿ ಧರ್ಮದರ್ಶಿ ಹೆಚ್.ವಿ.ಸುರೇಶ್ ಅವರ ಪತ್ನಿ ಹೆಚ್.ಎಸ್.ನಳಿನಿ(72) ಸೋಮವಾರ ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಕಪಿಲಾ ನದಿ ಬಳಿಯ ಹದಿನಾರು ಕಾಲು ಮಂಟಪ ಸಮೀಪದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕಮಲ ಹಾಸನ್ ಹೇಳಿಕೆ ವಿರುದ್ಧ ಮೈಸೂರಲ್ಲಿ ಆಕ್ರೋಶ

# ಕಮಲಹಾಸನ್ ಚಿತ್ರ ನಿಷೇಧಕ್ಕೆ ಆಗ್ರಹಿಸಿ ವಾಟಾಳ್ ಪ್ರತಿಭಟನೆ



ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.2(ಜಿಎ)–ತಮಿಳಿನಿಂದ ಕನ್ನಡ ಭಾಷೆ ಹುಟ್ಟಿದೆ ಎಂಬ ನಟ ಕಮಲಹಾಸನ್ ಹೇಳಿಕೆ ಖಂಡಿಸಿ ಸೋಮವಾರ ಹಾರ್ಡಿಂಗ್ ವೃತ್ತದ ಬಳಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಟ ಕಮಲ್ ಹಾಸನ್ ಅವರ ಚಲನಚಿತ್ರಗಳು ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಬಿಡುಗಡೆಯಾಗಬಾರದು. ಅವರನ್ನು ಕರ್ನಾಟಕದಿಂದ ಬಹಿಷ್ಕರಿಸಬೇಕು. ಈ ವಿಚಾರದಲ್ಲಿ ಕನ್ನಡ ಚಿತ್ರರಂಗ ಗಂಭೀರ ಚಿಂತನೆ ಮಾಡಬೇಕಿದೆ ಎಂದು ಆಗ್ರಹಿಸಿದರು.

ರಾಜ್ಯದ ಜನರು ಕಮಲ ಹಾಸನ್ ಕ್ಷಮೆ ಕೇಳಬೇಕೆಂದು ಆಗ್ರಹಿಸುತ್ತಿದ್ದಾರೆ. ಆದರೆ ಕಮಲ್ ಹಾಸನ್ ಉದ್ಧಟತನ ಮಾಡುತ್ತಿದ್ದಾರೆ. ಕಮಲ್ ಹಾಸನ್ ವಿರುದ್ಧ ಸಿಎಂ ಮೊಕದ್ದಮೆ ಹಾಕಬೇಕು. ಕನ್ನಡ ಭಾಷೆ ವಿಚಾರದಲ್ಲಿ ರಾಜಕಾರಣಿಗಳು, ನಟರು ಬೀದಿಗೆ ಬರಬೇಕು. ಒಂದು ವೇಳೆ ಕಮಲ ಹಾಸನ್ ಸಿನಿಮಾ ಬಿಡುಗಡೆಯಾದರೆ ಭಾರೀ ಹೋರಾಟ ಮಾಡುತ್ತೇವೆ. ಎಲ್ಲಾ ಕನ್ನಡ ಪರ ಸಂಘಟನೆಗಳು ಸೇರಿ ಕರ್ನಾಟಕ ಬಂದ್ ಮಾಡುತ್ತೇವೆ. ತಮಿಳುನಾಡಿನ ಎಲ್ಲಾ ರಾಜಕೀಯ ಪಕ್ಷಗಳು ಇದನ್ನು ಖಂಡಿಸಬೇಕು ಎಂದು ಒತ್ತಾಯಿಸಿ, ಸಾಹಿತಿಗಳು, ಬರಹಗಾರರು ಈಗ ಕನ್ನಡದ ಪರ ನಿಲ್ಲಬೇಕು. ಕೇವಲ ಶಿವರಾಜ್ ಕುಮಾರ್ ಮಾತ್ರವಲ್ಲ, ಎಲ್ಲಾ ನಟರು ಕನ್ನಡದ ಪರ ನಿಲ್ಲಬೇಕು ಎಂದರು.

ಈ ಬಾರಿ ಆರ್.ಸಿ.ಬಿ ಗೆಲುವಿನ ವಿಚಾರವಾಗಿ ಮಾತನಾಡಿದ ವಾಟಾಳ್ ನಾಗರಾಜ್ ಅವರು ಆರ್‌ಸಿಬಿ ಗೆದ್ದರೆ ನಮಗೆ ಕಿರೀಟ ಸಿಕ್ಕಂತೆ. ಆರ್‌ಸಿಬಿ ಗೆಲ್ಲಬೇಕೆಂಬುದು ಸಮಗ್ರ ಕನ್ನಡಿಗರ ಆಶಯವಾಗಿದೆ. ಈ ಬಾರಿ ಆರ್‌ಸಿಬಿ ಕಪ್ ಗೆಲ್ಲಲಿ ಎಂದು ಶುಭ ಹಾರೈಸುತ್ತೇನೆ ಎಂದರು.

## ಕಮಲಹಾಸನ್ ಭಾವಚಿತ್ರ ಸುಟ್ಟು ಪ್ರತಿಭಟನೆ



ಪದ್ಮಾ ಚಿತ್ರಮಂದಿರದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕನ್ನಡ ವಿರೋಧಿ ಕಮಲಹಾಸನ್ ಎಂದು ಘೋಷಣೆ ಕೂಗಿ, ಭಾವಚಿತ್ರ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು, ಜೂ.2(ಜಿಎ)–ತಮಿಳು ನಟ ಕಮಲ ಹಾಸನ್ ತಮಿಳಿನಿಂದ ಕನ್ನಡ ಹುಟ್ಟಿದೆ ಎಂಬ ಹೇಳಿಕೆ ಖಂಡಿಸಿ ಪಾತಿ ಫೌಂಡೇಶನ್ ಹಾಗೂ ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪದ್ಮಾ ಚಿತ್ರಮಂದಿರದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕನ್ನಡ ವಿರೋಧಿ ಕಮಲಹಾಸನ್ ಎಂದು ಘೋಷಣೆ ಕೂಗಿ, ಭಾವಚಿತ್ರ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ತಮಿಳುನಾಡಿನ ನಟ ಕಮಲ್ ಹಾಸನ್ ನೀಡಿದ ಹೇಳಿಕೆ ಅವಿವೇಕದಿಂದ ಕೂಡಿದ್ದು, ಅವರ ಹೇಳಿಕೆಯನ್ನು ತಕ್ಷಣ ಹಿಂಪಡೆಯಬೇಕು. ಇಲ್ಲದಿದ್ದಲ್ಲಿ ಆತನ ಸಿನಿಮಾಗಳನ್ನು ರಾಜ್ಯದಲ್ಲಿ ಬಿಡುಗಡೆ ಮಾಡಲು ಅವಕಾಶ ನೀಡಬಾರದು ಎಂದು ಒತ್ತಾಯಿಸಿದರು. ಕರ್ನಾಟಕದಿಂದಲೇ ಚಿತ್ರರಂಗ ಜೀವನ ಆರಂಭಿಸಿ ಇಲ್ಲಿಂದಲೇ ಬೆಳೆದು ಹೋಗಿ ಕೊನೆಗೆ ಕನ್ನಡ ಭಾಷೆಯ ಬಗ್ಗೆ ಹೇಳಿಕೆ ನೀಡಿ ರಾಜಕೀಯ ಮಾಡುತ್ತಿರುವ ಕಮಲ ಹಾಸನ್‌ಗೆ ಕನ್ನಡಿಗರು ತಕ್ಕಪಾಠ ಕಲಿಸಲಿದ್ದಾರೆ. ಆತನ ಎಲ್ಲಾ ಸಿನಿಮಾಗಳನ್ನು ಸರ್ಕಾರ ಬಿಡುಗಡೆ ಮಾಡದಂತೆ ನಿಷೇಧಿಸಬೇಕು. ಕನ್ನಡ ವಿರೋಧಿ ಕಮಲಹಾಸನ್ 'ಥಗ್ ಲೈಫ್' ಸಿನಿಮಾ ರಾಜ್ಯದಲ್ಲಿ ಕಡ್ಡಾಯವಾಗಿ ನಿಷೇಧಿಸಬೇಕು. ಇಲ್ಲವಾದಲ್ಲಿ ಪ್ರದರ್ಶನಗೊಳ್ಳುವ ಚಿತ್ರಮಂದಿರಕ್ಕೆ ತೆರಳಿ ಪ್ರತಿಭಟಿಸುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಎಂ.ಡಿ.ಪಾರ್ಥಸಾರಥಿ, ಮಾ.ವಿ. ರಾಮಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಕೆಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ ಜಿ.ರಾಘವೇಂದ್ರ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಎಸ್.ಎನ್.ರಾಜೇಶ್, ಕೃಷ್ಣಪ್ಪ (ಗಂಟಯ್ಯ), ರಾಕೇಶ್, ಮಂಜುನಾಥ್, ರವಿಚಂದ್ರ, ಸುಚೇಂದ್ರ, ಅಭಿ, ಹರೀಶ್ ನಾಯ್ಡು, ಮಹಾದೇವ್, ಬಸವರಾಜ್ ಮತ್ತಿತರರು ಪಾಲ್ಗೊಂಡಿದರು.

## ಹೆಚ್.ವಿ.ರಾಜೀವ್ ಸ್ನೇಹ ಬಳಗದಿಂದ 15 ಸಾವಿರ ಸಸಿ ವಿತರಣೆ

ಮೈಸೂರು, ಜೂ.2(ಜಿಎ)– 'ಹಸಿರು ಮೈಸೂರು–ಲಕ್ಷವೃಕ್ಷ ಆಂದೋಲನ'ಕ್ಕೆ ಪೂರಕವಾಗಿ ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಈ ಬಾರಿಯೂ 15 ಸಾವಿರ ಸಸಿಗಳನ್ನು ನೀಡಲಾಗುತ್ತಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ವಿ. ರಾಜೀವ್ ಸ್ನೇಹ ಬಳಗದ ಆಶ್ರಯದಲ್ಲಿ 2019ರಿಂದ ಮೈಸೂರಿನಲ್ಲಿ ಕೈಗೊಂಡ ಹಸಿರು ಮೈಸೂರು– ಲಕ್ಷವೃಕ್ಷ ಆಂದೋಲನ ಯಶಸ್ವಿಯಾಗಿದ್ದು, ಇದುವರೆಗೆ ನಗರದಾದ್ಯಂತ ಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ. ಈಗ ಮಳೆ ಚೆನ್ನಾಗಿ ಬೀಳುತ್ತಿರುವ ಹಿನ್ನೆಲೆಯಲ್ಲಿ 15 ಸಾವಿರ ಗಿಡಗಳನ್ನು ಆಸಕ್ತರು ಉಚಿತವಾಗಿ ಪಡೆಯಬಹುದಾಗಿದೆ. ಆದರೆ, ಸಸಿ ಪಡೆದುಕೊಂಡವರು ಕಡ್ಡಾಯವಾಗಿ ಮೂರು ವರ್ಷ ನೀರೆರೆದು ಪೋಷಿಸಬೇಕು ಎಂದರು.

15 ಸಾವಿರ ಸಸಿಗಳಲ್ಲಿ ಮಹಾಗನಿ, ಹೊಂಗೆ, ಬೇವು, ನೇರಳೆ, ಹಿಪ್ಪೆ, ಬಿಲ್ವಪತ್ರೆ, ಹಲಸು, ಹತ್ತಿ, ಅರಳಿ, ಆಲ, ಬೆಟ್ಟದನೆಲ್ಲಿ, ಹೊಳೆ ಮತ್ತಿ, ತಪಸಿ, ದಾಳಿಂಬೆ, ಬಸವನಪಾದ, ಬುಗಡಿ, ಶಿವನಿ, ಗೇರು, ಕಾಡು ಬಾದಾಮಿ, ಗೋಣಿ, ಸೀಬೆ, ಸಂಪಿಗೆ, ಕಾಡುಬೆಂಡೆ, ಲಕ್ಷ್ಮಿತರು ಮೊದಲಾದ ಸುಮಾರು 24 ಸಸಿಗಳು ಲಭ್ಯವಿದೆ. ಸಸಿಗಳನ್ನು ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೆ.ಎಸ್.ಶೇಷಪ್ರಸಾದ್, ದೂ. 93530 06616, 97319 57792, ಆರ್.ಸುನೀಲ್, ದೂ. 73536 38002 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

# ಉದ್ಯೋಗ ಖಾತ್ರಿ ನೌಕರರ ಬಾಕಿ ವೇತನಕ್ಕೆ ಒತ್ತಾಯಿಸಿ ಪ್ರತಿಭಟನೆ



ನರೇಗಾ ನೌಕರರ ಕ್ಷೇಮಾಭಿವೃದ್ಧಿ ಜಿಲ್ಲಾ ಸಂಘದಿಂದ ಜಿಪಂ ಸಿಇಓಗೆ ಮನವಿ ಸಲ್ಲಿಸಿದರು.

ಮೈಸೂರು, ಜೂ.2(ಜಿಎ)– ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಏಳು ತಿಂಗಳ ವೇತನ ನೀಡುವಂತೆ ಒತ್ತಾಯಿಸಿ ಜಿಲ್ಲಾ ಪಂಚಾಯಿತಿ ಮುಂಭಾಗ ಸೋಮವಾರ ಶಾಂತಿಯುತ ಪ್ರತಿಭಟನೆ ನಡೆಸಿದರು.

ಉದ್ಯೋಗ ಖಾತ್ರಿಯ ಅನುಷ್ಠಾನಕ್ಕಾಗಿ ದುಡಿಯುತ್ತಿರುವ ನೌಕರರಿಗೆ ಕಳೆದ 2024ರ ನವೆಂಬರ್ ತಿಂಗಳಿಂದ ವೇತನ ಬಿಡುಗಡೆಯಾಗಿರುವುದಿಲ್ಲ. ಈ ಕಾರಣದಿಂದ ಜೀವನ ಹಾಗೂ ಕುಟುಂಬ ನಿರ್ವಹಣೆ ಅತ್ಯಂತ ಕಷ್ಟಕರವಾಗಿದ್ದು, ಕೂಡಲೇ ವೇತನ ಪಾವತಿಸುವಂತೆ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಜಿಲ್ಲಾ ಸಂಘದಿಂದ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವೇತನ ಸ್ಥಗಿತಗೊಂಡಿರುವುದರಿಂದ ನೌಕರರು ಸಾಲ ಮಾಡಿ ಜೀವನ ಸಾಗಿಸುವಂತಾಗಿದೆ. ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಹಂತದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಮಗೆ ವೇತನವಿಲ್ಲದೆ ಬದುಕು ಸಾಗಿಸುವುದು ಕಷ್ಟಕರವಾಗಿದೆ. ಮಕ್ಕಳ ಶಾಲಾ ಪ್ರಾವೇಶಾತಿ ಶುಲ್ಕ, ವಯಸ್ಸಾದ ತಂದೆ–ತಾಯಿಗಳ ಆರೋಗ್ಯ ಸಮಸ್ಯೆಗೆ ಆಸ್ಪತ್ರೆ ವೆಚ್ಚ, ದಿನನಿತ್ಯ ಖರ್ಚುಗಳನ್ನು ನಿಭಾಯಿಸುವುದು ಸವಾಲಾಗಿದೆ ಎಂದು ಸಿಇಓ ಎದುರಿಗೆ ತಿಳಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಸಿಇಓ ಎಸ್.ಯುಕೇಶ್ ಕುಮಾರ್ ಅವರಿಗೆ ಜಿಲ್ಲಾ ಮ–ನರೇಗಾ ನೌಕರರ ಸಂಘದಿಂದ ವೇತನ ಪಾವತಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮ–ನರೇಗಾ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಗೌರವಾಧ್ಯಕ್ಷ ಲೋಕೇಶ್ ಸೇರಿದಂತೆ ಜಿಲ್ಲಾ ಪಂಚಾಯಿತಿ ಎಡಿಪಿಸಿ, ಐಇಸಿ ಸಂಯೋಜಕರು, ತಾಂತ್ರಿಕ ಸಂಯೋಜಕರು, ಎಂಐಎಸ್ ಸಂಯೋಜಕರು, ತಾಂತ್ರಿಕ ಸಹಾಯಕ ಅಭಿಯಂತರು, ಲೆಕ್ಕ ಸಹಾಯಕರು, ಬಿ.ಎಫ್.ಟಿ, ಗ್ರಾಮ ಕಾಯಕ ಮಿತ್ರರು, ಕಂಪ್ಯೂಟರ್ ಆಪರೇಟರ್ ಸೇರಿದಂತೆ ಪಾಲ್ಗೊಂಡಿದರು.

## ನಾಳೆ ನಾಲ್ವಡಿ ಕೃಷ್ಣರಾಜ ಒಡೆಯರ್ ವರ್ಧಂತ್ಯುತ್ಸವ



ಮೈಸೂರು, ಜೂ.2(ಜಿಎ)–ಮೈಸೂರು ಅರಸು ಮಂಡಳಿ ವತಿಯಿಂದ ಜೂ.4 ರಂದು ಬೆಳಗ್ಗೆ 9ಗಂಟೆಗೆ ಮಂಡಳಿ ಆವರಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ 141 ನೇ ವರ್ಧಂತ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಕೆ. ಮನೋಜ್ ರಾಜ್ ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್. ಶ್ರೀವತ್ಸ, ಯು.ಜಿ.ಗೋಪಾಲ್ ರಾಜೇ ಅರಸ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಈ ವೇಳೆ ತ್ಯಾಗರಾಜ ರಸ್ತೆಯಲ್ಲಿರುವ ಅರಸು ಮಂಡಳಿಯ ಕಚೇರಿಯಿಂದ ನಾಲ್ವಡಿ ಅವರು ನಾಡಿಗೆ ನೀಡಿರುವ ಕೊಡುಗೆಗಳ ವರ್ಣಚಿತ್ರ, ಸ್ತಬ್ಧಚಿತ್ರ ಕೆ.ಆರ್.ವೃತ್ತಕ್ಕೆ ಮೆರವಣಿಗೆ ಹೊರಡಲಿದೆ. ಇದಕ್ಕೂ ಮೊದಲು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಬಳಿಯಿಂದ ಜಿಲ್ಲಾಡಳಿತ ಆಚರಣೆಯ ಮೆರವಣಿಗೆ ಹೊರಟು ಕೆಆರ್.ವೃತ್ತ ತಲುಪಲಿದೆ. ಬಳಿಕ ಈ ಎರಡೂ ಮೆರವಣಿಗೆ ಕಲಾಮಂದಿರ ತಲುಪಿ ಅಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಕೆ.ಆರ್.ವೃತ್ತದಲ್ಲಿನ ಪ್ರತಿಮೆ ಮೇಲೆ ವ್ಯಕ್ತಿಯೊಬ್ಬ ಏರಿ ಅಪಮಾನಿಸಿದ್ದ ಘಟನೆ ಕುರಿತು, ದೇವರಾಜ ಠಾಣೆಗೆ ದೂರು ನೀಡಲಾಗಿದೆ. ಆತ ಮಾನಸಿಕ ಅಸ್ವಸ್ಥ ಹಾಗೂ ಮದ್ಯದ ಅಮಲಿನಲ್ಲಿ ಈ ಕೃತ್ಯ ಎಸಗಿರುವುದು ತಿಳಿದುಬಂದಿದೆ. ಹೀಗಾಗಿ ನಗರದಲ್ಲಿನ ಮೂವರೂ ಒಡೆಯರ್ ಅವರ ಪ್ರತಿಮೆಗಳಿಗೆ ಭದ್ರತೆ ಒದಗಿಸುವಂತೆ ಪೊಲೀಸರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶ್ರೀಕಾಂತ್ ಅರಸ್, ಸುಚಿತಾ, ಗೋಪಿ ಅರಸ್, ಶರತ್‌ರಾಜೇ ಅರಸ್ ಉಪಸ್ಥಿತರಿದ್ದರು.

## ಜೂ.13ರಿಂದ ಶಾಲೆ ತೊರೆದು ಪ್ರತಿಭಟನೆ ನಡೆಸಲು ಅತಿಥಿ ಶಿಕ್ಷಕರ ನಿರ್ಧಾರ

ಮೈಸೂರು, ಜೂ.2(ಜಿಎ)–ಅತಿಥಿ ಶಿಕ್ಷಕರ ವಿವಿಧ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಜೂ. 13 ರಿಂದ ಶಾಲೆಯನ್ನು ತೊರೆದು ಪ್ರತಿಭಟಿಸಲು ನಿರ್ಧರಿಸಿದ್ದಾರೆ.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ಖಜಾಂಚಿ ಎಚ್.ಎಸ್. ಸೌಮ್ಯ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ರಾಜ್ಯ ಸರ್ಕಾರ ಕಳೆದ 13 ವರ್ಷಗಳಿಂದ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಕನಿಷ್ಠ ಸೌಲಭ್ಯವನ್ನೂ ನೀಡದೇ ವಂಚಿಸಲಾಗುತ್ತಿದೆ ಎಂದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಇವರು ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ವಿವಿಧ ಬೇಡಿಕೆ ಈಡೇರಿಕೆಗಾಗಿ ಈಗಾಗಲೇ ಸಾಕಷ್ಟು ಹೋರಾಟ ನಡೆಸಿ, ಸರ್ಕಾರದ ಗಮನವನ್ನೂ ಸೆಳೆಯಲಾಗಿದೆ. ಆದರೂ ಪ್ರಮುಖ ಬೇಡಿಕೆಗಳಿಗೆ ಮನ್ನಣೆ ಸಿಕ್ಕಿಲ್ಲ ಎಂದು ಬೇಸರಿಸಿದರು.

ಅನಿವಾರ್ಯವಾಗಿ ಹೋರಾಟ ನಡೆಸುತ್ತಿದ್ದು, ಅತಿಥಿ ಶಿಕ್ಷಕರಿಗೆ ಸೇವಾ ಪ್ರಮಾಣಪತ್ರ ಹಾಗೂ ಸೇವಾ ಭದ್ರತೆ ನೀಡಬೇಕು. ಪ್ರಸ್ತುತ ನೀಡುತ್ತಿರುವ 12 ಸಾವಿರ ರೂ. ಗೌರವ ಧನವನ್ನು ಕನಿಷ್ಠ 25 ಸಾವಿರಕ್ಕೆ ಹೆಚ್ಚಿಸಬೇಕು. ಸೇವೆ ಪರಿಗಣಿಸಿ ವಾರ್ಷಿಕ ಶೇ.5 ಕೃಪಾಂಕ ನೀಡಬೇಕು. ಸೇವೆ ಖಾಯಮಾತಿಗೆ ಶೀಘ್ರವೇ ಕ್ರಮ ಕೈಗೊಳ್ಳಬೇಕು ಎಂಬುದು ಸಂಘದ ಬೇಡಿಕೆಗಳಾಗಿವೆ. ಹೀಗಾಗಿ ಅತಿಥಿ ಶಿಕ್ಷಕರು ಶಾಲೆ ತೊರೆಯಬೇಕೆಂಬ ಸಂಘದ ಬೇಡಿಕೆಗೆ ಬೆಂಬಲ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಹೇಶ್‌ಕುಮಾರ್ ಮಂಡ್ಯ, ಪ್ರದೀಪ್‌ಕುಮಾರ್ ಟಿ.ನರಸೀಪುರ, ಶಶಿಕುಮಾರ್ ಕೆ.ಆರ್.ಪೇಟೆ ಉಪಸ್ಥಿತರಿದ್ದರು.

## ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 83ನೇ ವರ್ಧಂತಿ ಹುಟ್ಟುಹಬ್ಬದ ಅಂಗವಾಗಿ

# ಬೃಹತ್ ಶೋಭಾಯಾತ್ರೆಗೆ ಶಾಸಕ ಶ್ರೀವತ್ಸ ಚಾಲನೆ



ದತ್ತಸೇನೆ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಶೋಭಾಯತ್ರೆಯಲ್ಲಿ ನಂದಿಕಂಬಕ್ಕೆ ಪೂಜೆ ಸಲ್ಲಿಸುವ ಮೂಲಕ ಶಾಸಕ ಟಿಎಸ್. ಶ್ರೀವತ್ಸ ಚಾಲನೆ ನೀಡಿದರು.

ಮೈಸೂರು, ಜೂ. 2– ಮೈಸೂರಿನ ಅವಧೂತ ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 83ನೇ ವರ್ಧಂತಿ ಹುಟ್ಟುಹಬ್ಬದ ಅಂಗವಾಗಿ ದತ್ತಸೇನೆ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಶೋಭಾಯಾತ್ರೆಯಲ್ಲಿ ನಂದಿಕಂಬಕ್ಕೆ ಪೂಜೆ ಸಲ್ಲಿಸುವ ಮೂಲಕ ಶಾಸಕ ಟಿ.ಎಸ್. ಶ್ರೀವತ್ಸ ಚಾಲನೆ ನೀಡಿದರು.

ಚಾಮುಂಡಿಪುರಂ ವೃತ್ತದಿಂದ ಜಾನ್ಸಿ ರಾಣಿ ಲಕ್ಷ್ಮೀಬಾಯಿ ರಸ್ತೆ ಮಾರ್ಗವಾಗಿ ಗಣಪತಿ ಸಚ್ಚಿದಾನಂದ ಆಶ್ರಮದ ವರೆಗೂ ಸಾಗಿದ ಶೋಭಾಯಾತ್ರೆಯಲ್ಲಿ ನಾದಸ್ವರ, ಮಂಗಳವಾದ್ಯ, ವೇದಬಳಗ, ನಂದಿಧ್ವಜ, ಚಂಡೆ ವಾದ್ಯ, ವೀರಗಾಸೆ, ಮಹಿಳಾ ಭಜನಾ ಮಂಡಳಿ, ಗಣಪತಿ ಸ್ವಾಮೀಜಿಯ ಸಾರೋಟು, ವೆಂಕಟೇಶ್ವರ ಮೂರ್ತಿ ಸಾಗಿದವು.

ಭಕ್ತರು ಜಯಗುರುದತ್ತ ಶ್ರೀಗುರುದತ್ತ ಜೈಕಾರದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಶಾಸಕ ಟಿಎಸ್. ಶ್ರೀವತ್ಸ ಮಾತನಾಡಿ, ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಮೈಸೂರಿಗೆ ಆಧ್ಯಾತ್ಮಿಕ, ಧಾರ್ಮಿಕ, ಸಮಾಜಮುಖಿ ಜೊತೆಯಲ್ಲೇ ಸಾಂಸ್ಕೃತಿಕವಾಗಿ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ. ಭಜನೆಯಿಂದ ಮನಸ್ಸನ್ನು ನಿಗ್ರಹಿಸಿ ಸಾಧನೆಯತ್ತ ಜೀವನ ಸಾಗಿಸಬಹುದು. ದೇಹವನ್ನು ವೈಜ್ಞಾನಿಕವಾಗಿ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸಂದೇಶ ಸಾರಿದ್ದಾರೆ. ಕಾರ್ಯ ಆಂಜನೇಯನ ಸನ್ನಿಧಿಯನ್ನು ವಿದೇಶದಲ್ಲೂ ಸ್ಥಾಪಿಸಿ ವಿದೇಶಿಗರು ಕೂಡ ಹನುಮಾನ್ ಚಾಲೀಸ ಮತ್ತು ಭಗವದ್ಗೀತೆ ಪಠಣ ಮಾಡಲು ಗಣಪತಿ ಸ್ವಾಮೀಜಿ ಪ್ರೇರಣೆಯಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಪ್ರತಿದಿನ ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ವೈದ್ಯಕೀಯ ನೆರವು, ಅನ್ನ ದಾಸೋಹ ನೆರವನ್ನು ನೀಡಿದ್ದನ್ನು ಸ್ಮರಿಸಿದರು.

ಹಿರಿಯ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎನ್.ಎಂ ನವೀನ್ ಕುಮಾರ್, ದತ್ತಸೇನೆಯ ಅಧ್ಯಕ್ಷ ಆರ್. ಎಸ್ ಸತ್ಯನಾರಾಯಣ, ಬ್ರಾಹ್ಮಣ ಮಹಾಸಭಾ ಮೈಸೂರು ಪ್ರತಿನಿಧಿ ಲಕ್ಷ್ಮೀದೇವಿ, ಮಾಜಿ ನಗರ ಪಾಲಿಕೆ ಸದಸ್ಯರಾದ ಮಾ.ವಿ. ರಾಂಪ್ರಸಾದ್, ಎಂಡಿ ಪಾರ್ಥಸಾರಥಿ, ಸೌಭಾಗ್ಯಮೂರ್ತಿ, ಕೇಬಲ್ ಮಹೇಶ್, ಬಿಜೆಪಿ ಕೆಆರ್ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಹಿಂದುಳಿದ ವರ್ಗದ ಮುಖಂಡ ಜೋಗಿ ಮಂಜು, ಆಧ್ಯಾತ್ಮಿಕ ಚಿಂತಕ ಸುರೇಶ್ ರುಗ್ವೇದಿ, ಸಪ್ತರ್ಷಿ ಬ್ಯಾಂಕ್ ನಿರ್ದೇಶಕ ರಾಜಕುಮಾರ್, ಬಸವಬಳಗ ಅಧ್ಯಕ್ಷ ಸಿ. ಸಂದೀಪ್, ಪತ್ರಕರ್ತ ಅನಿಲ್ ಕುಮಾರ್, ನಿರೂಪಕ ಅಜಯ್ ಶಾಸ್ತ್ರಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಬಿವಿ ಗಧಾದರ್, ಕೆಆರ್ ಬ್ಯಾಂಕ್ ನಿರ್ದೇಶಕ ಹೆಚ್. ವಿ ಭಾಸ್ಕರ್, ಬಿಜೆಪಿ ಯುವ ಅಧ್ಯಕ್ಷ ರಾಕೇಶ್ ಗೌಡ, ಶ್ರೀಕಾಂತ್ ಕಶ್ಯಪ್, ವಾಸುದೇವ ಮೂರ್ತಿ, ರಾಮಾನುಜ ಸಂಘದ ಟಿಎಸ್. ಅರುಣ್, ವಿವೇಕಾನಂದ ಬ್ರಾಹ್ಮಣ ಸಂಘದ ಮಂಜುನಾಥ್, ಸುನೀಲ್, ಕೆಆರ್ ಎಸ್ ವಿಜಯಕುಮಾರ್, ಗುರುರಾಜ್, ಮಿರ್ಲೆ ಪಣೀಶ್, ಪ್ರವೀಣ್ ಕುಮಾರ್, ಹೊಯ್ಸಳ ಪಳನಿ, ಮಧುಸೂದನ್, ಮುರಳಿ, ಜಗದೀಶ್, ಹೊಮ್ಮ ಮಂಜುನಾಥ್, ಕಂಸಾಳೆ ರವಿ ಮತ್ತಿತರರು ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಭೈರವಂ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಏಸ್ (ತ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ರೆಟ್ರೋ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಹಿಟ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಟಕೀಲಾ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಜಿನ್ನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಮಂಡ್ಯ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಠಾಣೆ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 3 | ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ. |
| ಸ್ಕ್ರೀನ್ 4 | ಪಪ್ಪಿ (ಕ): ಬೆ10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ. |
| ಸ್ಕ್ರೀನ್ 3 | ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಹೆಚ್.ಎಸ್. ವೆಂಕಟೇಶ್‌ಮೂರ್ತಿ ಅವರಿಗೆ ಶ್ರದ್ಧಾಂಜಲಿ, ಗೀತ ನಮನ



ಡಾ.ಹೆಚ್ ಎಸ್ ವೆಂಕಟೇಶ ಮೂರ್ತಿ ಅವರ ಶ್ರದ್ಧಾಂಜಲಿ ಹಾಗೂ ನುಡಿ ನಮನ ಕಾರ್ಯಕ್ರಮ ನಡೆಯಿತು.

ಮೈಸೂರು, ಜೂ. 2– ಕಲಾವಿದನೊಬ್ಬ ತನ್ನ ಕಲಾಕೃತಿಯಿಂದ ಕಾಲಾತೀತನಾದಂತೆಯೇ, ಕವಿಯೊಬ್ಬ ತನ್ನ ಕಾವ್ಯದಿಂದ ಕಾಲಾತೀತನಾಗುತ್ತಾನೆ. ಅಂತೆಯೇ ಎಚ್‌ಎಸ್‌ವಿಯವರು ತಮ್ಮ ಸಾವಿಲ್ಲದ ಸಾಹಿತ್ಯದಿಂದ ಅದರಲ್ಲೂ ಜೀವತೇವದಿಂದುದಿಸಿದ ಅವರ ಭಾವಗೀತೆಗಳಿಂದ ಅಂದರೆ ಕಾವ್ಯದ ಮೂಲಕ ಕಾಲಾತೀತರಾಗಿದ್ದು, ಕನ್ನಡ ಇರುವವರೆಗೂ ಅವರ ಅಮರ ಗೀತೆಗಳೊಂದಿಗೆ ಅವರೂ ಅಮರರಾಗಿರಲಿದ್ದಾರೆ. ಅವರಿಗೆಂದೂ ಸಾವಿಲ್ಲ, ಅವರ ಅಮೃತ ಸಾಹಿತ್ಯದೊಂದಿಗೆ ಅವರು ಅಕ್ಷರಶಃ ಅಮರರು ಎಂದು ಕವಿ ಡಾ. ಜಯಪ್ಪ ಹೊನ್ನಾಳಿ ಅಭಿಪ್ರಾಯಪಟ್ಟರು.

ಕರ್ನಾಟಕ ಸುಗಮಸಂಗೀತ ಪರಿಷತ್ತು, ಮೈಸೂರು ಜಿಲ್ಲಾ ಘಟಕ ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ಏರ್ಪಡಿಸಿದ್ದ ಡಾ.ಹೆಚ್ ಎಸ್ ವೆಂಕಟೇಶ ಮೂರ್ತಿ ಅವರ ಶ್ರದ್ಧಾಂಜಲಿ ಹಾಗೂ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾಜ ಸೇವಕರಾದ ರಘುರಾಮ ವಾಜಪೇಯಿ ಮಾತನಾಡಿ, ಎಚ್‌ಎಸ್‌ವಿ ಅವರು ಅನುಭಾವದ ಉತ್ತುಂಗದಲ್ಲಿದ್ದ ಕವಿ, ಅವರೆಲ್ಲಾ ಗೀತೆಗಳಲ್ಲೂ ಸೂಕ್ಷ್ಮವಾದ ಅಧ್ಯಾತ್ಮಿಕ ಎಳೆಗಳಿರುವುದನ್ನು ಗಮನಿಸಬಹುದು. ಅವರ ಹಾಡುಗಳನ್ನು ಹಾಡುವ ಮೂಲಕ ಅವರಿಗಿಂದು ಶ್ರದ್ಧಾಂಜಲಿ ಸಲ್ಲಿಸುತ್ತಿರುವುದು ತುಂಬಾ ಅರ್ಥಪೂರ್ಣ. ಅವರಿಗೆ ಪರಮಾತ್ಮ ಚಿರಶಾಂತಿ ದಯಪಾಲಿಸಲಿ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜ ಬೈರಿ ಅಧ್ಯಕ್ಷತೆ ವಹಿಸಿದ್ದರು. ಕವಿಗಳಾದ ಬಿ ಆರ್ ಲಕ್ಷ್ಮಣರಾವ್, ಡಾ.ಜಯಪ್ಪ ಹೊನ್ನಾಳಿ, ಯೋಗ ಒಕ್ಕೂಟದ ಅಧ್ಯಕ್ಷರು ದೇವರಾಜು, ಡಾ. ಎಸ್. ವೆಂಕಟೇಶ್, ಎನ್.ಬೆಟ್ಟೇಗೌಡರು, ಗಂಗಾಧರಪ್ಪ, ಸಿರಿಬಾಲು, ನಿತ್ಯಾನಂದ ಕಾಮತ್, ಎಚ್ಚೆಸ್ವಿ ಒಡನಾಡಿ ಅಮರನಾಥ್ ಮತ್ತಿತರರು ಉಪಸ್ಥಿತರಿದ್ದರು.

# ಪ್ರಾಣ ಕೊಡುವ ಸೈನಿಕರು, ಅನ್ನ ನೀಡುವ ರೈತರಿಗೆ ಆದ್ಯತೆ ನೀಡೋಣ

## ಕ್ರಿಕೆಟ್ ಅನ್ನು ಬರೀ ಒಂದು ಕ್ರೀಡೆಯಾಗಷ್ಟೇ ನೋಡಬೇಕು: ಸಿ.ಟಿ.ರವಿ



ಮೈಸೂರು, ಜೂ. 2(ಆರ್‌ಕೆ)–ನಾವು ದೇಶಕ್ಕಾಗಿ ಪ್ರಾಣ ಕೊಡುವ ಸೈನಿಕರು, ಜನರಿಗೆ ಅನ್ನ ನೀಡುವ ರೈತರಿಗೆ ಆದ್ಯತೆ ನೀಡಬೇಕು. ಕ್ರಿಕೆಟ್ ಅನ್ನು ಒಂದು ಕ್ರೀಡೆಯಾಗಷ್ಟೇ ನೋಡೋಣ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಆರ್‌ಸಿಬಿಯಲ್ಲಿ ಎಷ್ಟು ಮಂದಿ ಕನ್ನಡಿಗರಿದ್ದಾರೆ. ಕಾಸು ಕೊಟ್ಟರೆ ಯಾವ ತಂಡಕ್ಕಾದರೂ ಆಡುತ್ತಾರೆ. ನಮ್ಮ ಸೈನಿಕರಿಗೆ ಇಷ್ಟೊಂದು ಪ್ರಚಾರ ಸಿಗುತ್ತದೆಯೇ, ಅಭಿಮಾನಿಗಳಿರುತ್ತಾರೆಯೇ ಎಂದು ಪ್ರಶ್ನಿಸಿದರು.

ಐಪಿಎಲ್‌ನಲ್ಲಿ ಆಟಗಾರರನ್ನು ಹಣದ ಮೇಲೆ ಆಯ್ಕೆ ಮಾಡಿ ಟೀಂ ಮಾಡಲಾಗುತ್ತದೆ. ಈ ಹಿಂದೆ ರಣಜಿ ಪಂದ್ಯಾವಳಿ ಎಂದರೆ ರಾಜ್ಯಗಳ ನಡುವೆ ಪಂದ್ಯಗಳು ನಡೆಯುತ್ತಿದ್ದವು. ಆಟಗಾರರು ಆಯಾ ರಾಜ್ಯಗಳನ್ನು ಪ್ರತಿನಿಧಿಸುತ್ತಿದ್ದರು. ಟೆಸ್ಟ್ ಮತ್ತು ಏಕದಿನ ಮ್ಯಾಚ್‌ಗಳು ದೇಶವನ್ನು ಪ್ರತಿನಿಧಿಸುತ್ತಿದ್ದವು. ಐಪಿಎಲ್‌ಗಳು ಕಾಕ್‌ಟೇಲ್ ಇದ್ದ ಹಾಗೆ. ಯಾರು ಹೆಚ್ಚು ದುಡ್ಡು ಕೊಡುತ್ತಾರೋ ಅವರು ಒಂದು ತಂಡದ ಪರವಾಗಿ ಆಡುತ್ತಾರೆ ಎಂದರು.

ಹಣಕ್ಕಾಗಿ ಹರಾಜು ಮಾಡುತ್ತಾರೆ. ಓಪನ್ ಆಗಿ ಹರಾಜು ಕೂಗಿ ಆಟಗಾರರನ್ನು ಖರೀದಿ ಮಾಡುತ್ತಾರೆ. ಅಲ್ಲಿ ಯಾವ ರಾಷ್ಟ್ರೀಯವಾದವೂ ಇರುವುದಿಲ್ಲ. ಇವತ್ತು ನೀವು ಯಾರನ್ನು ಆರ್‌ಸಿಬಿ ಎಂದು ಕರೆಯುತ್ತೀರೋ ಅವರು ಹಣ ಕೊಟ್ಟರೆ ಜೆಸಿಬಿ ಕಡೆ ಹೋಗಿರುತ್ತಾರೆ ಎಂದು ರವಿ ಅಸಮಾಧಾನ ವ್ಯಕ್ತಪಡಿಸಿದರು.

ಮಾಡುವ ಕೆಲಸ ಬೇಕಾದಷ್ಟಿದೆ. ಈ ದೇಶದಲ್ಲಿ ಹೆಚ್ಚು ಬೆಲೆ ಸಿಗಬೇಕಿರುವುದು ದೇಶ ಕಾಯುವ ಸೈನಿಕರು, ಅನ್ನ ನೀಡುವ ರೈತರಿಗೆ. ಕ್ರಿಕೆಟ್ ಅನ್ನು ಕೇವಲ ಒಂದು ಕ್ರೀಡೆಯಾಗಷ್ಟೇ ನೋಡೋಣ, ವಿಶೇಷ ಆದ್ಯತೆ ಅನಗತ್ಯ ಎಂದು ನುಡಿದರು.

ಹೇಮಾವತಿ ಸಂಪರ್ಕ ನಾಲೆ ವಿರುದ್ಧ ಹೋರಾಡುತ್ತಿದ್ದವರ ಮೇಲೆ ಎಫ್‌ಐಆರ್ ದಾಖಲಿಸಿರುವುದು ಖಂಡನೀಯ. ಜನರು, ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ಪಡೆದು ಯೋಜನೆ ಮಾಡಬೇಕಿತ್ತು. ಪ್ರತಿಭಟನೆ ಮಾಡಿದವರ ಮೇಲೆಯೇ ದೌರ್ಜನ್ಯ ಮಾಡುವುದು ಸರ್ವಾಧಿಕಾರಿ ಧೋರಣೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಕೆಪಿಎಸ್ಸಿ ಸಮಸ್ಯೆ ಬಗ್ಗೆ ಮಾತನಾಡಿದ ರವಿ, ಈ ಸರ್ಕಾರ ಸತ್ತು ಹೋಗಿದೆ. ದಿನಗಣನೆ ಆರಂಭವಾಗಿದೆ. ಮಂಗಳೂರು ಗಲಭೆಗೆ ಬಿಜೆಪಿ, ಆರ್‌ಎಸ್‌ಎಸ್ ಕಾರಣ ಎಂದು ಆರೋಪ ಮಾಡುತ್ತಾರೆ, ಸುಹಾಸ್ ಶೆಟ್ಟಿ, ಮಡಿವಾಳ ಪ್ರವೀಣ್ ನೆಟ್ಟಾರು ಹತ್ಯೆಗೆ ಆರ್‌ಎಸ್‌ಎಸ್ ಕಾರಣವೇ ಎಂದು ಪ್ರಶ್ನಿಸಿದರು. ಅಲ್ಪಸಂಖ್ಯಾತರ ಇಲಾಖೆ ಗೋಲ್ ಮಾಲ್ ಬಗ್ಗೆ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ವಹಿಸಬೇಕು ಎಂದ ಅವರು, ಈ ಸರ್ಕಾರ ಮುಡಾ, ವಾಲ್ಮೀಕಿ ನಿಗಮವನ್ನು ಬಹಳ ಲಘುವಾಗಿ ಪರಿಗಣಿಸಿದೆ ಎಂದರು. ಕಮಲ ಹಾಸನ್ ಭಾಷಾ ತಜ್ಞರಲ್ಲ, ಅರೆಬರೆ ತಿಳುವಳಿಕೆಯಿಂದ ಮಾತನಾಡಿದ್ದಾರೆ. ತಮಿಳಿನಿಂದ ಕನ್ನಡ ಬಂದಿದೆ ಎಂದರೆ ಕಮಲ್ ಅಜ್ಞಾನಿ ಎನ್ನಬಹುದು ಎಂದು ಕಿಡಿಕಾರಿದರು.

## ಪ್ರೋತ್ಸಾಹಧನಕ್ಕೆ ಅರ್ಜಿ ಅವಧಿ ವಿಸ್ತರಣೆ

**ಮೈಸೂರು:** ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿಗಳಿಗೆ 2024–25ನೇ ಸಾಲಿಗೆ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಜೂ.13ರವರೆಗೆ ವಿಸ್ತರಿಸಲಾಗಿದೆ. ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಉತ್ತೇಜಿಸಲು ಹಾಗೂ ಸದರಿ ಕಾರ್ಯಕ್ರಮದಡಿ ಪ್ರಯೋಜನ ಪಡೆಯಲು ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿಗಳು ವೆಬ್‌ಸೈಟ್ twd.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಡಾ. ಬಾಬು ಜಗಜೀವನ್ ರಾಮ್ ಭವನ, ಆದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆ, ಪಡುವಾರಹಳ್ಳಿ ಮೈಸೂರು ರವರಿಂದ ಪಡೆಯಬಹುದು ಹಾಗೂ ದೂ.ಸಂ:08212427140/ 9591122826 ನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಕಿರಣ್‌ಗೆ ಪಿಹೆಚ್.ಡಿ



**ಮೈಸೂರು:** ಡಾ.ಎಸ್.ಟಿ. ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಡಿ.ಕಿರಣ್ ಗಾಂಧಿ ಅಧ್ಯಯನ ವಿಷಯದಲ್ಲಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



### ಹಾಲು ತುಪ್ಪ ಮತ್ತು ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



**ಶ್ರೀ ಬಿ.ಎಲ್.ರಾಮಲಿಂಗೇಗೌಡರು**

ಇವರು ದಿ:24.05.2025 ಶನಿವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಹಾಲುತುಪ್ಪ ಮತ್ತು ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 03.06.2025 ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಯರಗನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಶ್ರೀ ಲೇಟ್ ಸಿದ್ದೇಗೌಡರು, ಪತ್ನಿ ಶ್ರೀಮತಿ ರಾಜೇಶ್ವರಿ, ಅಭಿಷೇಕ್.ಎಸ್, ಶ್ರೀಮತಿ ಸ್ಫೂರ್ತಿ ಮತ್ತು ಶ್ರೀ ಅನಿಲ್ ವೈ.ಪಿ.ಅಕ್ಕ ತಂಗಿಯರು, ಭಾವಂದಿರು, ಕುಟುಂಬವರ್ಗದವರು, ಬನ್ನೂರು ಮತ್ತು ಯರಗನಹಳ್ಳಿ ಗ್ರಾಮಸ್ಥರು.

### 5ನೇ ವರ್ಷದ ಸವಿನೆನಪು



**ಶ್ರೀಮತಿ ಪಾರ್ವತಿ**

ನೀವು ಇಂದಿಗೆ ನಮ್ಮನ್ನು ಅಗಲಿ 5 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ದುಃಖತಪ್ತರು: ಪತಿ ಮರಿಸ್ವಾಮಿ, ಮಕ್ಕಳು, ಸೊಸೆ, ಅಳಿಯಂದಿರು ಮತ್ತು ಕುಟುಂಬವರ್ಗದವರು, ಜಯನಗರ, ಮೈಸೂರು



### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಏಳು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರಿ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಏಳು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಚಂದ್ರಬೀಡು ಗ್ರಾಮದ 3–30 ಗುಂಟೆ ಜಮೀನಿನ ಪೈಕಿ 0–24 ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂಬರ್ 9/9 (ಹಳೆ ಸರ್ವೆ ನಂಬರ್ 9/3) ರ ಜಮೀನಿಗೆ ಚಕ್ಕುಬಂದಿ:

ಪೂರ್ವಕ್ಕೆ: ಬ್ಲಾಕ್ ನಂಬರ್ 1 (ಇದೇ ನಂಬರ್ ಪೈಕಿ ಉಳಿಕೆ ಜಮೀನು ಹಾಗೂ ಕ್ಯಾತನಹಳ್ಳಿ ಮಹದೇವಪ್ಪ ರವರ ಜಮೀನು)

ಪಶ್ಚಿಮಕ್ಕೆ: ಲಾ.ಹಿ.ನಂಬರ್ 2 (ಪಟೇಲ್ ನಾಗರಾಜು ರವರ ಜಮೀನು)

ಉತ್ತರಕ್ಕೆ: ಬ್ಲಾಕ್ ನಂಬರ್ 1 (ಇದೇ ನಂಬರ್ ಪೈಕಿ ಉಳಿಕೆ ಜಮೀನು)

ದಕ್ಷಿಣಕ್ಕೆ: ಊರಿಗೆ ಹೋಗುವ ರಸ್ತೆ (ತಿರುಗಾಡುವ ರಸ್ತೆ).

Sd/- A.V. Jayarama Rao, Advocate, No. 1230/A, 2nd Cross, (Behind Krishnamurthypuram Ramamandira), Chamaraja Mohalla, Mysore-570 004.

Date: 30-5-2025

### NOTICE

General Publics are hereby notified that she married one with S. Raju out of the said wedlock a male baby was born on 26-06-2008 and he was known and called as R. Prajwal

I submit on oath that, unfortunately the said my son was absconding and regarding the same I have also lodged, the complaint in the Udayagiri police station on 10.04.2016. Later on with the help of police my son was traced out. By that time he was with a muslim family who in turn given the name my son as Mohammed Rizwan. That was shocking to see that they have also obtained Aadhar card to that effect.

I submit on oath that, in the Aadhar card of my son it is shown as R. Prajwal and when he was with the Mohammedon family they have also obtained Aadhar card in the name Mohammed Rizwan. Now after getting the custody to our family he is known and called as R. Prajwal and as such I'm causing this public notice.

Hence, if any person/s having any manner of objections are requested to intimate the same to the below mentioned advocate in writing within 7 days from the date of publication of this notice.

Sd/- R.S. Anand, M.A., LL.B., KAR-1669/1998, Advocate, Office: Devaraja Market Building, Sayyaji Rao Road, Mysore-570 001. Mob: 9739657037

Date: 2-6-2025



### ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು